# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಅಕ್ಟೋಬರ್, ೨೦೨೧ | ಸಂಪಾದಕ : ಡಿ. ಎಸ್. ನಾಗಭೂಷಣ | ಸಂಪುಟ: ೧೦ ಸಂಚಿಕೆ: ೯

ಚಂದಾ ರೂ. ೨೦೦/– (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/– ಪುಟ: ೨೦ ಬೆಲೆ: ರೂ. ೨೫/–

ವಿಳಾಸ: ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

ದೂ: ೦೮೧೮೨–೨೯೫೩೧೨ ಸಂಚಾರಿ: ೯೪೪೮೨ ೪೨೨೮೪ *ಈ ಮೇಲ್:* dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

, ಪ್ರಿಯ ಓದುಗರೇ,

ಜಗತ್ತಿನಲ್ಲಿ ಇಂದು ಎರಡನೇ ಶೀತಲ ಸಮರ ಆರಂಭವಾಗುವಂತೆ ಕಾಣುತ್ತಿದೆ, ಈ ಹಿಂದಿನ ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವಣ ಶೀತಲ ಸಮರ ನಾಲ್ಕು ದಶಕಗಳ ಹಿಂದೆ ಸೋವಿಯತ್ ಒಕ್ಕೂಟ ವಿಘಟನೆಯಾಗುವುದರೊಂದಿಗೆ ಮುಕ್ತಾಯವಾಗಿದ್ದರೆ ಈಗ ಅದು ಅಮೆರಿಕಾ ಮತ್ತು ಚೀನಾಗಳ ನಡುವೆ ಆರಂಭವಾಗುವ ಎಲ್ಲ ಸೂಚನೆಗಳು ಕಾಣುತ್ತಿವೆ. ಈ ಸಮರ ಇನ್ನೂ ಶೀತಲೀಕರಣದ ಘಟ್ಟ ಮುಟ್ಟದೆ ಬಿಸಿ ಹಬೆಯ ಘಟ್ಟದಲ್ಲೇ ಇದೆ. ಚೀನಾ ಈಗ ಮಿಲಿಟರಿ ಶಕ್ತಿ ಮತ್ತು ವ್ಯಾಪಾರೋದ್ಯಮ ಈ ಎರಡು ದೃಷ್ಟಿಯಿಂದಲೂ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ಮೂಡಿ ಕಳೆದ ನಲವತ್ತು ವರ್ಷಗಳಿಂದ ಇದ್ದ ಅಮೆರಿಕಾದ ಪಾರಮ್ಯಕ್ಕೆ ಸವಾಲಾಗಿ ಬೆಳೆದಿದೆ. ಅದು ಒಂದು ಕಡೆ ಪಾಕಿಸ್ತಾನದ ಮೂಲಕ ಅರಬ್ಬೀ ಸಮುದ್ರದ ಪ್ರಮುಖ ಬಂದರುಗಳ ಗುಂಟ ಮಧ್ಯ ಪ್ರಾಚ್ಯದವರೆಗೆ ವ್ಯಾಪಾರಿ ಹೆದ್ದಾರಿಯೊಂದನ್ನು ನಿರ್ಮಿಸುತ್ತಾ ಇನ್ನೊಂದು ಕಡೆ ದಕ್ಷಿಣ ಚೀನಾ ಸಮುದ್ರದಲ್ಲೂ ತನ್ನ ನೌಕಾ ಬಲದ ಪ್ರದರ್ಶನ ನಡೆಸುತ್ತಾ ಅಮೆರಿಕಾದ ಮಿತ್ರ ಕೂಟದ ರಾಷ್ಟ್ರಗಳಲ್ಲಿ ಆತಂಕವನ್ನುಂಟು ಮಾಡಿದೆ. ಜೊತೆಗೆ ಭಾರತದೊಡನೆಯ ಗಡಿಯ ಎರಡು ಕಡೆ ಸೇನಾ ಕಾರ್ಯಾಚರಣೆ ನಡೆಸಿ ಭಾರತಕ್ಕೂ ಆತಂಕ ಉಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಅಮೆರಿಕಾ ಭಾರತವನ್ನೂ ಜೊತೆಗೂಡಿಸಿಕೊಂಡು ಆಸ್ಟ್ರೇಲಿಯಾ ಮತ್ತು ಜಪಾನ್‌ಗಳೊಂದಿಗೆ ಕ್ವಾಡ್(ಕ್ವಾಡ್ರಿಲಾಟೆರಲ್ ಸೆಕ್ಯೂರಿಟಿ ಡೈಲಾಗ್: ನಾಲ್ಕು ರಾಷ್ಟ್ರಗಳ ಭದ್ರತಾ ಸಮಾಲೋಚನಾ ಕೂಟ) ಎಂಬ ವೇದಿಕೆಯನ್ನು ಸ್ಥಾಪಿಸಿದೆ. ಇದು ನ್ಯಾಟೋದಂತೆ ಮಿಲಿಟರಿ ಕೂಟವಾಗಿರದೆ ಹೆಸರೇ ಸೂಚಿಸುವಂತೆ ಒಂದು ಸಮಾಲೋಚನಾ ಕೂಟವಾಗಿದೆ. ಈ ಮಟ್ಟಿಗೆ ಭಾರತ ಈಗ ಜಗತ್ತಿನ ಒಂದು ಶಕ್ತಿ ರಾಷ್ಟ್ರವೆನಿಸಿದೆ.

ಮುಖ್ಯವಾಗಿ ಈ ಕ್ವಾಡ್‌ನ ಸಭೆಗಾಗಿ ಹೋದ ವಾರ ಅಮೆರಿಕಾಗೆ ಹೋಗಿದ್ದ ನಮ್ಮ ಪ್ರಧಾನಿ ಮೋದಿಯವರು ಇದೇ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಮಹಾಸಭೆಯ ಅಧಿವೇಶನದಲ್ಲಿಯೂ ಭಾಷಣ ಮಾಡಿದ್ದಾರೆ. ಈ ಭಾಷಣದಲ್ಲಿ ವ್ಯಕ್ತವಾದಂತೆ ಭಾರತಕ್ಕೀಗ ಆಫ್ಘನಿಸ್ತಾನದಲ್ಲಿನ ಬೆಳವಣಿಗೆಯೇ ತಕ್ಷಣದ ಆತಂಕವಾಗಿದೆ. ತಾಲಿಬಾನಿಗಳು ಪಾಕಿಸ್ತಾನದ ಕುಮ್ಮಕ್ಕಿನಿಂದ ಭಾರತದಲ್ಲಿ, ನಿರ್ದಿಷ್ಟವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯ ಚಟುವಟಿಕೆಗಳನ್ನು ಆರಂಭಿಸಿ ಮುಸ್ಲಿಂ ಮೂಲಭೂತವಾದವನ್ನು ಪ್ರಚೋದಿಸುವ ಸಾಧ್ಯತೆಗಳನ್ನು ಮುನ್ನೋಡಿ ಮೋದಿಯವರು ಈ ಭಾಷಣದಲ್ಲಿ ಪಾಕಿಸ್ತಾನಕ್ಕೆ, ಅದರ ಹೆಸರು ಹೇಳದೆ ಎಚ್ಚರಿಕೆ ನೀಡಿದ್ದಾರೆ. ಆಫ್ಘನಿಸ್ತಾನ ಭೌಗೋಳಿಕವಾಗಿ ಆಯಕಟ್ಟಿನ ಸ್ಥಳದಲ್ಲಿದ್ದು ಭಾರತಕ್ಕೆ ಮಾತ್ರವಲ್ಲ ರಷ್ಯಾ ಮತ್ತು ಚೀನಾ ಸೇರಿದಂತೆ ಈ ಪ್ರದೇಶದ ಮುಸ್ಲಿಂ ಜನಸಂಖ್ಯೆ ಇರುವ ಎಲ್ಲ ನೆರೆಹೊರೆಯ ದೇಶಗಳೂ ಈ ಎಚ್ಚರಿಕೆಯನ್ನು ಮಾನ್ಯ ಮಾಡುವಂತಿದ್ದರೂ, ಆ ಎಲ್ಲ ದೇಶಗಳು ಪಾಕಿಸ್ತಾನದೊಂದಿಗೆ ಒಳ್ಳೆಯ ಸಂಬಂಧಗಳನ್ನೇ ಹೊಂದಿರುವುದರಿಂದ ಅವಕ್ಕೆ ಎಚ್ಚರಿಕೆ ಭಾರತದ ಆತಂಕದ ಸೂಚನೆಯಾಗಷ್ಟೇ ಕೇಳಿರಬಹುದು. ಭಾರತ ಮೋದಿಯವರ ದೊಡ್ಡಣ್ಣನ ವಿದೇಶಾಂಗ ನೀತಿಯಿಂದಾಗಿ ನೆರೆಹೊರೆಯ ಎಲ್ಲ ರಾಷ್ಟ್ರಗಳೊಂದಿಗೆ ಸಂಬಂಧವನ್ನು ಬಿಗುಗೊಳಿಸಿಕೊಂಡಿರುವ ಕಾರಣ ಭಾರತ ಈಗ ವಿಶೇಷ ಎಚ್ಚರದಿಂದಿರಬೇಕಾಗಿದೆ.

ಈ ಎಚ್ಚರ ಕೇವಲ ಹೊರಗಿನದಾಗಿರದೆ ಒಳಗಿನದೂ ಆಗಿರಬೇಕಿದೆ. ಇದನ್ನೇ ಮೋದಿಯವರ ಅಮೆರಿಕಾದ ಪ್ರವಾಸದಲ್ಲಿ ಆ ದೇಶದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ನೇರವಾಗಿಯೂ, ಅಧ್ಯಕ್ಷ ಜೋ ಬೈಡನ್ ಅವರು ಪರೋಕ್ಷವಾಗಿಯೂ ಸೂಚಿಸಿರುವುದು. ಕಮಲಾ ಹ್ಯಾರಿಸ್ ಭಾರತದಲ್ಲಿ ಮಾನವ ಹಕ್ಕುಗಳ ರಕ್ಷಣೆಯ ವಿಷಯ ಹಿನ್ನೆಲೆಗೆ ಸರಿದಿರುವ ಬಗ್ಗೆ ನೇರವಾಗಿಯೇ ಪ್ರಸ್ತಾಪಿಸಿ, ಪರೋಕ್ಷವಾಗಿ ಅಲ್ಪ ಸಂಖ್ಯಾತರ ರಕ್ಷಣೆಯ ವಿಷಯದಲ್ಲಿ ಹಿನ್ನಡೆಯಾಗಿದೆ ಎಂದು ಸೂಚಿಸಿದರೆ ಬೈಡನ್ ಅವರು ಎರಡೂ ದೇಶಗಳ ಪಾರಂಪರಿಕ ಗೆಳೆತನ ಅವುಗಳ ಪ್ರಜಾಸತ್ತಾತ್ಮಕ ಗುಣಗಳನ್ನವಲಂಬಿಸಿ ನಿಂತಿದೆ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ. ಭಾರತ ಪ್ರಜಾಸತ್ತೆಯ ಶ್ರೇಯಾಂಕದಲ್ಲಿ ಜಗತ್ತಿನಲ್ಲಿ ೫೩ನೇ ಸ್ಥಾನಕ್ಕೆ ಇಳಿದಿರುವುದೂ, ಅಮೆರಿಕಾದ ವಿಶ್ವಾಸಾರ್ಹ ಸಮೀಕ್ಷಾ ಸಂಸ್ಥೆ ಫ್ರೀಡಂ ಹೌಸ್ ಭಾರತವನ್ನು ಭಾಗಶಃ ಪ್ರಜಾಸತ್ತೆಯ ದರ್ಜೆಗೆ ಇಳಿಸಿರುವುದೂ ಈ ಇಬ್ಬರ ಮಾತುಗಳ ಹಿಂದೆ ಕೆಲಸ ಮಾಡಿದ್ದರೆ ಆಶ್ಚರ್ಯವಿಲ್ಲ. ಬಹುಶಃ ಈ ಮುಜುಗರವನ್ನು ಮರೆಮಾಚಲೆಂದೇ ಮೋದಿಯವರು ಪ್ರವಾಸ ಮುಗಿಸಿ ಹಿಂದಿರುಗಿದಾಗ ದೆಹಲಿ ವಿಮಾನ ನಿಲ್ದಾಣದಲ್ಲಿ ಹಾಡು ಕುಣಿತ ಮತ್ತು ಜಯಘೋಷಗಳ ವಿಶೇಷ ಸ್ವಾಗತವನ್ನು ಭಾಜಪ ಏರ್ಪಡಿಸಿತ್ತೇನೋ!

ಭಾರತದಲ್ಲಿ ಮೋದಿಯವರ ಜನಪ್ರಿಯತೆಯ ಸೂಚ್ಯಂಕ ಇತ್ತೀಚಿನ 'ಇಂಡಿಯಾ ಟುಡೇ' ಸಮೀಕ್ಷೆ ಪ್ರಕಾರ ಶೇ ೫೦ಕ್ಕಿಂತ ಕಡಿಮೆ ಆಗಿರುವ ಸಂಗತಿ ಮೋದಿಯವರನ್ನೂ, ಅವರ ಪಕ್ಷವನ್ನೂ ಧೃತಿಗೆಡಿಸಿದಂತಿದೆ. ಇತ್ತೀಚೆಗೆ ಮೋದಿಯವರ ೭೧ನೇ ಹುಟ್ಟುಹಬ್ಬವನ್ನು ಹಲವೆಡೆ ಕೋವಿಡ್ ಲಸಿಕೆಗಳ ಅಭಾವದ ವರದಿಗಳ ಮಧ್ಯೆ ಒಂದೇ ದಿನ ೨ ಕೋಟಿಗೂ ಹೆಚ್ಚಿನ ಲಸಿಕೆ ನೀಡಿಕೆ ಮೂಲಕ ವಿಜೃಂಭಣೆಯಿಂದ ಆಚರಿಸಿದ್ದನ್ನು ಈ ಹಿನ್ನೆಲೆಯಿಂದಲೇ ನೋಡಬೇಕು. ಭಾರತವನ್ನು ಸ್ವಾತಂತ್ರ್ಯ ಹೋರಾಟ ರೂಪಿಸಿದ ಉದಾರವಾದಿ ಮೌಲ್ಯಗಳಿಂದ ಬೇರ್ಪಡಿಸಿ ತಾನು ಹಿಂದೂ ಸಂಸ್ಕೃತಿ ಎಂದು ನಂಬಿದದ್ದರ ಮೌಲ್ಯಗಳನುಸಾರ ಪುನರ್‌ರೂಪಿಸುವ ಸಂಘ ಪರಿವಾರದ 'ಕಾಂಗ್ರೆಸ್ ಮುಕ್ತ ಭಾರತ'ದ ರಾಜಕೀಯ ಹೆಸರಿನ ದೀರ್ಘಕಾಲಿಕ ಯೋಜನೆ ಈಗ ಚಾಲ್ತಿಯಲ್ಲಿದೆ. ಮೋದಿ ಜನಪ್ರಿಯತೆಯ ಭಾರಿ ಕುಸಿತ ಬಿಜೆಪಿಯ ನಾಗಾಲೋಟದ ವಿಜಯ ಯಾತ್ರೆಯನ್ನು ಎಲ್ಲಿ ಕೊನೆಗೊಳಿಸಿ ಈ ದೀರ್ಘ ಯೋಜನೆ ಅಪೂರ್ಣವಾಗುವುದೋ ಎಂಬ ಆತಂಕ ಅದರ ಇತ್ತೀಚಿನ ಹಲವು ನಡೆಗಳನ್ನು ನಿರ್ಧರಿಸಿದಂತಿದೆ. ಇತ್ತೀಚಿನ ಪ. ಬಂಗಾಳದ ವಿಧಾನ ಸಭಾ ಚುನಾವಣೆಯಲ್ಲಿನ ಭಾರಿ ಸೋಲು ಮತ್ತು ಆನಂತರ ಭಾಜಪದಿಂದ ಅದರ ಕೆಲ ನಾಯಕರೂ ಸೇರಿದಂತೆ ತೃಣಮೂಲ ಕಾಂಗ್ರೆಸ್ಸಿಗೆ ನಡೆದಿರುವ ಸಾಮೂಹಿಕ ವಲಸೆ ಅದಕ್ಕೆ ಎಚ್ಚರಿಕೆಯ ಘಂಟೆಯಾಗಿಯೂ ಕೇಳಿಸಿರಬಹುದು.

ಹಾಗಾಗಿ ಅದು ಎರಡು ನೆಲೆಗಳ ತನ್ನ ಅತ್ಯುತ್ತಮ ಚುನಾವಣಾ ತಂತ್ರವಾದ ಸಾಮಾಜಿಕ ಇಂಜಿನಿಯರಿಂಗ್ ಅಥವಾ ಜಾತಿ ಲೆಕ್ಕಾಚಾರದ ಓಲೈಕೆ ಮತ್ತು ಮತೀಯ ಧೃವೀಕರಣದ ರಾಜಕಾರಣವನ್ನು ಆರಂಭಿಸಿದೆ. ಪ್ರಧಾನಿ ಮೋದಿಯವರೇ ಇದನ್ನು ಪ್ರತಿ ವರ್ಷ ಪಾಕಿಸ್ತಾನದ ಸ್ವಾತಂತ್ರ್ಯ ದಿನವಾದ ಆಗಸ್ಟ್ ೧೪ರಂದು ರಾಷ್ಟ್ರ ವಿಭಜನೆಯ ನೆನಪಿನಲ್ಲಿ ಕರಾಳ ದಿನವನ್ನಾಗಿ ಆಚರಿಸಲು ಕರೆ ನೀಡುವ ಮೂಲಕ ಆರಂಭಿಸಿದ್ದಾರೆ. ಸಂಘ ಪರಿವಾರದ ಕಣ್ಣು ಈಗ ಮುಖ್ಯವಾಗಿ ಮುಂದಿನ ವರ್ಷ ನಡೆಯಲಿರುವ ಉ. ಪ್ರದೇಶ ವಿಧಾನದಭಾ ಚುನಾವಣೆಯ ಮೇಲಿದೆ. ಏಕೆಂದರೆ ಲೋಕಸಭೆಗೆ ೮೦ ಸದಸ್ಯರನ್ನು ಕಳಿಸುವ ಈ ರಾಜ್ಯದ ರಾಜಕಾರಣ ೨೦೨೪ರ ಲೋಕಸಭಾ ಚುನಾವಣೆಯ ಸ್ವರೂಪಕ್ಕೆ ನಿರ್ಣಾಯಕವಾಗಿದೆ, ಆ ದೃಷ್ಟಿಯಿಂದಲೇ ಇತ್ತೀಚಿನ ಕೇಂದ್ರ ಸಂಪುಟ ಪುನಾರಚನೆಯನ್ನೂ ಮೊನ್ನೆಯ ಆ ರಾಜ್ಯದ ಸಂಪುಟ ವಿಸ್ತರಣೆಯನ್ನೂ ಆ ರಾಜ್ಯದ ಜಾತಿ ಸಮೀಕರಣವನ್ನು ಗಮನದಲ್ಲಿಟ್ಟುಕೊಂಡೇ ನಡೆಸಲಾಗಿದೆ. ಇದರ ಜೊತೆಗೆ ಯೋಗಿ ಸರ್ಕಾರ ಈಗಾಗಲೇ ಜಾರಿಗೆ ತಂದಿರುವ ಲವ್ ಜಿಹಾದ್, ಮತಾಂತರ ನಿಷೇಧ ಕಾಯಿದೆ ಮತ್ತು ಇತ್ತೀಚಿನ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದ ಸರ್ಕಾರಿ ನೌಕರರಿಗೆ ಸರ್ಕಾರಿ ಸೌಲಭ್ಯಗಳನ್ನು ಮೊಟಕುಗೊಳಿಸುವ ಕಾನೂನು, ಮತೀಯ ಧೃವೀಕರಣದ ಮೇಲೆ ಕಣ್ಣಿಟ್ಟು ಕೈಗೊಳ್ಳಲಾಗಿರುವ ಕ್ರಮಗಳೇ. ಇವೆಲ್ಲಕ್ಕೆ ಕಿರೀಟವಿಟ್ಟಂತೆ ಮೊನ್ನೆ ಇವರು ಸಾರ್ವಜನಿಕ ಸಭೆಯೊಂದರಲ್ಲಿ ಆಡಿದ 'ಅಬ್ಬಾಜಾನ್'(ಗಳೇ ಈವರೆಗೆ ಎಲ್ಲ ಪಡಿತರವನ್ನು ಹೊಡೆದುಕೊಳ್ಳುತ್ತಿದ್ದರು.) ಎಂಬ ಕುಚೇಷ್ಟೆಯ ಮಾತು ಕೂಡ ಇದೇ ಉದ್ದೇಶದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಆದರೆ ಹೆಚ್ಚಿನ ದುರದೃಷ್ಟದ ಸಂಗತಿ ಎಂದರೆ ಯೋಗಿ ರೂಪಿಸಿದ ಈ ಶಾಸನಗಳನ್ನು ಬಿಜೆಪಿ ಆಡಳಿತದ ಇತರ ರಾಜ್ಯಗಳೂ ಜಾರಿಗೆ ತರ ಹೊರಟಿರುವುದು. ಒಂದೆರಡು ಜನಪರ ನಿರ್ಧಾರಗಳ ಮೂಲಕ ಒಳ್ಳೆಯ ಆಡಳಿತದ ಸೂಚನೆ ನೀಡಿ, ತಮ್ಮ ರಾಜಕೀಯ ಚರಿತ್ರೆಯ ಹಿನ್ನೆಲೆಯಿಂದಾಗಿ ಬಿಜೆಪಿಯಲ್ಲಿದ್ದರೂ ಬಿಜೆಪಿಯಲ್ಲದೆ ಇರಬಹುದು ಎಂಬ ಆಶೆ ಹುಟ್ಟಿಸಿದ್ದ ಬಸವರಾಜ ಬೊಮ್ಮಾಯಿಯವರು ಮತಾಂತರ ನಿಷೇಧ ಕಾಯಿದೆಯನ್ನು ಜಾರಿಗೆ ತರಹೊರಟು, ಸರ್ವೋನ್ನತ ನ್ಯಾಯಾಲಯ ಆದೇಶದ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿನ ಅಕ್ರಮ ಧಾರ್ಮಿಕ ಕಟ್ಟಡಗಳನ್ನು ತೆರವು ಗೊಳಿಸುವ ಕಾರ್ಯವನ್ನು ಸದ್ಯಕ್ಕೆ ಸ್ಥಗಿತಗೊಳಿಸುವ ಮಸೂದೆಯನ್ನು ಮಂಡಿಸಿ, ಶಾಸನ ಸಭೆಯ

**(೭ನೇ ಪುಟಕ್ಕೆ**

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ' ದ ಸೆಪ್ಟೆಂಬರ್ ಸಂಚಿಕೆಯನ್ನು ಮೊದಲ ಪುಟದಿಂದ ಕೊನೆ ಪುಟದ ವರೆಗೂ ಈ ಸಲ ಓದಿಕೊಂಡೆ. ಮನಸ್ಸಿನ ಕೆಲವು ಮಾತುಗಳನ್ನು ಹೇಳಬೇಕೆನಿಸುತ್ತದೆ. ಇವು ವಿಮರ್ಶೆಯ ಮಾತಲ್ಲ, ಕೇವಲ ಓದುಗಳ ಅನಿಸಿಕೆ ಎಂದು ಭಾವಿಸಬಹುದು.

ಡಾ. ರಾಜೇಂದ್ರ ಚೆನ್ನಿಯವರ 'ಪ್ರಜಾತಂತ್ರ ಮತ್ತು ಮತ ವ್ಯವಸ್ಥೆ' ಲೇಖನವು ಈ ಸಂಚಿಕೆಯ ಉತ್ತಮ ಬರಹವೆನ್ನಲು ಕಾರಣ ಲೇಖಕರ ವಿಶ್ಲೇಷಣಾ ಕೌಶಲ್ಯ. ತಮ್ಮ ನಿಲುವನ್ನು ಚೆನ್ನಿಯವರು ಪೋಷಿಸಿದ ರೀತಿಯಿಂದಾಗಿ ಲೇಖನವು ಮುದ ನೀಡಿದೆ. ಜಾತಿಬಲಕ್ಕಿಂತ ಜನ ಸಾಮಾನ್ಯರ ನಂಬಿಕೆಯ ಬಲವುಳ್ಳ ರಾಜಕಾರಣಿಯು ಪ್ರಜಾಪ್ರಭುತ್ವ ವ್ಯವಸ್ಥೆಯ ರಾಜಕಾರಣಕ್ಕೆ ಅರ್ಹ ನಾಯಕನಾಗಬಲ್ಲ ಎಂಬ ಹುರುಳು ಈ ಲೇಖನದಲ್ಲಿದೆ.

'ಸಂಪಾದಕರ ಟಿಪ್ಪಣಿ' ಮತ್ತು 'ಹೊರ ಗುತ್ತಿಗೆಯಾಗುತ್ತಿರುವ ಪ್ರಜಾಪ್ರಭುತ್ವ'ದಲ್ಲಿಯ ಮೋದಿ ಸರಕಾರದ ಬಗೆಗಿನ ದಿಟ್ಟ ವಿಶ್ಲೇಷಣೆಗಳು ತಲೆದೂಗುವಂತೆ ಮಾಡಿವೆ. ಸ್ಟ್ಯಾನ್ ಸ್ವಾಮಿಯವರ ತ್ಯಾಗ ಮತ್ತು ನಿಷ್ಠೆಗೆ ಸಾಕ್ಷ್ಯಾಧಾರದಂತಿದ್ದ ಅವರ ಪತ್ರ ಮತ್ತು ಕುರಿತ ಕವಿತೆ, ಪೆಗಾಸಸ್, ಸಾಹಿತ್ಯಿಕ, ಸಾಂಸ್ಕೃತಿಕ ಬಿಡಿ ಟಿಪ್ಪಣಿಗಳು, ನಾಡಿನ ಐದು ಜನ ಪ್ರಖ್ಯಾತ ನಾಮರ ಪುಸ್ತಕ ವಿಮರ್ಶೆ, ರವಿಕೃಷ್ಣಾ ರೆಡ್ಡಿಯವರೊಂದಿಗಿನ ಪ್ರಶ್ನೋತ್ತರ ಮತ್ತು ಕವಿತೆಗಳು – ಇವೆಲ್ಲವೂ ಸಂಚಿಕೆಗೆ ಸತ್ವ ನೀಡುವ ಬೇರುಗಳಂತೆ ಇವೆ.

ಈಸೂರಿನಲ್ಲಿ ಪ್ರಾರಂಭವಾದ ಭ್ರಷ್ಟಾಚಾರದ ವಿರೋಧ ಕುರಿತ ಮಾಹಿತಿ ಮತ್ತು 'ಕೃಷಿ ರಂಗಕ್ಕೆ ಇದು ಜರೂರಿ ಇದೆ' – ಲೇಖನಗಳು ವಿಶೇಷವಾದ ಸಂತಸ ತಂದಿವೆ. ಪ್ರಜಾಪ್ರಭುತ್ವದ ಬೆಳೆಯ ಸತ್ವವನ್ನು ಹೀರಲು ಹಬ್ಬಿಕೊಂಡಿರುವ 'ಕಳೆ ಕಸ'ವನ್ನು ಕೀಳುವಂತಹ ಈ ಪ್ರಯತ್ನಗಳು ಸಾಂತ್ವನ ನೀಡುತ್ತವೆ.

ತುಂಬಾಡಿ ರಾಮಯ್ಯನವರ ಅಪ್ರಕಟಿತ ಕಾದಂಬರಿಯ ಭಾಗವನ್ನು ನಾನು ಓದಲಿಲ್ಲ. ಕನ್ನಡಿಯ ಒಂದು ತುಂಡನ್ನು ಕೈಗಿಟ್ಟು 'ಮುಖವನ್ನು ನೋಡಿಕೋ' ಅಂದ ಹಾಗೆ ಅನ್ನಿಸಿತು. ಸೆಪ್ಟೆಂಬರ್ ತಿಂಗಳ 'ಹೊಸ ಮನುಷ್ಯ'ವನ್ನು ಓದುತ್ತ ನವಜ್ಞಾನ, ಚೈತನ್ಯದೊಂದಿಗೆ ಮುಂದಿನ ಅಡಿಯನ್ನು ಇಡುವ ವಿಶ್ವಾಸ ಉಂಟಾದಂತೆ ನನಗೆ ಭಾಸವಾಗಿದೆ.

**–ಮಾಲತಿ ಪಟ್ಟಣಶೆಟ್ಟಿ,** ಧಾರವಾಡ

ಸೆಪ್ಟೆಂಬರ್ ಸಂಚಿಕೆಯ ಪುಟ ಪುಟವೂ ಮೌಲಿಕವಾಗಿವೆ. ಸ್ವಾತಂತ್ರ್ಯ ಅಮೃತೋತ್ಸವ ಸಂಬಂಧವಾದ ನಿಮ್ಮ ಅಂತಹ ಮುಖ್ಯ ಲೇಖನವನ್ನು ಪ್ರಕಟಿಸಲು 'ಪ್ರಜಾವಾಣಿ' ಪತ್ರಿಕೆಗೆ ಏನು ಅಡ್ಡಿಯಾಯಿತೋ ತಿಳಿಯದು! ರವಿಕೃಷ್ಣಾರೆಡ್ಡಿಯವರಿಗೆ ಕೇಳಿರುವ ಪ್ರಶ್ನೆಗಳಿಗೆ ಅವರು ಪ್ರಾಮಾಣಿಕವಾಗಿ ಉತ್ತರಿಸಿದ್ದಾರೆ. ಸಮಾಜ ಸುಧಾರಣೆಯ ನಿಟ್ಟಿನಲ್ಲಿ ಎಲ್ಲವೂ ಪುಟ್ಟ ಪುಟ್ಟ ಹೆಜ್ಜೆಗಳೇ.

ತುಂಬಾಡಿ ರಾಮಯ್ಯ ಅವರ ಅಪ್ರಕಟಿತ ಕೃತಿಯ ಓದಿಗೆ ಪ್ರತ್ಯೇಕ ಮನಸ್ಥಿತಿ ಮತ್ತು ಸಿದ್ಧತೆಯೇ ಬೇಕು. ನಮ್ಮ ಸಮಾಜದ ಬಹುತೇಕರಿಗೆ ಅಗೋಚರವಾಗಿರುವ ಆ ದಲಿತ ಜಗತ್ತಿನ ಪರಿಚಯವನ್ನು ನಾವು ಓದಿನ ಮೂಲಕವಾದರೂ ಮಾಡಿಕೊಳ್ಳಬೇಕು. ಗೆಳೆಯ ಗುಡಿಹಳ್ಳಿ ನಾಗರಾಜ ಅವರು ರಂಗಭೂಮಿ, ಪತ್ರಿಕೋದ್ಯಮಕ್ಕೆ ನೀಡಿರುವ ಅನನ್ಯ ಕೊಡುಗೆಯನ್ನು ಸರಿಯಾಗಿ ಸ್ಮರಿಸಿ ಅವರ ಅಗಲಿಕೆಗೆ ಮರುಗಿದ್ದೀರಿ. ಕಳೆದ ಹಲವಾರು ತಿಂಗಳಿಂದ ನಡೆಯುತ್ತಿರುವ ವಿದ್ಯಮಾನಗಳಿಗೆ 'ಹೊಸ ಮನುಷ್ಯ' ಪತ್ರಿಕೆ ಪ್ರತಿಕ್ರಿಯಿಸಿ ಪರಿಚಯಿಸಿರುವ ಪರಿಗೆ ಅಭಿನಂದನೆಗಳು.

**–ಎನ್.ಆರ್. ವಿಶುಕುಮಾರ್,** ಬೆಂಗಳೂರು

ಸೆಪ್ಟೆಂಬರ್ ೨೧ರ "ಹೊಸ ಮನುಷ್ಯ" ಸಂಚಿಕೆ ಪತ್ರಿಕೆಯ ಯಾವತ್ತಿನ ವೈವಿಧ್ಯತೆಯಿಂದ ಕೂಡಿದೆ. ನಿಮ್ಮ ಸಾಹಿತ್ಯಿಕ–ಸಾಂಸ್ಕೃತಿಕ ಬಿಡಿ ಟಿಪ್ಪಣಿಗಳಲ್ಲಿ 'ಗುರುವೂ ಇಲ್ಲ! ಶಿಷ್ಯನೂ ಇಲ್ಲ!!', ಇದು ನನ್ನ ಅನಿಸಿಕೆ ಸಹ ಹೌದು. ಸುಮಾರು ೪೦ಕ್ಕೂ ಹೆಚ್ಚು ವರ್ಷಗಳ ಕಾಲ ತರಗತಿಗಳಲ್ಲಿ ಬ್ಲಾಕ್ ಬೋರ್ಡ್ ಮತ್ತು ಚಾಕ್‌ಪೀಸ್ ಬಳಸಿ ಪಾಠ ಹೇಳಿದ ನನಗೆ, ವೆಬಿನಾರ್‌ಗಳು, ಆನ್‌ಲೈನ್ ತರಗತಿಗಳು ಮಾನವ ಸಹಜ ಸಂವಹನ ಕ್ರಿಯೆ ಎನ್ನಿಸುವುದೇ ಇಲ್ಲ; 'ರೋಬೋಟ್'ಗಳ ನಡುವಣ ವ್ಯವಹಾರದಂತೆ ತೋರುತ್ತದೆ. 'ನೀವು ಹೇಳಿದ ಪಾಠಗಳಷ್ಟೇ ನಿಮ್ಮ ಜೊತೆಗಿನ ಒಡನಾಟವೂ ನಮಗೆ ಮುಖ್ಯವಾದ ಅನುಭವಗಳನ್ನು ಕೊಟ್ಟಿದೆ' ಎನ್ನುವ ನನ್ನ ವಿದ್ಯಾರ್ಥಿಗಳ ಮಾತನ್ನು ನಾನು ನಂಬಿಕೊಂಡು ಬಂದಿದ್ದೇನೆ.

**–ಹೆಚ್.ಎಸ್. ಈಶ್ವರ,** ಬೆಂಗಳೂರು

ವರ್ತಮಾನ ಕಾಲದಲ್ಲಿ ಆಗುವ ಬದಲಾವಣೆಗಳನ್ನು ಕುರಿತು ವಸ್ತುನಿಷ್ಠವಾಗಿ ಹೇಳಬಯಸುವ 'ಹೊಸ ಮನುಷ್ಯ' ಮಾಸಿಕವು ಹೊಸದಾಗಿ ಯೋಚಿಸಲು ಪ್ರೇರಣೆಯಾಗಿದೆ. ಇದರಿಂದಾಗಿ ಸಮಾಜದಲ್ಲಿನ ಹಲವು ತೊಡಕುಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಬಿಡಿಸಲು ಸಹಕಾರಿಯಾಗಿದೆ.

ಇದರ ಜೊತೆಗೆ ಕೃಷಿ ಮತ್ತು ಶಿಕ್ಷಣ ಕುರಿತಂತೆ ಹೆಚ್ಚಿನ ಒಲವು ಇರಲಿ ಮತ್ತು ಈ ಬಗ್ಗೆ ಲೇಖನಗಳು ಬರಲಿ ಎಂಬುದು ನನ್ನ ಸಣ್ಣ ಕೋರಿಕೆ.

**–ಅಶೋಕ ಬೆಟ್ಟೂರ,** ಅಣ್ಣಿಗೇರಿ

ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ತುಂಬಾಡಿ ರಾಮಯ್ಯನವರ ಅಪ್ರಕಟಿತ ಕಾದಂಬರಿ 'ಓದೋ ರಂಗ' ಕೃತಿಯ ಭಾಗಗಳ ಓದು ನವಿರಾದ ಮುದ ನೀಡಿದವು. ನಮ್ಮ ಜಿಲ್ಲೆಯವರೇ ಆದ ರಾಮಯ್ಯನವರು ತುಮಕೂರು ಸೀಮೆಯ ವಿಶಿಷ್ಟ ಭಾಷೆಯ ಬಳಕೆಯೇ ಚೆಂದ. ಕೊಡತಿ, ತಂಗ್ಡಿ ಸೆಕ್ಕೆ, ತನಿ ಇತ್ಯಾದಿ ವಿಸ್ಮೃತಿಗೆ ಸರಿಯುತ್ತಿರುವ ಪದಗಳ ಕಣಜವೇ ಇಲ್ಲಿದೆ. ಇಡೀ ಕಾದಂಬರಿಯಲ್ಲಿ ಈ ಪದ ವೈವಿಧ್ಯ ಇನ್ನೆಷ್ಟಿರಬಹುದೆಂಬ ಕುತೂಹಲ ಹುಟ್ಟಿರುವುದು ಸುಳ್ಳಲ್ಲ. ಹೆಣ್ಣುಮುನಿ ಅಧ್ಯಾಯದಲ್ಲಿ ಬರುವ ಮಾಲಕ್ಷ್ಮಿಯ ಕತೆ ಈಗಾಗಲೇ ಕೇಳಿದ್ದರೂ ರಾಮಯ್ಯನವರ ವಿವರಣೆಯಲ್ಲಿರುವ ಸೊಗಸೇ ಬೇರೆ ರೀತಿಯದು. ಇನ್ನು, ಇಡೀ ಕನ್ನಡನಾಡಿನಲ್ಲಿ ಮೊಲಗಳಿಗೆ ಕುಂದ್ಲಿ ಎಂದು ಕರೆಯುವುದು ನಮ್ಮ ಜಿಲ್ಲೆಯಲ್ಲಿ ಮಾತ್ರ. ಆ ಕುಂದ್ಲಿಗಳ ಕೋಲುಬೇಟೆ, ಊರ ಮುಂದಿನ ಉಪ್ನೀರ ಬಾವಿ ಇತ್ಯಾದಿ ವಿವರಣೆಗಳು, ಇದು 50–60 ದಶಕದ ಹಿಂದೆ ನಡೆಯುವ ಕಥಾನಕ ಎಂಬುದರ ಸೂಚನೆ. ಏಕೆಂದರೆ ಈಗ ಕುಂದ್ಲಿ ಬೇಟೆ, ಉಪ್ನೀರ ಬಾವಿಯಿರುವ ಹಳ್ಳಿಗಳೇ ಇಲ್ಲವೆನ್ನಬಹುದು. ಕಾದಂಬರಿಯಲ್ಲಿ ಬರುವ ಕಥಾನಾಯಕ ಸಂಕಯ್ಯ ರಾಮಯ್ಯನವರೇ ಇರಬಹುದೇ, ಇದು ಅವರ ಬದುಕಿನ ಕಥೆಯ ವಿಸ್ತರಣೆಯೇ ಇರಬಹುದೇ ಎನಿಸಿದೆ.

**–ಮಲ್ಲಿಕಾರ್ಜುನ ಹೊಸಪಾಳ್ಯ,** ಹೊಸಪೇಟೆ

ಕಳೆದ ಸಂಚಿಕೆಯಲ್ಲಿ ಎಂದಿನಂತೆ ನಿಮ್ಮ ಸಂಪಾದಕೀಯದ ಜೊತೆಗೆ ನನ್ನ ಗಮನ ಸೆಳೆದ ಲೇಖನಗಳೆಂದರೆ ಸ್ಟ್ಯಾನ್‌ಸ್ವಾಮಿಯವರ ಮನ ಕರಗಿಸುವ ಪತ್ರ, ಅವರನ್ನು ಕುರಿತು ಹಿರಿಯ ಕವಯತ್ರಿ ಸವಿತಾ ನಾಗಭೂಷಣ ಅವರು ಹೃದಯಸ್ಪರ್ಶಿಯಾಗಿ ಕನ್ನಡಕ್ಕೆ ತಂದಿರುವ ಸಾಗರಿ ಛಾಬ್ರಾ ಅವರ ಕವಿತೆ ಹಾಗೂ ಪೆಗಾಸಿಸ್ ಕುರಿತ ಲೇಖನ.

ಪೆಗಾಸಿಸ್ ಪ್ರಕರಣವನ್ನು ಸರ್ಕಾರದ ಸದ್ಯದ ಅಸಹಕಾರದ ಎದುರು ನಮ್ಮ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿದಾರರು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾದರೆ, ಅದು ಸರ್ಕಾರದ ಅಸ್ತಿತ್ವದ ದೃಷ್ಟಿಯಿಂದ ಬಹು ಮಾರಕವೇ ಆಗಬಹುದು. ಪ್ರಜೆಗಳ ಖಾಸಗಿತನದ ಹಕ್ಕನ್ನು ಸರ್ಕಾರ ಉಲ್ಲಂಘಿಸಿರಬಹುದಾದ ಈ ಪ್ರಸಂಗ ನಮ್ಮ ಪ್ರಜಾತಂತ್ರದ ಚೈತನ್ಯವನ್ನೇ ಉಡುಗಿಸುವಂಥದ್ದು.

ಇನ್ನು 'ಪ್ರಜಾವಾಣಿ' ಪ್ರಕಟಿಸಲು ಸಾಧ್ಯವಾಗದ ಲೇಖನವೆಂಬ ಸೂಚನೆಯೊಂದಿಗೆ ಪ್ರಕಟವಾಗಿರುವ ನಿಮ್ಮ ಲೇಖನ ಸ್ವಾತಂತ್ರ್ಯಾನಂತರದ ಈ ೭೫ ವರ್ಷಗಳಲ್ಲಿ ನಮ್ಮ ಪ್ರತಿ ಸರ್ಕಾರವೂ ಹೇಗೆ ಪ್ರಜಾತಂತ್ರದ ತಿರುಳನ್ನೇ ನಾಶಮಾಡಿ ಅದನ್ನೂ ಹೊರಗುತ್ತಿಗೆಯ ಇನ್ನೊಂದು ವಸ್ತುವನ್ನಾಗಿ ಮಾಡಿದೆ ಎಂಬುದನ್ನು ಬಹು ಮಾರ್ಮಿಕವಾಗಿ ವಿವರಿಸುತ್ತದೆ.

**–ಎಂ. ಆರ್. ರಾಘವೇಂದ್ರ, ಮಂಡ್ಯ**

ಸೆಪ್ಟೆಂಬರ್ ಸಂಚಿಕೆಯಲ್ಲಿನ ನಿಮ್ಮ ಸಾಂಸ್ಕೃತಿಕ ಬಿಡಿ ಟಿಪ್ಪಣಿಗಳಲ್ಲಿ ನಮ್ಮ ಸಾಹಿತ್ಯ ಅಕಾಡೆಮಿಯು ಹೇಗೆ ಸಾಹಿತ್ಯದ ಎಲ್ಲೆಗಳನ್ನು ನಿರ್ಲಕ್ಷಿಸಿ ಸಂಘ ಪರಿವಾರದ ರಾಜಕೀಯ ಆಡುಂಬೊಲವಾಗಿ ಪರಿವರ್ತಿತವಾಗಿದೆ ಎಂಬುದನ್ನು ಸವಿವರವಾಗಿ ನಿರೂಪಿಸಿದ್ದೀರಿ. ಆದರೆ ದುರಂತವೆಂದರೆ ನಮ್ಮ ಘನತೆವೆತ್ತ ಸಾಹಿತ್ಯಲೋಕ ಈ ಬಗ್ಗೆ ಸೊಲ್ಲೆತ್ತದೆ ಮೌನವಾಗಿರುವುದು, ಈ ಮೌನಕ್ಕೆ ಮುಂದೆ ಸಾಕಷ್ಟು ಬೆಲೆ ತೆರಬೇಕಾಗುತ್ತದೆಂದು ನಮ್ಮ ಸಾಹಿತಿಗಳು ಆದಷ್ಟು ಬೇಗ ಅರಿತರೆ ಒಳ್ಳೆಯದು.

ಇನ್ನು ಪತ್ರಿಕೆಯ ಪುಸ್ತಕಾವಲೋಕನ ಪುಟಗಳು ಬೇರೆ ಪತ್ರಿಕೆಗಳು ಗುರುತಿಸದ ಪುಸ್ತಕಗಳನ್ನು ಆಯ್ದು, ಆಯ್ದ ಸಮರ್ಥ ವಿಮರ್ಶಕರಿಂದ ಅವಲೋಕನ ಮಾಡಿಸುತ್ತಿರುವುದು ಇಂದಿನ ಜಡ ಸಾಹಿತ್ಯ ಸಂದರ್ಭದಲ್ಲಿ ಅಮೂಲ್ಯ ಕೆಲಸವೆಂದೇ ಹೇಳಬಹುದು

**–ಎಲ್ ನಾರಾಯಣಮೂರ್ತಿ,** ಬೆಂಗಳೂರು

## ಒಂದು ಕ್ಷಮೆ; ಒಂದು ತಿದ್ದುಪಡಿ

ಪ್ರಿಯ ಓದುಗರೆ,

**ಕಳೆದ ತಿಂಗಳ ಕೊನೆಯ ವಾರದಲ್ಲಿ ನಾನು ತೀವ್ರ ಅಸ್ವಸ್ಥನಾಗಿ ಆಸ್ಪತ್ರೆಗೆ ಸೇರಬೇಕಾಗಿ ಬಂದುದರಿಂದ ಕಳೆದ ಹತ್ತು ವರ್ಷಗಳಲ್ಲಿ ಪತ್ರಿಕೆ ಮೊದಲ ಬಾರಿಗೆ ಅಂಚೆಗೆ ಹೋಗಲು ಐದು ದಿನ ತಡವಾಗಿ ನಿಮಗೂ ತಡವಾಗಿ ತಲುಪಿದೆ. ಈ ಮಧ್ಯೆ ಹಲವಾರು ಓದುಗರು ಪತ್ರಿಕೆ ಏಕೆ ಬಂದಿಲ್ಲವೆಂದು ಆತಂಕದಿಂದ ಕರೆ ಮಾಡಿ ವಿಚಾರಿಸಿ ಪತ್ರಿಕೆ ಕುರಿತ ತಮ್ಮ ಪ್ರೀತ್ಯಾಭಿಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆಲ್ಲ ನನ್ನ ಕೃತಜ್ಞತಾಪೂರ್ವಕ ವಂದನೆಗಳು.**

**ನನ್ನ ಅನಾರೋಗ್ಯದ ಮಧ್ಯೆಯೇ ಪತ್ರಿಕೆಯ ಸಂಪಾದಕೀಯ ಬರೆದಾಗ ಅದರಲ್ಲಿ ಒಂದು ಬಹು ಮುಖ್ಯ ಲೋಪ ಸಂಭವಿಸಿದೆ. ಅಲ್ಲಿ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ಪತಿಯ ಹೆಸರನ್ನು ಎಚ್ಚರದಪ್ಪಿ ಪರಕಾಲ ಸೀತಾರಾಮನ್ ಎಂದು ನಮೂದಿಸಲಾಗಿದೆ. ಅದು ಪರಕಾಲ ಪ್ರಭಾಕರ ಎಂದಾಗಬೇಕಿತ್ತು.**

ಪ್ರಚಲಿತ-೧

# ಹವಾಮಾನ ಕಾರ್ಯಾಚರಣೆಯ ಗಡುವು ಮುಗಿದಿದೆ; ಎಚ್ಚರಿಕೆ ಗಂಟೆ ಬಾರಿಸುತ್ತಿದೆ...



ವಿಶ್ವಸಂಸ್ಥೆಯ ಪ್ರಖ್ಯಾತ ವಿಜ್ಞಾನಿಗಳ ತಂಡವೊಂದು ಇತ್ತೀಚೆಗೆ ವಿಸ್ತೃತ ವರದಿಯೊಂದುನ್ನು ಬಿಡುಗಡೆ ಮಾಡಿ, ಹವಾಮಾನ ವೈಪರಿತ್ಯದಿಂದ ಮುಂಬರುವ ದಿನಗಳಲ್ಲಿ ಭೂಮಿಗೆ ಭೀಕರ ವಿಪತ್ತು ಅನಿವಾರ್ಯವೆಂದು ಹೇಳಿ ಮನುಕುಲಕ್ಕೆ ಎಚ್ಚರಿಕೆ ನೀಡಿದೆ. ಹಸಿರುಮನೆ ಅನಿಲಗಳನ್ನು ದೊಡ್ಡ ಪ್ರಮಾಣದಲ್ಲಿ, ಕ್ಷಿಪ್ರವಾಗಿ, ತಡೆಯುವುದು ಹವಾಮಾನ ಬಿಕ್ಕಟ್ಟಿಗೆ ಉಳಿದಿರುವ ಏಕೈಕ ಪರಿಹಾರ. ಹವಾಮಾನ ಬದಲಾವಣೆಯ ಅಂತರ್-ಸರಕಾರಗಳ ಮಂಡಳಿ (ಐಪಿಸಿಸಿ)ಯ ೨೦೦ಕ್ಕೂ ಹೆಚ್ಚು ವಿಜ್ಞಾನಿಗಳು ಸೇರಿ ಈ ಹೊಸ ವರದಿಯನ್ನು ಸಿದ್ಧಪಡಿಸಿದ್ದಾರೆ. ಎಂಟು ವರ್ಷಗಳಷ್ಟು ಸುದೀರ್ಘ ಕಾಲ ವಿಜ್ಞಾನಿಗಳು ಅಧ್ಯಯನ ನಡೆಸಿ ಪ್ರಕಟಿಸಿದ ಸಾವಿರಾರು ವಿಶ್ಲೇಷಣೆಗಳು ಅವರ ವರದಿಯಲ್ಲಿ ಅಡಕವಾಗಿವೆ. ಭೂ ತಾಪದ ತೀವ್ರತೆಯಿಂದ ಹೊತ್ತಿ ಉರಿದ ಕಾಳ್ಗಿಚ್ಚು, ವಾಯುಮಾನ ವೈಪರಿತ್ಯದಿಂದ ಸುರಿದ ಧಾರಾಕಾರ ಮಳೆ, ಮೇಘಸ್ಫೋಟ, ಭೀಕರ ಬರಗಾಲ ಇವು ಜಗತ್ತಿನ ಉದ್ದಗಲಕ್ಕೂ ಮನುಕುಲವನ್ನು ಸಂಕಟಕ್ಕೆ ಸಿಕ್ಕಿಸಿದ ಇತ್ತೀಚಿನ ಉದಾಹರಣೆಗಳಾಗಿವೆ. ಮಾನವನ ಕೈಗಾರಿಕಾ ಚಟುವಟಿಕೆಗಳಲ್ಲಿ ಪಳೆಯುಳಿಕೆ ಇಂಧನಗಳ ಬಳಕೆ ಹವಾಮಾನ ಬದಲಾವಣೆಗೆ ಪ್ರಮುಖ ಕಾರಣ. ಹಿಂದೆಂದೂ ಕಾಣದ ಭೂ ತಾಪದ ಹೆಚ್ಚಳ, ಹಿಮಸಾಗರಗಳ ಕುಸಿತ, ಸಮುದ್ರಮಟ್ಟ ಏರಿಕೆ ಹೀಗೆ ಲೆಕ್ಕವಿಲ್ಲದಷ್ಟು ವಿಪತ್ತುಗಳೂ ಜಗತ್ತಿನ ಮೂಲೆ ಮೂಲೆಯಲ್ಲಿ ಸಂಭವಿಸಿ ಸಂಕಷ್ಟಗಳನ್ನು ತಂದೊಡ್ಡಿದೆ. ಆಸ್ಟ್ರೇಲಿಯಾದ ಅಪರೂಪದ ಹವಳದ ದಿಬ್ಬಗಳು, ಅಮೆಜಾನ್ ಕಾಡಿನ ಅಮೂಲ್ಯ ವೃಷ್ಟಿವನಗಳು ಕೊಯ್ದು ರಾಶಿಹಾಕಿದ ಹುಲ್ಲಿನ ಬಣವೆಗಳಂತೆ ಒಣಗಿ ಬಿಳಿಚಿಕೊಂಡಿರುವುದು ಹವಾಮಾನ ವೈಪರೀತ್ಯದ ಮತ್ತೊಂದು ಕರಾಳ ಮುಖ.

ಪ್ಯಾರಿಸ್ ಒಪ್ಪಂದದ ಮೂಲ ಉದ್ದೇಶವೇ ಜಾಗತಿಕ ತಾಪಮಾನವನ್ನು ೧.೫ ಡಿಗ್ರಿ ಸೆಲ್ಸಿಯಸ್‌ಗಿಂತ ಮೇಲೇರುವುದನ್ನು ತಡೆಯುವುದು. ಅಭಿವೃದ್ಧಿಯ ಹರಿಕಾರರೆಂದು ಬೀಗುವ ಆಡಳಿತಾರೂಢ ಸರ್ಕಾರಗಳು ಭೂ ತಾಪದ ನಿಯಂತ್ರಣಕ್ಕೆ ಮಾಡಿದ್ದೇನು? ಎಂದು ಪ್ರಶ್ನಿಸಿದರೆ ಉತ್ತರ ಶೂನ್ಯ. ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ತಡೆಗಟ್ಟುವಲ್ಲಿ ಸರ್ಕಾರಗಳು ವಿಫಲವಾದದ್ದು ನಾಚಿಕೆಗೇಡಿನ ಸಂಗತಿ. ಕಳೆದ ನಾಲ್ಕು ದಶಕಗಳಲ್ಲಿ ಭೂ ತಾಪದ ಏರಿಕೆ ದಶಕದಿಂದ ದಶಕಕ್ಕೆ ಹೆಚ್ಚುತ್ತಲೇ ಸಾಗಿದೆ. ೧೮೫೦ರ ಹಿಂದಿನ ದಶಕಗಳಿಂದಲೂ ವಾತಾವರಣದ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವು ಏರುಗತಿಯಲ್ಲಿಯೇ ಮುಂದುವರೆದಿದೆ. ಭೂ ಇತಿಹಾಸದ ಎರಡು ಮಿಲಿಯ ವರ್ಷಗಳಲ್ಲಿ ತಾಪಮಾನದ ಏರಿಕೆ ಮಿತಿ ಮೀರಿ ಹೆಚ್ಚಳ ಕಂಡಿದೆ. ಇದೇ ರೀತಿ ಹಸಿರುಮನೆ ಅನಿಲಗಳ ಹೊರಸೂಸುವಿಕೆ ಮುಂದುವರಿದರೆ ಅದು ಈ ಶತಮಾನದ ಮಧ್ಯದ ಹೊತ್ತಿಗೆ ತಾಪಮಾನ ಅಪಾಯದ ಮಟ್ಟ ತಲುಪುತ್ತದೆ. ಐ.ಪಿ.ಸಿ.ಸಿ ಮಂಡಳಿಯ ಎಚ್ಚರಿಕೆಯ ಪ್ರಕಾರ ಕಾರ್ಬನ್ ಡೈ ಆಕ್ಸೈಡ್ ಮತ್ತು ಹಸಿರುಮನೆ ಅನಿಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಕಡಿತಗೊಳಿಸದಿದ್ದರೆ ಜಾಗತಿಕ ತಾಪಮಾನವು ೧.೫ ಡಿಗ್ರಿ ಸೆಲ್ಸಿಯಸ್‌ನಿಂದ ೨ ಡಿಗ್ರಿ ಸೆಲ್ಸಿಯಸ್ ಮೀರುವುದರಲ್ಲಿ ಯಾವ ಸಂಶಯವೂ ಇಲ್ಲ.

ಈಗಾಗಲೇ ನಾವು ಹಿಂದೆಂದೂ ಕಾಣದಷ್ಟು ಹವಾಮಾನ ವೈಪರಿತ್ಯದ ಅಟ್ಟಹಾಸಗಳನ್ನು ಲಕ್ಷಾಂತರ ವರ್ಷಗಳಲ್ಲಿ ಅಲ್ಲ, ಕೇವಲ ಸಾವಿರ ವರ್ಷಗಳಲ್ಲಿ ಕಂಡಿದ್ದೇವೆ. ಸಮುದ್ರ ಮಟ್ಟದ ಏರಿಕೆಯಂತಹ ಅವಘಡಗಳು ಇತ್ತೀಚಿನ ನೂರರಿಂದ ಸಾವಿರ ವರ್ಷಗಳ ಅವಧಿಯಲ್ಲಿ ಏರು-ಪೇರಾದದ್ದರ ದಾಖಲೆಗಳಿವೆ. ಐ.ಪಿ.ಸಿ.ಸಿ ಈ ದಾಖಲೆಗಳನ್ನು ದೃಢೀಕರಿಸಿದೆ. ಹವಾಮಾನ ವೈಪರಿತ್ಯದ ಅಹವಾಲುಗಳು ಹೇಗೇ ಇರಲಿ ಐ.ಪಿ.ಸಿ.ಸಿ ಮಂಡಳಿಯ ವರದಿಯ ಪ್ರಕಾರ ಕಾರ್ಬನ್ ಡೈ ಆಕ್ಸೈಡ್ ಮತ್ತಿತರ ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವುದನ್ನು ಎಲ್ಲರೂ ಚಾಚೂ ತಪ್ಪದೇ ಪಾಲಿಸಿದರೆ ಮಾತ್ರ ವಾತಾವರಣ ಪರಿಶುದ್ಧವಾಗುವುದಲ್ಲದೇ ೨೦-೩೦ ವರ್ಷಗಳಲ್ಲಿ ಜಾಗತಿಕ ತಾಪಮಾನವೂ ನಿಯಂತ್ರಣಗೊಂಡು ಹವಾಮಾನ ಸುಸ್ಥಿರವಾಗಬಹುದು.

ಇದೇ ೨೦೨೧ರ ನವೆಂಬರ್ ೧ರಿಂದ ೧೨ರವರೆಗೆ ವಿಶ್ವಸಂಸ್ಥೆಯ ೨೬ನೇ ಹವಾಮಾನ ಬದಲಾವಣೆಯ ಸಮ್ಮೇಳನವನ್ನು ಗ್ಲಾಸ್ಗೋ ನಗರದಲ್ಲಿ ಆಯೋಜಿಸಿದೆ. ಸಮ್ಮೇಳನ ಆರಂಭವಾಗುವ ಒಂದು ವಾರ ಮೊದಲೇ ಜಗತ್ತಿನ ನಾಯಕರು ಸಭೆ ಸೇರಿ ಮೂರು ಹಂತದ ನೂತನ ವರದಿಯನ್ನು ಬಿಡುಗಡೆಗೊಳಿಸಲಿದ್ದಾರೆ. ಗ್ಲಾಸ್ಗೋ ಸಮ್ಮೇಳನದ ಹೊಸ ಆಜೆಂಡಾ ಕಾರ್ಯಕರ್ತರ ಹವಾಮಾನ ಹೋರಾಟಕ್ಕೆ ಹೊಸ ಚೈತನ್ಯ ತುಂಬಲಿದೆ. ನಿಯಂತ್ರಣಕ್ಕೆ ಬಾರದ ಸುಳಿ ಚಕ್ರದಂಥ ಜಾಗತಿಕ ತಾಪಮಾನವನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಸಮ್ಮೇಳನ ನಮಗೆ ಅತ್ಯುತ್ತಮ ಮತ್ತು ಅಂತಿಮ ಅವಕಾಶವೆಂಬ ಆಶಯವನ್ನು ಹಲವು ಧುರೀಣರು ವ್ಯಕ್ತಪಡಿಸಿದ್ದಾರೆ. ನಾವಿನ್ನೂ ಜಾಗತಿಕ ತಾಪಮಾನವನ್ನು ೧.೫ ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸುವ ಖಚಿತ ಮಾರ್ಗವನ್ನು ತಲುಪದಿದ್ದರೂ ಅದರ ಹೊಸ್ತಿಲಬಳಿ ನಿಂತಿದ್ದೇವೆ ಎಂದು ವಿಜ್ಞಾನಿಗಳು ಭರವಸೆಯ ಮಾತನಾಡಿದ್ದಾರೆ. ಹಾಗೆಯೇ ಅವರು ಹವಾಮಾನ ದುಷ್ಪರಿಣಾಮದ ಬಿಕ್ಕಟ್ಟನ್ನು ಪರಿಹರಿಸುವುದಾಗಿ ಹೇಳಿದ್ದಾರೆ. ಒಂದು ವೇಳೆ ಗುರಿ ತಲುಪಲು ವಿಫಲವಾದರೆ ಅದರ ಪರಿಣಾಮ ಅಭಿವೃದ್ಧಿಶೀಲ ದೇಶಗಳ ಮರಣಘೋಷವಾಗಿ ಮೊಳಗಬಹುದೆಂದು ಕಳವಳ ವ್ಯಕ್ತ ಪಡಿಸಿದ್ದಾರೆ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೋನಿಯೊ ಗುಟೆರಸ್ ಇತ್ತೀಚೆಗೆ ಐ.ಪಿ.ಸಿ.ಸಿ.ಯ ನೂತನ ಹೇಳಿಕೆಯನ್ನು ಬಿಡುಗಡೆಗೊಳಿಸಿ ಹವಾಮಾನ ವೈಪರೀತ್ಯವನ್ನು ಮನುಕುಲಕ್ಕಾಗಿ ಕೆಂಪು ನಿಶಾನೆ (ಎ ಕೋಡ್ ರೆಡ್ ಫಾರ್ ಹ್ಯುಮ್ಯಾನಿಟಿ) ಎಂಬ ಹೊಸ ಶೀರ್ಷಿಕೆ ನೀಡಿದ್ದಾರೆ. ಎಚ್ಚರಿಕೆಯ ಗಂಟೆಗಳು ಮೊಳಗಿದರೂ ಕಿವುಡರಾಗಿದ್ದೇವೆ. ನಿರಾಕರಿಸಲಾರದ ಸಾಕ್ಷಾಧಾರಗಳು ಕಣ್ಮುಂದೆಯೇ ಕಾಣುತ್ತಿದೆ. ಹೀಗಿದ್ದರೂ ಪಳೆಯುಳಿಕೆ ಇಂಧನಗಳು ನಿರಂತರವಾಗಿ ದಹಿಸುತ್ತ ಹಸಿರುಮನೆ ಅನಿಲಗಳು ಹೊರಸೂಸುತ್ತಲೇ ಇವೆ. ಅರಣ್ಯಗಳು ಬೆಂಗಾಡಾಗಿ ಪರಿವರ್ತನೆಯಾಗಿವೆ. ಇರುವುದೊಂದೇ ಭೂಮಿ. ಅದು ಕೂಡ ಉಸಿರುಗಟ್ಟಿ ತಳಮಳಗೊಳ್ಳುತ್ತಿದೆ. ಭೂಮಿಯನ್ನು ಆಶ್ರಯಿಸಿ ಬದುಕುತ್ತಿರುವ ಕೋಟ್ಯಂತರ ಜೀವಿಗಳ ಬಾಳ್ವೆ ನರಕ ಸದೃಶವಾಗಿದೆ ಎಂದು ಗುಟೆರಸ್ ವಿಷಾದಿಸಿದ್ದಾರೆ. ಇಂತಹ ಬಿಕ್ಕಟ್ಟಿನಲ್ಲಿರುವ ಭೂಮಿಗೆ ಭರವಸೆಯ ಬೆಳಕು ಮೂಡುವುದು ಯಾವಾಗ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ?.

**(ಮೂಲ: ಜೇಕ್ ಜಾನ್ಸನ್ ಕೃಪೆ: *ಕಾಮನ್ ಡ್ರೀಮ್ಸ್***

**ಕನ್ನಡಕ್ಕೆ: ಶೇಖರ್ ಗೌಳೇರ್)**

## ಕುಪ್ಪಳ್ಳಿಯಲ್ಲಿ ಸಮಾಜವಾದಿ ಅಧ್ಯಯನ ಶಿಬಿರ

ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಪ್ರತಿವರ್ಷದಂತೆ ಈ ವರ್ಷವೂ ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಈ ಅಕ್ಟೋಬರ್ ೩೦ ಮತ್ತು ೩೧ರ ಶನಿವಾರ ಮತ್ತು ಭಾನುವಾರಗಳಂದು ಕುಪ್ಪಳ್ಳಿಯ ಶತಮಾನೋತ್ಸವ ಭವನದಲ್ಲಿ ತನ್ನ ವಾರ್ಷಿಕ ಅಧ್ಯಯನ ಶಿಬಿರವನ್ನು ಆಯೋಜಿಸಿದೆ. ಈ ಶಿಬಿರದ ವಿಷಯ: 'ಪರ್ಯಾಯ ಜೀವನ ಪದ್ಧತಿ'.

ಶಿಬಿರದಲ್ಲಿ ಈ ವಿಷಯದ ಬಗ್ಗೆ ಪರಿಣತರು ಗೋಷ್ಠಿಗಳನ್ನು ನಡೆಸಿಕೊಡುತ್ತಾರೆ. ನಂತರ ಚರ್ಚೆ ಇರುತ್ತದೆ. ೩೦ರ ರಾತ್ರಿ ಚಲನಚಿತ್ರ ಪ್ರದರ್ಶನವಿರುತ್ತದೆ. ಶಿಬಿರಾರ್ಥಿಗಳಾಗಿ ಭಾಗವಹಿಸಬಯಸುವವರು ಈ ಕೆಳಗೆ ನೀಡಿರುವ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬಹುದು. ಶಿಬಿರ ಶುಲ್ಕ ರೂ ೩೦೦/-. ವಿದ್ಯಾರ್ಥಿಗಳಿಗೆ ರೂ. ೨೦೦/-. ಶಿಬಿರಾರ್ಥಿಗಳಿಗೆ ಸಾಮೂಹಿಕ ವಸತಿ ಸೌಲಭ್ಯವಿದ್ದು, ಶಿಬಿರದ ಎರಡೂ ದಿನ ಉಪಾಹಾರ ಮತ್ತು ಊಟ ಒದಗಿಸಲಾಗುವುದು.

ಶಿಬಿರ ೩೦ರ ಬೆಳಿಗ್ಗೆ ೧೦ ಗಂಟೆಗೆ ಆರಂಭವಾಗಿ ೩೧ರ ಸಂಜೆ ೫.೩೦ಕ್ಕೆ ಮುಕ್ತಾಯವಾಗುತ್ತದೆ. ಇಡೀ ಶಿಬಿರದ ಅವಧಿಯಲ್ಲಿ ಭಾಗವಹಿಸಲು ಸಾಧ್ಯವಿರುವವರು ಮಾತ್ರ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ವಸತಿ ಸೀಮಿತವಾಗಿರುವುದರಿಂದ, ಆಸಕ್ತರು ಆದಷ್ಟು ಬೇಗ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಸಂಪರ್ಕ ಸಂಖ್ಯೆಗಳು: ಎನ್. ಎಂ. ಕುಲಕರ್ಣಿ ೯೭೩೧೯೨೭೩೧

ಎಂ. ರಾಜು: ೯೪೮೦೧೪೧೯೮೪ ಹೊನ್ನಾಳಿ ಚಂದ್ರು: ೯೮೪೪೫೧೮೮೭೬

**ಅಧ್ಯಕ್ಷರು: ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ (ರಿ.). ಶಿವಮೊಗ್ಗ**

ಪ್ರಚಲಿತ–೨

# ತಾಲಿಬಾನಿಗಳ ಅಫ್ಘನಿಸ್ತಾನ: ಒಂದು ಐತಿಹಾಸಿಕ ನೋಟ

–ಡಿ.ಎಸ್. ನಾಗಭೂಷಣ

**ಜಗತ್ತಿನ ಅತ್ಯಂತ ಪ್ರಬಲ ಸೇನಾ ಶಕ್ತಿಯೆನಿಸಿರುವ ಅಮೆರಿಕಾದ ಸೇನೆಯನ್ನು ಸೀಮಿತ ಸೇನಾ ಶಕ್ತಿಯ ತಾಲಿಬಾನಿಗಳು ಮಣಿಸಿದ್ದಾರೆಂದರೆ ಅದು ಸ್ಥಳೀಯ ಜನಸಮುದಾಯದ ಒಂದು ಗಣನೀಯ ಭಾಗದ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಇನ್ನೊಂದು, ಯಾವುದೇ ದೇಶದ ಹೋರಾಟಗಾರರು ತಮ್ಮ ಹೋರಾಟದಲ್ಲಿ ಜಯಶಾಲಿಯಾದ ಮೇಲೆ ತಾನು ಪ್ರತಿಪಾದಿಸಿದ ಮತ್ತು ನಂಬಿದ ಮೌಲ್ಯಗಳಿಗನುಸಾರವಾದ ಸರ್ಕಾರವನ್ನು ರಚಿಸುವುದು ಅದರ ಹಕ್ಕು. ಇಂದು ನಾವು ಇದ್ದುದರಲ್ಲಿ ಒಳ್ಳೆಯದೆಂದು ಪಶ್ಚಿಮದಿಂದ ಇಷ್ಟಪಟ್ಟು ಪಡೆದ ಒಂದು ಉದಾರವಾದಿ ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರಿಗೆ ತಾಲಿಬಾನಿಗಳ ನಂಬಿಕೆಗಳು ಅನಾಗರಿಕವೂ ಕ್ರೂರವಾಗಿಯೂ ಕಾಣಬಹುದು. ಆದರೆ ಅವು ತಮ್ಮ ಒಳಿತಿಗೆಂದೇ ಸಾರಲ್ಪಟ್ಟ ಧಾರ್ಮಿಕ ನಿರ್ದೇಶನಗಳನ್ನು ಪಾಲಿಸುವ ಧಾರ್ಮಿಕ ಶ್ರದ್ಧೆಯ ಭಾಗವೇ ಆಗಿರಬಹುದು. ಏಕೆಂದರೆ ಯಾವ ಆಡಳಿತಗಾರರೂ ಜನರಿಗೆ ಹಿಂಸೆ ಕೊಡುವಂತಹ ಕಾರ್ಯವೈಖರಿಯನ್ನು ಅನುಸರಿಸಬಯಸುವುದಿಲ್ಲ. ಆದ್ದರಿಂದ ಪಶ್ಚಿಮದ ಉದಾರವಾದಿ ಪ್ರಜಾಸತ್ತೆಯ ಸ್ವಾತಂತ್ರ್ಯ-ಸುಖ-ಸೌಲಭ್ಯಗಳ ರುಚಿ ಕಂಡಿರುವ ಆಫ್ಘನರೂ ಸೇರಿದಂತೆ 'ನಾವು' ಅನಾಗರಿಕ-ಕ್ರೂರ ಎಂದು ಕರೆಯುವ ಸರ್ಕಾರದ ವರ್ತನೆಗಳ ಮೂಲ ತಾಲಿಬಾನಿಗಳು ನಿಜ ಇಸ್ಲಾಂ ಎಂದು ನಂಬಿರುವ ಇಸ್ಲಾಂನ ಆವೃತ್ತಿಯಲ್ಲೇ ಇರುವಂತೆ ಕಾಣುತ್ತದೆ.**



**ಆ**ಫ್ಘನಿಸ್ಥಾನವನ್ನು ಈಗ ಪೂರ್ಣ ವಶಪಡಿಸಿಕೊಂಡಿರುವ ತಾಲಿಬಾನ್ ಅಲ್ಲಿ ತನ್ನ ಹಂಗಾಮಿ ಸರ್ಕಾರ ರಚನೆ ಮಾಡಿರುವ ಹೊತ್ತಿನಲ್ಲಿ ಜಗತ್ತಿನ ಮೂಲೆ ಮೂಲೆಗಳಲ್ಲಿನ ಇಸ್ಲಾಮೇತರ ದೇಶಗಳಿಂದ ಅಲ್ಲಿನ ಜನರ ಬಗ್ಗೆ ಸಹಾನುಭೂತಿ ಮತ್ತು ತಾಲಿಬಾನಿಗಳ ಬಗ್ಗೆ ಖಂಡನೆ ಕೇಳಿ ಬರುತ್ತಿದೆ. ಅಲ್ಲಿ ಅಮೆರಿಕಾದ ಸೇನೆ ಸ್ವದೇಶಕ್ಕೆ ವಾಪಸಾಗುತ್ತಿದ್ದ ಮತ್ತು ಅಮೆರಿಕಾ ಪ್ರಾಯೋಜಿತ ಸ್ಥಳೀಯ ಸರ್ಕಾರ ನಿಧಾನವಾಗಿ ದೇಶದ ಮೇಲೆ ಹಿಡಿತ ಕಳೆದುಕೊಳ್ಳುತ್ತಿದ್ದ ವೇಳೆಯಲ್ಲೇ ಆ ದೇಶದಲ್ಲಿದ್ದ ಆಫ್ಘನೇತರರು ಮಾತ್ರವಲ್ಲದೆ ಗಣನೀಯ ಸಂಖ್ಯೆಯ ಆಫ್ಘನರೂ ದೇಶಬಿಟ್ಟು ಹೋಗಲಾರಂಭಿಸಿದ್ದಾರೆ. ತಾಲಿಬಾನಿಗಳು ಇಂಥವರು ದೇಶಬಿಟ್ಟು ಹೋಗಲು ನಿಗದಿ ಮಾಡಿದ್ದ ಗಡುವು ಮೀರಿದ್ದರೂ ಇನ್ನೂ ಗಣನೀಯ ಸಂಖ್ಯೆಯ ಆಫ್ಘನರು ತಮ್ಮನ್ನು ತಮ್ಮೀ ತಾಯ್ನಾಡಿನಿಂದ ತೆರವುಗೊಳಿಸಲು ಅಮೆರಿಕಾವೂ ಸೇರಿದಂತೆ ವಿಶ್ವದ ಮಾನವ ಹಕ್ಕುಗಳ ವಿವಿಧ ವೇದಿಕೆಗಳಿಗೆ ಮೊರೆ ಹೋಗುತ್ತಲೇ ಇದ್ದಾರೆ.

ಜನ ಹೀಗೆ ತಮ್ಮ ತಾಯ್ನಾಡಿನದ್ದೇ ಸರ್ಕಾರ ರಚಿತವಾಗುತ್ತಿದ್ದಾಗ ತಾಯ್ನಾಡನ್ನು ತೊರೆಯಲು ಹಾತೊರೆಯುವುದೇತಕ್ಕೆ? ನಲವತ್ತು ವರ್ಷಗಳ ಹಿಂದೆ ಶೀತಲ ಸಮರ ಇನ್ನೂ ಅಸ್ತಿತ್ವದಲ್ಲಿದ್ದಾಗ ಉದಾರವಾದ ರಾಜಪ್ರಭುತ್ವವಾಗಿದ್ದ ಆಫ್ಘನಿಸ್ಥಾನವನ್ನು ಅಮೇರಿಕದ ಪ್ರಭಾವದಿಂದ 'ರಕ್ಷಿಸಲು' ಆ ದೇಶವನ್ನು ಆಕ್ರಮಿಸಿಕೊಂಡಿದ್ದ ಸೋವಿಯತ್ ಒಕ್ಕೂಟ ಅಲ್ಲಿ ತನ್ನ ಕೈಗೊಂಬೆ ಕಮ್ಯೂನಿಸ್ಟ್ ಸರ್ಕಾರವನ್ನು ಸ್ಥಾಪಿಸಿತ್ತು. ಆಗ ಅದರ ವಿರುದ್ಧ ಹೋರಾಡಿ ತಮ್ಮ ದೇಶವನ್ನು 'ಧರ್ಮ ವಿರೋಧಿ' ಕಮ್ಯೂನಿಸಂನಿಂದ ವಿಮೋಚನೆಗೊಳಿಸಿದ್ದವರು ಮುಜಾಹಿದ್ದೀನ್ ಹೆಸರಿನಲ್ಲಿದ್ದ ಈ ತಾಲಿಬಾನಿಗಳೇ. ಅವರಿಗೆ ಪರೋಕ್ಷವಾಗಿ ಬೆಂಬಲವಾಗಿ ನಿಂತಿದ್ದುದು ಅಮೆರಿಕಾದ ಸೇನೆ. ಆಗ ಸರ್ಕಾರ ರಚಿಸಿದ್ದ ತಾಲಿಬಾನಿಗಳ 'ಶರಿಯತ್' ಪ್ರಕಾರದ ಆಡಳಿತ ವೈಖರಿಯ ಭಾಗವಾಗಿ ವಿವಿಧ ತೆರೆನ ನಿರ್ಬಂಧ–ನಿಷೇಧಗಳ ಕೌರ್ಯಗಳನ್ನು ಅನುಭವಿಸಿದ್ದ ಆಫ್ಘನ್ ಜನತೆ ಬಾಣಲೆಯಿಂದ ಬೆಂಕಿಗೇ ಬಿದ್ದಂತಾಗಿ ತಾಲಿಬಾನಿಗಳಿಂದಲೂ ವಿಮೋಚನೆ ಬಯಸಿದ್ದರು.

## ಯುದ್ಧಭೂಮಿಯಾದ ಬೌದ್ಧ ಧರ್ಮದ ನೆಲವೀಡು

ಆಫ್ಘನಿಸ್ಥಾನ ಎಂದೂ ಮೂಲಭೂತವಾದಿ ಇಸ್ಲಾಮೀ ದೇಶವಾಗಿರಲಿಲ್ಲ. ಎತ್ತರದ ಪರ್ವತ ಶ್ರೇಣಿಗಳಿಂದಲೂ, ಆಳದ ಕಣಿವೆಗಳಿಂದಲೂ ಆವೃತವಾದ ಪ್ರಕೃತಿ ರಮಣೀಯತೆಗೆ ಹೆಸರಾಗಿದ್ದ ಆ ದೇಶ ಸರಳ ಬದುಕಿನ ಬುಡಕಟ್ಟು ಜನರಿಂದ ಕೂಡಿತ್ತು. ಇತಿಹಾಸದಲ್ಲಿ ಗಾಂಧಾರ ದೇಶವೆಂದು ಪ್ರಸಿದ್ಧವಾಗಿದ್ದ ಈ ನಾಡು ಬೌದ್ಧ ಧರ್ಮದ ನೆಲವೀಡೂ ಆಗಿತ್ತು. ಬೊಮಿಯಾನ್ ಪರ್ವತಶ್ರೇಣಿಯಲ್ಲಿ ಕ್ರಿ.ಶ. ಆರನೇ ಶತಮಾನದಷ್ಟು ಹಿಂದೆಯೇ ಕೆತ್ತಿದ್ದ ಜಗತ್ತಿನ ಅತಿ ಎತ್ತರದ ಬುದ್ಧನ ಮೂರ್ತಿಗಳು ಇದಕ್ಕೆ ಸಾಕ್ಷಿಯಂತಿದ್ದವು. ಆದರೆ ಜಗತ್ತಿನಾದ್ಯಂತ ತೈಲ ಆರ್ಥಿಕತೆ ಬಲಗೊಂಡಂತೆ ಇಸ್ಲಾಮಿ ಮೂಲಭೂತವಾದ ಬಲಗೊಂಡು ಅಲ್‌ಖೈದಾ ಉಗ್ರ ಪಡೆಗಳ ರೂಪ ತಳೆದಾಗ ಭೌಗೋಳಿಕವಾಗಿ ಆಯಕಟ್ಟಿನ ಜಾಗದಲ್ಲಿರುವ ಆಫ್ಗನಿಸ್ಥಾನವೂ ಅದಕ್ಕೆ ಬಲಿಯಾದಾಗ ತಾಲಿಬಾನಿ ಆಂದೋಲನ ಅಲ್ಲಿ ಅರಂಭವಾಯಿತು. ಆಧುನಿಕ ಶಿಕ್ಷಣ ಧರ್ಮವಿರೋಧಿ ಎನಿಸಿತು. ಮಹಿಳೆಯರ ಶಿಕ್ಷಣ ಮತ್ತು ಉದ್ಯೋಗ ನಿಷೇಧಿತವಾಯಿತು. ಮಹಿಳೆಯರಿಗೆ ಬುರ್ಖಾ ಕಡ್ಡಾಯವಾಯಿತಲ್ಲದೆ ಅವರ ಒಂಟಿ ಮತ್ತು ಮುಕ್ತ ಸಂಚಾರ ದಂಡನಾರ್ಹ ಅಪರಾಧವೆನಿತು. ಎಲ್ಲ ತರದ ನೃತ್ಯ–ಸಂಗೀತ ಇತ್ಯಾದಿ ಲಲಿತ ಕಲೆಗಳು ನಿಷೇಧಿತವಾದವು. ತಾಲಿಬಾನಿಗಳು ಆಫ್ಘನಿಸ್ತಾನವನ್ನು ಒಂದು ಇಸ್ಲಾಮಿ ಮೂಲಭೂತವಾದಿ ದೇಶವನ್ನಾಗಿ ಮಾಡಲು ಅವರ 'ಆಡಳಿತ'ಕ್ಕೆ ಬೇಕಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಹೇಗೂ ಸೋವಿಯತ್ ಒಕ್ಕೂಟದ ಮತ್ತು ಅಮೆರಿಕಾದ ಸೇನೆಗಳು ಯುದ್ಧ ಕ್ಷೇತ್ರಗಳಲ್ಲಿ ಬಿಟ್ಟುಹೋಗಿದ್ದು, ಅಪಾರ ಪ್ರಮಾಣದಲ್ಲಿ ಲಭ್ಯವಿದ್ದವು. ಈ ಶಸ್ತ್ರಾಸ್ತ್ರಗಳನ್ನು ಬಳಸಿಯೇ ಅವರು ಅಂತಾರಾಷ್ಟ್ರೀಯ ಪ್ರವಾಸಿಗರ ಗಮನ ಸೆಳೆದಿದ್ದ ಬೊಮಿಯಾನ್ ಬೆಟ್ಟಗಳ ಮೇಲಿನ ವೈವಿಧ್ಯಮಯ ಬುದ್ಧ ಶಿಲ್ಪಗಳನ್ನು, ಅವು ಇಸ್ಲಾಂ ಧರ್ಮದ ಮೂರ್ತಿ ವಿರೋಧಿ ನಂಬಿಕೆಯನ್ನು ಉಲ್ಲಂಘಿಸುತ್ತದೆಂಬ ಕಾರಣದಿಂದ ಧ್ವಂಸ ಮಾಡಲಾಯಿತು. ಇದರ ಹಿಂದೆ ಇದ್ದ ಸೌದಿ ಅರೇಬಿಯಾ ಮೂಲದ ವಹಾಬಿ ಪಂಥದ(ಬಿನ್ ಲಾಡನ್ ನೇತೃತ್ವದ) 'ಅಲ್‌ಖೈದಾ' ಉಗ್ರರ ಪಡೆ ಆ ಹೊತ್ತಿಗೆ ಆಫ್ಘನಿಸ್ಥಾನದಲ್ಲಿ ಒಂದು ಪ್ರಬಲ ಶಕ್ತಿಯಾಗಿ ಮನೆ ಮಾಡಿತ್ತು.

## ಅಮೆರಿಕಾ ಪ್ರಾಯೋಜಿತ ಪ್ರಜಾಸತ್ತೆಯ ಮುಕ್ತತೆಯ ಗಾಳಿ

ಇದೇ ವೇಳೆಯಲ್ಲಿ ೨೦೦೧ರಲ್ಲಿ ಅಮೆರಿಕಾದಲ್ಲಿ ೯/೧೧ ಎಂದೇ ಹೆಸರಾಗಿರುವ ವಿಶ್ವ ವ್ಯಾಪಾರ ಕೇಂದ್ರದ ಮೇಲಿನ ವೈಮಾನಿಕ ದಾಳಿ ನಡೆದು ಅದರ ಹಿಂದೆ ತಾಲಿಬಾನಿಗಳೂ ಸೇರಿದಂತೆ ವಿಶ್ವದ ಮುಸ್ಲಿಂ ಮೂಲಭೂತವಾದಿ ಉಗ್ರರ ಕೈವಾಡವಿದೆಯೆಂದು ಅರಿತ ಅಮೆರಿಕಾ, ತಾಲಿಬಾನಿಗಳನ್ನು ನಿಯಂತ್ರಿಸಲು ಇಪ್ಪತ್ತು ವರ್ಷಗಳ ಹಿಂದೆ ತನ್ನ ಸೇನೆಯನ್ನು ಆ ದೇಶಕ್ಕೆ ಕಳಿಸಿತು. ಸೇನಾ ಕಾರ್ಯಾಚರಣೆಯಿಂದ ಇದು ಸಾಧ್ಯವಾಗದೆಂದು ಬಹುಬೇಗ ಅರಿತ ಅಮೆರಿಕಾ ಅಲ್ಲಿ ತಾಲಿಬಾನಿಗಳ ಸರ್ಕಾರಕ್ಕೆ ಪರ್ಯಾಯವಾಗಿ ಒಂದು 'ಪ್ರಜಾಸತ್ತಾತ್ಮಕ' ಸರ್ಕಾರವನ್ನು ಪ್ರಾಯೋಜಿಸಿತು. ಇದರಡಿಯಲ್ಲಿ ಜನ, ವಿಶೇಷವಾಗಿ ಮಹಿಳೆಯರು ಸಂಸದೀಯ ಪ್ರಜಾಪ್ರಭುತ್ವವೊಂದು ಕೊಡಮಾಡುವ, ಪಾಶ್ಚಿಮಾತ್ಯ ನಾಗರೀಕತೆ ಕಲ್ಪಿಸಿಕೊಡುವ ಮುಕ್ತ ಅವಕಾಶಗಳನ್ನೂ, ಮುಕ್ತ ಮಾರುಕಟ್ಟೆ ತೆರೆದಿಡುವ ಎಲ್ಲ ಸುಖ–ಸೌಲಭ್ಯಗಳನ್ನೂ ಆನಂದಿಸಿದರು. ದೇಶದ ಇತ್ತೀಚಿನ ಇತಿಹಾಸದಲ್ಲಿ ಎಂದೂ ಅನುಭವಿಸದಿದ್ದ ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಅವರು ಅನುಭವಿಸಿದರು. ಮಹಿಳೆಯರು ಮನೆಗಳನ್ನು ಬಿಟ್ಟು ಹೊರಬಂದು ಶಿಕ್ಷಣ ಪಡೆದರು. ಉದ್ಯೋಗಸ್ಥರಾಗಿ ಪುರುಷರಿಗೆ ಸಮನಾದ ಸ್ವಾತಂತ್ರ್ಯ ಅನುಭವಿಸಿದರು.

## ವಿಫಲವಾದ ಅಮೆರಿಕಾದ ಪ್ರಜಾಸತ್ತೆಯ ಪ್ರಾಯೋಜಕತ್ವ

ಆದರೆ ಇದೆಲ್ಲವೂ ವಿದೇಶಿ ಶಕ್ತಿಯೊಂದು ಪ್ರಾಯೋಜಿಸಿದ್ದ 'ವ್ಯವಸ್ಥೆ'ಯ ಭಾಗವಾಗಿತ್ತು. ಹಾಗಾಗಿ ಅದು ಬಹುಕಾಲ ನಡೆಯದಂತಾಗಿತ್ತು. ಅಮೆರಿಕಾ ಇಪ್ಪತ್ತು ವರ್ಷಗಳ ಕಾಲ ಎರಡು ದಶಲಕ್ಷ ಕೋಟಿ ಡಾಲರುಗಳನ್ನು ತಂದು ಅಲ್ಲಿ ಸುರಿದರೂ, ಅತ್ಯಾಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಹೋರಾಡಿದ ಸೇನಾ ಕಾರ್ಯಾಚರಣೆಯ ಹೊರತಾಗಿಯೂ ದೇಶದ ಮೂಲೆ ಮೂಲೆಗಳಲ್ಲಿ ಸಕ್ರಿಯವಾಗಿದ್ದ ತಾಲಿಬಾನಿ ಹೋರಾಟಗಾರರ ದಾಳಿಗಳ ಎದುರು, ಅಲ್ಲಿ ಇಡೀ ದೇಶವನ್ನು ವ್ಯಾಪಿಸಿದ ಒಂದು ಸ್ಥಿರವಾದ 'ಪ್ರಜಾಸತ್ತಾತ್ಮಕ' ಆಡಳಿತವನ್ನು ನೆಲೆಗೊಳಿಸದಾದರು. ಇದಕ್ಕೆ ತಾಲಿಬಾನಿಗಳಿಗೆ ಶಸ್ತ್ರಾಸ್ತ್ರ ಪೂರೈಕೆ, ತರಬೇತಿ ಮತ್ತು ಧನ ಸಹಾಯದ ಮೂಲಕ ನೆರವಾಗುತ್ತಿದ್ದ ಪಾಕಿಸ್ತಾನದ ಪಾತ್ರವೂ ಇತ್ತು. ಕೊನೆಗೆ ಅಮೆರಿಕಾ ಹತಾಶವಾಗಿ ತನ್ನ ಈ ಪ್ರಯತ್ನವನ್ನು ಕೈಬಿಡುವ ತೀರ್ಮಾನಕ್ಕೆ ಬಂದು ಆಗಸ್ಟ್ ತಿಂಗಳು ತನ್ನ ಸೇನೆಯನ್ನು ಪೂರ್ಣವಾಗಿ ಅಲ್ಲಿಂದ ಹಿಂತೆಗೆದುಕೊಂಡಿತು. ಅದರ ಬೆನ್ನಲ್ಲೇ ತಾಲಿಬಾನಿ ಪಡೆಗಳು ದೇಶವನ್ನು

ಪೂರ್ಣವಾಗಿ ವಶಪಡಿಸಿಕೊಂಡವು. ಇದರ ಫಲವಾಗಿ ಅಲ್ಲಿ ಸ್ಥಾಪಿತವಾಗಿದ್ದ 'ಪ್ರಜಾಸತ್ತಾತ್ಮಕ' ಸರ್ಕಾರದ ಅಧಿಪತಿಗಳು ದೇಶಬಿಟ್ಟು ಪಲಾಯನ ಗೈದರು. ತಾಲಿಬಾನಿಗಳ ಪೂರ್ಣ ಆಡಳಿತಕ್ಕೆ ದಾರಿ ಮಾಡಿಕೊಟ್ಟರು. ಇಲ್ಲಿಗೆ ಜನ ಕಳೆದ ಇಪ್ಪತ್ತು ವರ್ಷಗಳ ಕಾಲ ಅನುಭವಿಸಿದ ಪ್ರಜಾಸತ್ತಾತ್ಮಕ ಸರ್ಕಾರದಡಿಯ ಮುಕ್ತತೆಯ ವಾತಾವರಣ ಕೊನೆಗೊಂಡಿತು.

## ನಮ್ಮ ಮೌಲ್ಯಗಳು–ನಂಬಿಕೆಗಳು ಅವರದಾಗವು...

ಇದಕ್ಕಾಗಿ ಆಫ್ಘನ್ ಜನತೆಯ ಪರವಾಗಿ ಸಹಾನುಭೂತಿ ವ್ಯಕ್ತಪಡಿಸುವ ಜನ ಎರಡು ಅಂಶಗಳನ್ನು ಮರೆಯುತ್ತಾರೆನಿಸುತ್ತದೆ. ಒಂದು, ಜಗತ್ತಿನ ಅತ್ಯಂತ ಪ್ರಬಲ ಸೇನಾ ಶಕ್ತಿಯೆನಿಸಿರುವ ಅಮೆರಿಕಾದ ಸೇನೆಯನ್ನು ಸೀಮಿತ ಸೇನಾ ಶಕ್ತಿಯ ತಾಲಿಬಾನಿಗಳು ಮಣಿಸಿದ್ದಾರೆಂದರೆ ಅದು ಸ್ಥಳೀಯ ಜನಸಮುದಾಯದ ಒಂದು ಗಣನೀಯ ಭಾಗದ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಇನ್ನೊಂದು, ಯಾವುದೇ ದೇಶದ ಹೋರಾಟಗಾರರು ತಮ್ಮ ಹೋರಾಟದಲ್ಲಿ ಜಯಶಾಲಿಯಾದ ಮೇಲೆ ತಾನು ಪ್ರತಿಪಾದಿಸಿದ ಮತ್ತು ನಂಬಿದ ಮೌಲ್ಯಗಳಿಗನುಸಾರವಾದ ಸರ್ಕಾರವನ್ನು ರಚಿಸುವುದು ಅದರ ಹಕ್ಕು. ಇಂದು ನಾವು ಇದ್ದುದರಲ್ಲಿ ಒಳ್ಳೆಯದೆಂದು ಪಶ್ಚಿಮದಿಂದ ಇಷ್ಟಪಟ್ಟು ಪಡೆದ ಒಂದು ಉದಾರವಾದಿ ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರಿಗೆ ತಾಲಿಬಾನಿಗಳ ನಂಬಿಕೆಗಳು ಅನಾಗರಿಕವೂ ಕ್ರೂರವಾಗಿಯೂ ಕಾಣಬಹುದು. ಆದರೆ ಅವು ತಮ್ಮ ಒಳಿತಿಗೆಂದೇ ಸಾರಲ್ಪಟ್ಟ ಧಾರ್ಮಿಕ ನಿರ್ದೇಶನಗಳನ್ನು ಪಾಲಿಸುವ ಧಾರ್ಮಿಕ ಶ್ರದ್ಧೆಯ ಭಾಗವೇ ಆಗಿರಬಹುದು. ಏಕೆಂದರೆ ಯಾವ ಆಡಳಿತಗಾರರೂ ಜನರಿಗೆ ಹಿಂಸೆ ಕೊಡುವಂತಹ ಕಾರ್ಯವೈಖರಿಯನ್ನು ಅನುಸರಿಸಬಯಸುವುದಿಲ್ಲ. ಆದ್ದರಿಂದ ಪಶ್ಚಿಮದ ಉದಾರವಾದಿ ಪ್ರಜಾಸತ್ತೆಯ ಸ್ವಾತಂತ್ರ್ಯ–ಸುಖ–ಸೌಲಭ್ಯಗಳ ರುಚಿ ಕಂಡಿರುವ ಆಫ್ಘನರೂ ಸೇರಿದಂತೆ 'ನಾವು' ಅನಾಗರಿಕ–ಕ್ರೂರ ಎಂದು ಕರೆಯುವ ಸರ್ಕಾರದ ವರ್ತನೆಗಳ ಮೂಲ ತಾಲಿಬಾನಿಗಳು ನಿಜ ಇಸ್ಲಾಂ ಎಂದು ನಂಬಿರುವ ಇಸ್ಲಾಂನ ಆವೃತ್ತಿಯಲ್ಲೇ ಇರುವಂತೆ ಕಾಣುತ್ತದೆ.

ಜಗತ್ತಿನ ಬಹುತೇಕ ಇಸ್ಲಾಮೀ ದೇಶಗಳು ನಾವು ನಾಗರಿಕ ಎಂದು ಕರೆಯುವ ಸ್ವಾತಂತ್ರ್ಯಗಳ ಮೇಲೆ ನಿರ್ಬಂಧಗಳಿರುವ 'ಧಾರ್ಮಿಕ' ಪ್ರಭುತ್ವಗಳೇ ಆಗಿದ್ದು ಅವು ಒಂದೊಂದೂ ಒಂದೊಂದು ರೀತಿಯ ಸರ್ಕಾರಗಳನ್ನು ಹೊಂದಿರುವುದು, ಇಸ್ಲಾಂ ಹಲವು ಆವೃತ್ತಿಗಳನ್ನು ಹೊಂದಿರುವುದನ್ನು ಸೂಚಿಸುತ್ತದೆಯಲ್ಲದೆ, ಅದು ಸಂಸದೀಯ ಪ್ರಜಾಸತ್ತಾತ್ಮಕ ಸರ್ಕಾರದ ಪದ್ಧತಿಯು ಬೇಡುವ, ಸರ್ಕಾರವನ್ನು ಧರ್ಮದಿಂದ ದೂರವಿಡುವ ಸೆಕ್ಯುಲರಿಸಂನ್ನು ಒಪ್ಪುವುದಿಲ್ಲ. ಸೆಕ್ಯುಲರಿಸಂನ್ನು ಒಪ್ಪಿಕೊಂಡಿರುವ ಇಸ್ಲಾಮಿ ದೇಶಗಳು ಒಂದಲ್ಲ ಒಂದು ರೀತಿಯ ಸರ್ವಾಧಿಕಾರಗಳಿಗೆ ಒಳಪಟ್ಟ ಅಥವಾ ಪಾಕಿಸ್ತಾನದಂತೆ ದೇಶದಾಡಳಿತದಲ್ಲಿ ಮಿಲಿಟರಿಯೇ ನಿರ್ಣಾಯಕ ಶಕ್ತಿಯಾಗಿರುವ ಅಥವಾ ಬಾಂಗ್ಲಾದೇಶದಂತೆ ಮತೀಯ ಮೂಲಭೂತವಾದಿ ಪಕ್ಷವೊಂದು ವಿರೋಧ ಪಕ್ಷವಾಗಿರುವ ದೇಶವಾಗಿರುತ್ತವೆ. ಮೊದಲ ಮಹಾಯುದ್ಧದ ಪರಿಣಾಮವಾಗಿ ಇಸ್ಲಾಮಿ ರಾಷ್ಟ್ರಗಳ (ಒಟ್ಟೋಮನ್) ಸಾಮ್ರಾಜ್ಯ 'ಖಿಲಾಫತ್' ವಿಘಟನೆಗೊಂಡು ಅದರ ಖಲೀಫ ಪದಚ್ಯುತನಾಗಿ ಅದರ ಹೃದಯಸ್ಥಾನದಲ್ಲಿದ್ದ ತುರ್ಕಿಸ್ತಾನ ಮುಸ್ತಫಾ ಕೆಮಾಲ್ ಅತಾತುರ್ಕನೆಂಬ ಸೆಕ್ಯುಲರ್ ಸುಧಾರಣಾವಾದಿಯ ಪ್ರಯತ್ನಗಳಿಂದ ಆಗ ಇಸ್ಲಾಮಿಕ್ ಜಗತ್ತಿನ ಏಕೈಕ ಉದಾರವಾದಿ ಪ್ರಜಾಸತ್ತಾತ್ಮಕ ದೇಶವೆನಿಸಿದ್ದ, ಈಗ ಥಾಯಿಪ್ ಎರ್ಡೋಗನ್ ಎಂಬ ಸರ್ವಾಧಿಕಾರಿಯ ಆಡಳಿತಕ್ಕೆ ಸಿಲುಕಿ ಏನಾಗಿದೆ ನೋಡಿ!

## ಪಶ್ಚಿಮದ ನಾಗರೀಕತೆಯೊಂದಿಗೆ ಇಸ್ಲಾಂನ ಐತಿಹಾಸಿಕ ಸಂಘರ್ಷ

ಹಾಗೆ ನೋಡಿದರೆ ತನ್ನ ಪ್ರಾಚೀನ ಇತಿಹಾಸದಲ್ಲಿ ಗಣಿತ, ಖಗೋಳಶಾಸ್ತ್ರ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಜಾಗತಿಕ ಮಾನ್ಯತೆಯ ಸಾಧನೆಗಳನ್ನು ಮಾಡಿರುವ ಇಸ್ಲಾಂ, ತನ್ನ ಆಧುನಿಕ ಇತಿಹಾಸದುದ್ದಕ್ಕೂ ಪಶ್ಚಿಮದ ನಾಗರೀಕತೆಯನ್ನು 'ಸೈತಾನಿ' ನಾಗರೀಕತೆಯೆಂದು ಕರೆಯುತ್ತಾ ಅದರ ಎಲ್ಲ ಉತ್ಪನ್ನಗಳನ್ನೂ ವಿರೋಧಿಸುತ್ತಾ ಬಂದಿದೆ. ಅದು, ಸಮುದಾಯ ಮತ್ತು ಕುಟುಂಬ ವ್ಯವಸ್ಥೆಗಳನ್ನು ನಾಶ ಮಾಡುವಂತಹ ಭೌತಿಕ ಸಂಶೋಧನೆಗಳು ಮತ್ತು ಸಿದ್ಧಾಂತಗಳ ಮೂಲಕ ವ್ಯಕ್ತಿ ಸ್ವಾತಂತ್ರ್ಯವನ್ನು ಒಂದು ಪರಮ ಮೌಲ್ಯವನ್ನಾಗಿ ಎತ್ತಿಹಿಡಿಯುವುದೆಂಬುದೇ ಇದಕ್ಕೆ ಕಾರಣವಾಗಿದೆ. ಹಾಗಾಗಿ ಇದಕ್ಕೂ ಪಶ್ಚಿಮದ ನಾಗರೀಕತೆಯ ಮೂಲ ಮಾತೃಕೆಯಾದ ಕ್ರಿಶ್ಚಿಯನ್ ಧರ್ಮಕ್ಕೂ ಮಧ್ಯಪ್ರಾಚ್ಯದಿಂದ ಹಿಡಿದು ಯೂರೋಪಿನ ತುತ್ತತುದಿಯವರೆಗೆ ನಡೆದ ರಕ್ತಸಿಕ್ತ ಘರ್ಷಣೆ ಇತಿಹಾಸದ ಅತ್ಯಂತ ರಕ್ತಸಿಕ್ತ ಅಧ್ಯಾಯಗಳಲ್ಲೊಂದಾಗಿ ದಾಖಲಾಗಿದೆ. ಉದಾರವಾದಿ ಪ್ರೊಟೆಸ್ಟಂಟ್ ಧರ್ಮದ ಹುಟ್ಟಿಗೆ ಕಾರಣವಾದ ಕ್ರಿಶ್ಚಿಯನ್ ಧರ್ಮದಲ್ಲಾದ ಕ್ರಾಂತಿ ಇಸ್ಲಾಮಿ ಪುರೋಹಿತಶಾಹಿಯಲ್ಲಿ ತಲ್ಲಣ ಹುಟ್ಟಿಸಿ ಅದು ಧರ್ಮ ಗ್ರಂಥಗಳಿಗೆ, ನೀತಿ ನಿರ್ದೇಶನಗಳಿಗೆ ಅಂಟಿಕೊಳ್ಳುವುದಷ್ಟೇ ಅಲ್ಲದೆ ಅವನ್ನು ಮತ್ತಷ್ಟು ಕಠಿಣ ಮಾಡಲು ಪ್ರೇರೇಪಿಸಿತು.

## ಇಸ್ಲಾಂನ ಖಡ್ಗ ಪ್ರಿಯತೆ: ಗಾಂಧಿ ವಿಶ್ಲೇಷಣೆ

ಇಸ್ಲಾಂ ತಾನು ಮಡಿ ಮಡಿಯಾಗಿ ಉಳಿಯುವ ಹಠದಲ್ಲಿ ಕಾಲಕ್ಕೆ ತಕ್ಕ ಸುಧಾರಣೆಗಳನ್ನು ನಿರಾಕರಿಸುತ್ತಾ ಬಂದು ಒಂದು ಮುಚ್ಚಿಕೊಂಡ ಧರ್ಮವೆನಿಸಿಕೊಂಡುಬಿಟ್ಟಿದೆ. ಇದರ ಪರಿಣಾಮವೆಂದರೆ ಬಹುತೇಕ ಇಸ್ಲಾಮಿ ದೇಶಗಳು ತೈಲ ಮತ್ತು ಅನಿಲ ಸಮೃದ್ಧಿಯಿಂದ ಇವು ಸಿರಿವಂತ ದೇಶಗಳಾದರೂ, ಅಲ್ಲಿ ಪುರುಷ ಪಾರಮ್ಯದ ಪ್ರಬಲ ಪುರೋಹಿತಶಾಹಿ ಹಿಡಿತದಲ್ಲಿರುವ ಧರ್ಮವೇ ಅಲ್ಲಿನ ರಾಜಕಾರಣವನ್ನು ನಿರ್ದೇಶಿಸುತ್ತಿದೆ. ಜಾಗತಿಕ ಇಸ್ಲಾಮಿಕ್ ಸಾಮ್ರಾಜ್ಯದ ಕನಸನ್ನು ಹುಟ್ಟು ಹಾಕಿದೆ. ಅದು ಮೊದಲಿಂದಲೂ ಆಧ್ಯಾತ್ಮಿಕತೆಗಿಂತ ಹೆಚ್ಚಾಗಿ ಸಾಮಾಜಿಕ–ರಾಜಕೀಯ ಧರ್ಮವಾಗಿ 'ಖಡ್ಗ'ಕ್ಕೆ ಪ್ರಾಧಾನ್ಯ ನೀಡಿದ ಧರ್ಮವೆಂದೇ ಹೆಸರಾಗಿದ್ದು ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲೂ– ವಿಶೇಷವಾಗಿ ಖಿಲಾಫತ್ ಚಳುವಳಿ ಮತ್ತು ಮಾಪಿಳ್ಳೆ ದಂಗೆಯ ಸಂದರ್ಭಗಳಲ್ಲಿ ಈ ಖಡ್ಗ ಪ್ರಾಧಾನ್ಯತೆಯ ಚರ್ಚೆಗೆ ಬಂದು ಮಹಾತ್ಮ ಗಾಂಧಿಯವರ ಉದಾರ ನಿಲುವುಗಳ ಹೊರತಾಗಿಯೂ ಅದು ದೇಶ ರಕ್ತಸಿಕ್ತ ವಿಭಜನೆಯತ್ತ ಹೊರಳಲು ಒಂದು ಪ್ರಬಲ ಕಾರಣವಾಯಿತು. ಇಸ್ಲಾಂನಲ್ಲಿ, ಭಾರತದ ಭಕ್ತಿ ಚಳುವಳಿಯ ಸಂಸರ್ಗದಿಂದ 'ಸೂಫಿ' ಎಂಬ ಭಕ್ತಿ ಪಂಥ ರೂಪಿತವಾದರೂ, ಸಾಂಪ್ರದಾಯಿಕ (ವಹಾಬಿ) ಇಸ್ಲಾಂ ಅದನ್ನು ಅಮಾನ್ಯ ಮಾಡುವ ಸತತ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಇನ್ನು ಸುನ್ನಿ ಬಹುಸಂಖ್ಯಾತರ ದೇಶಗಳಲ್ಲಿ ಅವರು ಮತ್ತು ಶಿಯಾಗಳ ನಡುವೆ ಮತ್ತು ಶಿಯಾ ಬಹುಸಂಖ್ಯಾತರ ದೇಶಗಳಲ್ಲಿ ಅವರು ಮತ್ತು ಸುನ್ನಿಗಳ ನಡುವಣ ಸಂಬಂಧದಲ್ಲಿ 'ಖಡ್ಗ'ವೇ ಪ್ರಧಾನವಾಗಿರುವುದನ್ನು ನಾವು ಈ ಆಧುನಿಕ ಜಗತ್ತಿನಲ್ಲೂ ಕಾಣುತ್ತಿದ್ದೇವೆ. ಗಡಿನಾಡ ಗಾಂಧಿ ಎಂದೇ ಹೆಸರಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನರ ವಾಯುವ್ಯ ಗಡಿ ಪ್ರಾಂತ್ಯ ಈಗ ಹೇಗೆ ಬಂದೂಕುಗಳ ನಾಡಾಗಿದೆ ಎಂಬುದು ಇಸ್ಲಾಂನಲ್ಲಿ ಅಂತರ್ಗತವಾಗಿರುವಂತೆ ತೋರುವ ಈ 'ಖಡ್ಗಪ್ರಿಯತೆ'ಯ ಬಗ್ಗೆ ಎಲ್ಲವನ್ನೂ ಹೇಳುವಂತಿದೆ. ಆದರೆ ಖಿಲಾಫತ್ ಚಳುವಳಿಯ ಸಂದರ್ಭದಲ್ಲಿ ಗಾಂಧಿಯವರು ವಿಶ್ಲೇಷಿಸಿದಂತೆ ಅದು ಪೈಗಂಬರರ ಮೂಲ ಉಪದೇಶಗಳ ಭಾಗವಾಗಿರದೆ, ಆ ಧರ್ಮ ಬೆಳೆದ ಸನ್ನಿವೇಶಗಳಲ್ಲಿ ಪಡೆದ ಗುಣವಾಗಿರಬಹುದು. ಹಾಗಾಗಿಯೇ ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಸಂಖ್ಯಾತ ಮುಸ್ಲಿಮರು ಗಾಂಧಿಯವರ ಅಹಿಂಸಾತ್ಮಕ ಹೋರಾಟದ ಭಾಗವಾಗಲು ಸಾಧ್ಯವಾಯಿತು. ಆದರೆ ಈಗ ಇಸ್ಲಾಂ, ಮೇಲೆ ತಿಳಿಸಿದಂತೆ ಒಂದು ಜಾಗತಿಕ ರಾಜಕೀಯ ಶಕ್ತಿಯಾಗಿ ಬೆಳೆದು ನಿಂತಿದ್ದು ಅದು ಖಡ್ಗ ಪ್ರಿಯತೆಗೆ ವಾಪಸಾದಂತಿದೆ. ಐ.ಎಸ್.(ಇಸ್ಲಾಮಿಕ್ ಸ್ಟೇಟ್) ಎಂಬ ಸಂಘಟನೆ ಜಾಗತಿಕ ಇಸ್ಲಾಮಿ ಸಾಮ್ರಾಜ್ಯ ಸ್ಥಾಪಿಸುವ ಘೋಷಣೆಯೊಂದಿಗೆ ನಡೆಸುತ್ತಿರುವ ಬರ್ಬರ ಹಿಂಸಾಚಾರ ಮತ್ತು ಅದಕ್ಕೆ ಜಗತ್ತಿನಾದ್ಯಂತದ ಮುಸ್ಲಿಂ ಯುವಕ–ಯುವತಿಯರಿಂದ ದೊರೆಯುತ್ತಿರುವ ಬೆಂಬಲ ಇದಕ್ಕೆ ಸಾಕ್ಷಿಯಂತಿದೆ. (ಈಗ ಇದರ ಹಾವಳಿ ನಿಯಂತ್ರಣಕ್ಕೆ ಬಂದಂತಿದೆ.)

## ಬದಲಾವಣೆ ಒಳಗಿನಿಂದ ಆರಂಭವಾಗಬೇಕು

ಹಾಗಾಗಿ ತಾಲಿಬಾನ್ ಆಡಳಿತದಲ್ಲಿ ಮಾತ್ರವಲ್ಲ, ಬಹುತೇಕ ಇಸ್ಲಾಮಿ ದೇಶಗಳಲ್ಲಿ 'ಪ್ರಜೆ' ಎಂಬ ಆಧುನಿಕ ಪರಿಕಲ್ಪನೆ ಅಸ್ತಿತ್ವದಲ್ಲಿ ಇರಲಾರದು. ಅಲ್ಲಿರುವುದು ಧಾರ್ಮಿಕ ಸದಸ್ಯತನ. ಅಂದರೆ ಆಯಾ ದೇಶಗಳ ಪರಮ ಧರ್ಮಗುರುಗಳು ನಿರೂಪಿಸುವ ಷರಿಯತ್‌ಗೆ ನಿಷ್ಠೆ. ಹಾಗಾಗಿ ಇಂದು ಆಫ್ಘನಿಸ್ತಾನದ ತಾಲಿಬಾನಿಗಳನ್ನು ಶಪಿಸಿ ಪ್ರಯೋಜನವಿಲ್ಲ. ಅವರೂ ಈಗ ಅಂತಾರಾಷ್ಟ್ರೀಯ ಒತ್ತಡಕ್ಕೆ ಒಳಗಾದಂತೆ ತಮ್ಮ ಸರ್ಕಾರ ಹಿಂದಿನಂತೆ ಕಠಿಣ ನಿರ್ಬಂಧಗಳನ್ನು ಹೇರುವುದಿಲ್ಲ ಎಂದು ತನ್ನ ಪ್ರಜೆಗಳಿಗೆ ಅಭಯ ನೀಡುತ್ತಿದೆ. ಆದರೆ ಅದನ್ನು ಯಾರೂ ನಂಬುತ್ತಿಲ್ಲ. ಆದ್ದರಿಂದ ಇಂದು ಅಗತ್ಯವಾಗಿರುವುದು ತಾಲಿಬಾನಿಗಳಿಗೆ ಜನ್ಮ ನೀಡುವ ಇಸ್ಲಾಂನ ಆವೃತ್ತಿಗಳ ಕುರಿತ ಚರ್ಚೆ, ಮಂಥನ ಮತ್ತು ಪ್ರಜಾಸತ್ತಾತ್ಮಕ ಉದಾರೀಕರಣ. ಆದರೆ ಅದು ಆಯಾ ದೇಶಗಳ ಒಳಗಿನಿಂದಲೇ ಆರಂಭವಾಗಿ ಹೊರಗಿನ ಬೆಂಬಲವನ್ನು ನಿರೀಕ್ಷಿಸಬಹುದೇ ಹೊರತು ಹೊರಗಿನ ಸಹಾನುಭೂತಿಗಳು ಮತ್ತು ಖಂಡನೆಗಳು ಯಾವುದೇ ಪ್ರಯೋಜನಕ್ಕೆ ಬರಲಾರದು.

**ನಂತರದ ಟಿಪ್ಪಣಿ:** ಆಫ್ಘನಿಸ್ತಾನದ ತಾಲಿಬಾನಿಗಳಲ್ಲೇ(ಮುಖ್ಯವಾಗಿ ಹಕ್ಕಾನಿ ಮತ್ತು ಮುಲ್ಲಾ ಗುಂಪುಗಳ ನಡುವೆ) ವಿಭಿನ್ನ ನಿಲುವುಗಳ ಹಲವು ಗುಂಪುಗಳಿದ್ದು ಈ ಕಾರಣದಿಂದಲೇ ಅಲ್ಲಿ ಒಂದು ನಿಯಮಿತ ಸರ್ಕಾರ ಅಸ್ತಿತ್ವಕ್ಕೆ ಬರಲಾಗಿಲ್ಲ. ಇದೂ ತಾಲಿಬಾನಿಗಳ ಮಧ್ಯೆ ಒಂದು ವಿಚಾರ ಮಂಥನಕ್ಕೆ ಕಾರಣವಾಗಬಹುದೆಂಬ ಅಭಿಪ್ರಾಯವಿದೆ. ಹಾಗೇ ಅಮೆರಿಕಾ ಪ್ರಾಯೋಜಿಸಿದ್ದ ಪ್ರಜಾಸತ್ತಾತ್ಮಕ ಆಡಳಿತದ ಅಡಿಯಲ್ಲಿ ರೂಪುಗೊಂಡ ಮಹಿಳೆಯರೂ ಗಣನೀಯ ಸಂಖ್ಯೆಯಲ್ಲಿರುವ ಮಾನವ ಹಕ್ಕುಗಳ ಗುಂಪುಗಳು ಸಕ್ರಿಯವಾಗಿ(ಈ ಗುಂಪುಗಳು ಈಗಾಗಲೇ ಪ್ರತಿಭಟನೆಗಳನ್ನು ನಡೆಸಿರುವ ಸುದ್ದಿಗಳು ಬರುತ್ತಿವೆ) ತಾಲಿಬಾನಿ ಆಡಳಿತವನ್ನು ಮೃದುಗೊಳಿಸುವ ಮೂಲಕ ಅದು ನಂಬಿರುವ ಇಸ್ಲಾಂನ ಆವೃತ್ತಿಯನ್ನೂ ಪ್ರಭಾವಿತಗೊಳಿಸಬಹುದು ಎಂಬ ನಿರೀಕ್ಷೆಯೂ ಇದೆ.

ಅಕ್ಟೋಬರ್-೨ : ಗಾಂಧಿ ಜಯಂತಿ

ಸ್ಮರಣೆ

# ಮಹದೇವ ದೇಸಾಯಿ: ಈ ಮಹಾನ್ ಗಾಂಧಿವಾದಿಗೊಂದು ನಮನ

-ರಾಮಚಂದ್ರ ಗುಹಾ

ಗಾಂಧಿಯವರ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿಯವರು. ಅವರಿಗೆ ಕೇವಲ ಅವರ ಕಾರ್ಯಕ್ರಮಗಳನ್ನು ಆಯೋಜಿಸಿ ಅವರ ಭಾಷಣ-ಮಾತುಗಳನ್ನು ದಾಖಲಿಸಿಕೊಳ್ಳುವ ಚಾಕರಿಯ ಕಾರ್ಯದರ್ಶಿಯಾಗಿರಲಿಲ್ಲ. ಗಾಂಧೀಜಿಯವರನ್ನು ಆರಾಧಿಸುವ ಭಕ್ತರಾಗಿರುವ ವೇಳೆಯಲ್ಲೇ ಅವರ ರಚನಾತ್ಮಕ ಟೀಕಾಕಾರರೂ ಆಗಿ ಗಾಂಧೀಜಿಯ ಗೌರವಕ್ಕೆ ಪಾತ್ರರಾದ ಮಾರ್ಗದರ್ಶಿ ಮತ್ತು ಪ್ರಾಣಸಖರೂ ಆಗಿದ್ದರು. ನಾವು ಸ್ವಾತಂತ್ರ್ಯ ದಿನದಂದು ಸ್ವಾತಂತ್ರ್ಯಹೋರಾಟಗಾರರೆಂದು ಸ್ಮರಿಸುವ ಉನ್ನತ ನಾಯಕರ ಸಾಲಿನಲ್ಲಿ ಮಹದೇವ ದೇಸಾಯಿಯವರಿಗೂ ಒಂದು ಮುಖ್ಯ ಸ್ಥಾನ ಇರಬೇಕು ಎನ್ನುತ್ತಾರೆ ಲೇಖಕರು.-ಸಂ.



ಇತರ ಎಲ್ಲರಂತೆ ನಾನೂ ಕೂಡ ೧೯೪೭ರ ಆಗಸ್ಟ್ ೧೫ ಎಂದರೆ ಅದು ಭಾರತದ ಸ್ವತಂತ್ರ ಸರ್ಕಾರವು ಅಧಿಕಾರವನ್ನು ವಹಿಸಿಕೊಂಡ ದಿನ ಎಂದು ಭಾವಿಸುತ್ತಲೇ ಬೆಳೆದವನು. ಇನ್ನೊಂದು ಅರ್ಥವೂ ಈ ದಿನಕ್ಕೆ ಇದೆ ಎಂಬುದು ಇತ್ತೀಚೆಗೆ ನನ್ನ ಅರಿವಿಗೆ ಬಂತು. ೧೯೪೭ ರ ಆಗಸ್ಟ್ ೧೫ರ ಹಾಗೆಯೇ, ಮಹದೇವ ದೇಸಾಯಿಯವರು ತಾವು ಬಂಧನದಲ್ಲಿದ್ದಾಗ ಕಾರಾಗೃಹದಲ್ಲೇ ಮರಣ ಹೊಂದಿದ ದಿನವಾದ ೧೯೪೨ರ ಆಗಸ್ಟ್ ೧೫ ಕೂಡ ಈಗ ನನ್ನ ಪ್ರಜ್ಞೆಯ ಭಾಗವಾಗಿದೆ. ಅವರ ಕೊಡುಗೆಯ ಹೊರತಾಗಿ ಭಾರತವು ಬ್ರಿಟಿಷ್ ಆಳ್ವಿಕೆಯಿಂದ ಎಂದಿಗೂ ಸ್ವತಂತ್ರವಾಗುತ್ತಲೇ ಇರಲಿಲ್ಲವೋ ಏನೋ! ಆದರೂ ಈ ಮಹಾನ್ ದೇಶಪ್ರೇಮಿಗೆ ಇಂದಿನವರೆಗೂ ಯಾವ ಗೌರವಗಳೂ ಸಲ್ಲದೆ ಅವರು ಅಜ್ಞಾತರಾಗಿಯೇ ಉಳಿದು ಹೋಗಿದ್ದಾರೆ.

ಬಹುಶಃ ಅದು ಹಾಗೆಯೇ ಇರಬೇಕೆಂದು ಅವರು ಬಯಸಿರಬಹುದು. ೧೯೧೭ರಲ್ಲಿ ಅಹಮದಾಬಾದ್‌ನಲ್ಲಿ ಗಾಂಧೀಜಿಯವರ ಬಳಗವನ್ನು ಸೇರಿದ ದಿನದಿಂದ ಆಗಾಖಾನ್ ಅರಮನೆಯಲ್ಲಿ ಇಹಲೋಕ ತ್ಯಜಿಸುವವರೆಗಿನ ಕಾಲು ಶತಮಾನಗಳ ಕಾಲ ಮಹದೇವ ಅವರು ಸಂಪೂರ್ಣವಾಗಿ ಗಾಂಧೀಜಿಯವರ ಸೇವೆಯಲ್ಲಿ ಮುಳುಗಿ ಹೋಗಿದ್ದರು. ಅವರು ಗಾಂಧೀಜಿಯವರ ಕಾರ್ಯದರ್ಶಿ, ಬೆರಳಚ್ಚುಗಾರ, ಅನುವಾದಕ, ಸಲಹಾಕಾರ, ಪತ್ರವಾಹಕ, ಸಂವಾದಕ, ತೊಂದರೆಗಳ ನಿವಾರಕ, ಇನ್ನೂ ಏನೇನೋ ಆಗಿದ್ದರು. ಅವರು ತಮ್ಮ ನಾಯಕನ ಅಡುಗೆಯವರೂ ಕೂಡ ಆಗಿದ್ದುದು ವಿಶೇಷ. ಅವರು ತಯಾರಿಸುತ್ತಿದ್ದ ಖಿಚಡಿಯನ್ನು ಮೆಚ್ಚಿ ಗಾಂಧೀಜಿಯವರು ಅವರನ್ನು ಹೊಗಳುತ್ತಿದ್ದರು.

ಗಾಂಧೀಜಿಯವರ ಕೆಲಸ ಮತ್ತು ಪ್ರಚಾರ ಕಾರ್ಯಗಳಿಗೆ ಅವರು ಎಷ್ಟು ಅನಿವಾರ್ಯವಾಗಿದ್ದರು ಎಂಬುದಕ್ಕೆ ಅತ್ಯುತ್ತಮ ಪುರಾವೆಯನ್ನು ಸ್ವತಃ ಗಾಂಧೀಜಿಯವರೇ ಒದಗಿಸುತ್ತಾರೆ. ೧೯೧೮ರಲ್ಲಿ ಮಹದೇವ ಅವರು ಸಬರಮತಿ ಆಶ್ರಮವನ್ನು ಸೇರಿದ ಒಂದು ವರ್ಷದ ನಂತರ ಗಾಂಧೀಜಿಯವರು ತಮ್ಮ ಅಣ್ಣನ ಮಗ ಮಗನಲಾಲ್ ಜೊತೆ ಮಾತನಾಡುತ್ತಾ, ತಮ್ಮ ಕಾರ್ಯದರ್ಶಿಯು "ನನ್ನ ಕೈ, ಪಾದ, ಮತ್ತು ಮೆದುಳು ಎಲ್ಲವೂ ಆಗಿದ್ದು, ಅವರಿಲ್ಲದೆ ನಾನು ನನ್ನ ಕಾಲುಗಳ ಮತ್ತು ಮೆದುಳಿನ ಸ್ವಾಧೀನ ಕಳೆದುಕೊಂಡಂತೆ ಭಾಸವಾಗುತ್ತದೆ. ಅವರನ್ನು ನೋಡಿದಷ್ಟೂ ಅವರ ಸದ್ಗುಣ ಎದ್ದು ಕಾಣುತ್ತದೆ. ಅವರು ಸದ್ಗುಣಶೀಲರು, ಅಷ್ಟೇ ಮೇಧಾವಿಯೂ ಕೂಡ ಹೌದು" ಎಂದು ಹೇಳುತ್ತಿದ್ದರು.

ಇಪ್ಪತ್ತು ವರ್ಷಗಳ ನಂತರ ಅಗಾಧ ಕೆಲಸದ ಒತ್ತಡದಿಂದ ದಣಿದು, ವಿಶ್ರಾಂತಿ ತೆಗೆದುಕೊಳ್ಳುವುದಕ್ಕೂ ಒಪ್ಪದೆ ಮಹದೇವ ಅವರು ಕುಸಿದು ಹೋಗುವ ಹಂತವನ್ನು ತಲುಪಿದಾಗ ಗಾಂಧೀಜಿ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ: "ಕೆಲಸ ಎಂಬುದು ನಿಮ್ಮ ಪಾಲಿಗೆ ಒಂದು ಗೀಳು ಎಂದು ಹೇಳಬಹುದೇ? ನೀವೇನಾದರೂ ಸಂಪೂರ್ಣವಾಗಿ ಶಕ್ತಿಗುಂದಿದರೆ ನಾನು ರೆಕ್ಕೆ ಕಳೆದುಕೊಂಡ ಹಕ್ಕಿಯಂತಾಗುವೆ ಎಂಬುದು ನಿಮಗೆ ತಿಳಿದಿಲ್ಲವೇ? ನೀವು ಹಾಸಿಗೆ ಹಿಡಿದರೆ ನನ್ನ ಮುಕ್ಕಾಲು ಪಾಲು ಕೆಲಸ ಕಾರ್ಯಗಳನ್ನು ರದ್ದು ಮಾಡಬೇಕಾಗುವುದು"

## ಬಾಪು ಅವರ ಬಗೆಗೆ ಅತೀವ ನಿಷ್ಠೆ.

ಗಾಂಧೀಜಿಯವರ ಇಂಗ್ಲಿಷ್ ಅನುಯಾಯಿ ಮೀರಾ ಬೆನ್(ಮೆಡಲಿನ್ ಸ್ಲೇಡ್). ಮಹದೇವ ದೇಸಾಯಿ ಅವರನ್ನು ಬಹಳ ಚೆನ್ನಾಗಿ ಅರಿತಿದ್ದ ಮತ್ತೊಬ್ಬ ವ್ಯಕ್ತಿ. ೧೯೨೫ರ ನವೆಂಬರ್‌ನಲ್ಲಿ ಅಹಮದಾಬಾದ್ ರೈಲು ನಿಲ್ದಾಣದಲ್ಲಿ ಮೀರಾ ಅವರನ್ನು ಕರೆದೊಯ್ಯಲು ಮಹದೇವ ದೇಸಾಯಿ ಬಂದಿದ್ದರು. ಅದು ಅವರ ಪ್ರಥಮ ಭೇಟಿ. ಹದಿನೇಳು ವರ್ಷಗಳ ನಂತರ ಮಹದೇವ ದೇಸಾಯಿಯವರು ಕಾರಾಗೃಹದಲ್ಲಿ ಕೊನೆಯುಸಿರೆಳೆದಾಗ ಮೀರಾ ಅವರೂ ಅದೇ ಕಾರಾಗೃಹದಲ್ಲಿದ್ದರು. *ದಿ ಸ್ಪಿರಿಟ್ಸ್ ಪಿಲ್ಗ್ರಿಮೇಜ್* ಎಂಬ ತಮ್ಮ ಆತ್ಮಚರಿತ್ರೆಯಲ್ಲಿ ಮೀರಾ ಅವರು ಮಹದೇವ ದೇಸಾಯಿಯವರನ್ನು ಕುರಿತು, "ಅವರು ಮೀಸೆಯನ್ನು ಹೊಂದಿದ್ದ ಎತ್ತರದ ನಿಲುವಿನ, ಒಳ್ಳೆಯ ರೂಪವಂತನಾದ, ತಲೆಯಲ್ಲಿ ಕೂದಲು ತೆಳುವಾಗುತ್ತಿದ್ದ ಬುದ್ಧಿವಂತ ವ್ಯಕ್ತಿ" ಎಂದು ವರ್ಣಿಸಿದ್ದಾರೆ, "ಸ್ವಭಾವದಿಂದ ಅವರು ಅತಿ ಸೂಕ್ಷ್ಮ ಪ್ರವೃತ್ತಿಯವರು ಎಂಬುದು ಅವರ ಸೊಗಸಾದ ಹಸ್ತಗಳನ್ನು ನೋಡಿದರೆ ಅರಿವಾಗುತ್ತಿತ್ತು. ಕ್ಲಿಷ್ಟವಾದ ಮತ್ತು ಸದಾ ಬದಲಾಗುತ್ತಿದ್ದ ಪರಿಸ್ಥಿತಿಯನ್ನು ಅವರು ಅತ್ಯಂತ ಚುರುಕಾಗಿ ಗ್ರಹಿಸುತ್ತಿದ್ದರು. ಟಿಪ್ಪಣಿ ಮಾಡಿಕೊಳ್ಳುತ್ತಾ, ಚರ್ಚಿಸುತ್ತಾ, ಕರಡು ತಯಾರಿಸುತ್ತಾ, ಸೊಗಸಾದ ಅಕ್ಷರಗಳಲ್ಲಿ ಚುರುಕಾಗಿ ಬರೆಯುತ್ತಾ ಬಾಪು ಅವರ ಬಲಗೈಯಾಗಿರುತ್ತಿದ್ದರು. ಇವೆಲ್ಲದರ ನಡುವೆ ಎದ್ದು ಕಾಣುತ್ತಿದ್ದುದು ಬಾಪು ಅವರ ಬಗೆಗೆ ಅವರ ಅತೀವ ನಿಷ್ಠೆ ನಮ್ಮ ನಡುವಿನ ಅನುಬಂಧ ಇದ್ದುದೇ ಇದರಲ್ಲಿ" ಎನ್ನುತ್ತಾರೆ.

೧೯೪೨ರಲ್ಲಿ "ಭಾರತ ಬಿಟ್ಟು ತೊಲಗಿ" ಎಂಬ ಕರೆ ನೀಡಿದ ನಂತರ ಗಾಂಧೀಜಿಯವರ ಬಂಧನವಾದಾಗ ಅವರನ್ನು ಪೂನಾದ ಆಗಾಖಾನ್ ನಿವಾಸದಲ್ಲಿ ಇರಿಸಲಾಯಿತು. ವಸಾಹತುಶಾಹಿ ಆಡಳಿತವು ಈ ಉದ್ದೇಶಕ್ಕಾಗಿ ಮೊದಲೇ ಆಗಾಖಾನ್ ನಿವಾಸವನ್ನು ಪಡೆದುಕೊಂಡಿತ್ತು. ಗಾಂಧೀಜಿಯವರೊಂದಿಗೆ ಮಹದೇವ ದೇಸಾಯಿ, ಮೀರಾ ಬೆನ್ ಅವರುಗಳನ್ನೂ ಒಳಗೊಂಡಂತೆ ಇತರ ಕೆಲವರೂ ಅಲ್ಲಿದ್ದರು. ಇದೊಂದು ದೀರ್ಘವಾದ ಸೆರೆವಾಸವಾಗಿರುತ್ತದೆಂಬುದನ್ನು ತಿಳಿದು ಮಹದೇವ ಅವರು ಆಗಸ್ಟ್ ೧೪ ರ ಸಂಜೆ "ಬರೆಯುವುದಕ್ಕೆ ಇದು ಎಂತಹ ಒಳ್ಳೆಯ ಅವಕಾಶ! ನನ್ನ ಮನಸ್ಸಿನಲ್ಲಿ ಕನಿಷ್ಠ ಆರು ಪುಸ್ತಕಗಳು ಇವೆ. ಅವನ್ನೆಲ್ಲಾ ಕಾಗದದ ಮೇಲೆ ಮೂಡಿಸಬೇಕಾಗಿದೆ" ಎಂದು ಮೀರಾ ಅವರೊಂದಿಗೆ ಹೇಳಿದ್ದರು.

ಮರುದಿನವೇ, ತಮ್ಮ ೫೦ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಅವರು ಮರಣಹೊಂದಿದರು. ಅವರು ತಮ್ಮೊಂದಿಗೆ ಕಾರಾಗೃಹಕ್ಕೆ ತಂದಿದ್ದ ಸೂಟ್‌ಕೇಸನ್ನು ಒಂದು ದಿನದ ನಂತರ ಗಾಂಧೀಜಿಯವರು ತೆರೆದರು. ಕೆಲವು ಬಟ್ಟೆಗಳಲ್ಲದೆ ಅದರಲ್ಲಿ ಬೈಬಲ್‌ನ ಒಂದು ಪ್ರತಿ, (ಬ್ರಿಟಿಷ್ ಕ್ರಿಶ್ಚಿಯನ್ ಮಿತ್ರಮಂಡಳಿಯ ಅಗಾಥಾ ಹ್ಯಾರಿಸನ್ ಅವರು ನೀಡಿದಂತಹದು), ಕತ್ತರಿಸಿದ ಕೆಲವು ವೃತ್ತಪತ್ರಿಕೆಗಳ ತುಣುಕುಗಳು, ಮತ್ತು ಟ್ಯಾಗೋರರ 'ಮುಕ್ತಧಾರಾ' ಎಂಬ ನಾಟಕದ ಒಂದು ಪ್ರತಿ, ***ಬ್ಯಾಟಲ್ ಫಾರ್ ಏಷ್ಯಾ*** ಎಂಬ ಪುಸ್ತಕಗಳನ್ನು ಒಳಗೊಂಡಂತೆ ಹಲವಾರು ಪುಸ್ತಕಗಳೂ ಅದರಲ್ಲಿ ಇದ್ದವು.

ಗುಜರಾತೀ ಮತ್ತು ಇಂಗ್ಲಿಷ್ ಸಾಹಿತ್ಯದ ವಿದ್ವಾಂಸರಾಗಿದ್ದ ಮಹದೇವ ಅವರು ಇತಿಹಾಸ, ರಾಜಕಾರಣ ಮತ್ತು ಕಾನೂನಿನ ವಿಚಾರಗಳಲ್ಲಿ ಆಳವಾದ ಆಸಕ್ತಿ ಹೊಂದಿದ್ದರು. ಗಾಂಧೀಜಿಯವರ ಸಹವರ್ತಿಗಳ ಪೈಕಿ ಅತಿ ಹೆಚ್ಚು ಪಾಂಡಿತ್ಯವಿದ್ದವರು ಬಹುಶಃ ಮಹದೇವ ದೇಸಾಯಿಯವರೇ. ಇಯಾನ್ ದೇಸಾಯಿ ಎಂಬ ಅಮೇರಿಕನ್ ಇತಿಹಾಕಾರ, ಮಹದೇವ ಅವರು ಓದಿದ ಪುಸ್ತಕಗಳನ್ನು ಅಭ್ಯಾಸ ಮಾಡಿ ಟಿಪ್ಪಣಿಯನ್ನೂ ಮಾಡಿದ್ದರು, ರಾಜಕೀಯ ಸಿದ್ಧಾಂತಗಳು ಮತ್ತು ಅಂತರರಾಷ್ಟ್ರೀಯ ರಾಜಕಾರಣಗಳ ವಿಚಾರದಲ್ಲಿ ಅತ್ಯಂತ ಕಡಿಮೆ ಮಾಹಿತಿ ಹೊಂದಿದ್ದ ಗಾಂಧೀಜಿಯವರಿಗೆ ಮಹದೇವ ಅವರು, ತಾವು ಓದಿದ ಪುಸ್ತಕಗಳ ಮಾಹಿತಿಯನ್ನು ಬಹಳ ಸೊಗಸಾಗಿ ಸಂಗ್ರಹಿಸಿಕೊಡುತ್ತಿದ್ದರು ಎಂದು ಬರೆದಿದ್ದಾರೆ.

ಕೆಲವು ವರ್ಷಗಳ ಹಿಂದೆ ***ವಿಲ್ಸನ್ ಕ್ವಾರ್ಟರ್ಲಿ***ಯಲ್ಲಿ ಪ್ರಕಟವಾದ ಗಮನಾರ್ಹವಾದ ಒಂದು ಪ್ರಬಂಧದಲ್ಲಿ ಇಯಾನ್ ದೇಸಾಯಿಯವರು, "ಮಹದೇವ ದೇಸಾಯಿಯವರು ಗಾಂಧಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸುವುದಕ್ಕಾಗಿ, ಅವರ ಸಾರ್ವಜನಿಕ ಜೀವನದುದ್ದಕ್ಕೂ ಅವರ ತಾತ್ವಿಕತೆಯನ್ನು ಹರಿತಗೊಳಿಸಲು ಸಹಾಯಮಾಡುತ್ತಾ, ಸರಿಯಾದ ವಾಸ್ತವಿಕ ಮಾಹಿತಿಗಳನ್ನು ಒದಗಿಸುತ್ತಾ ಅವರ ಬೌದ್ಧಿಕ ಕಾರ್ಯಾಚರಣೆ(ಸ್ವಾತಂತ್ರ್ಯ ಹೋರಾಟ)ಯ ಹೃದಯದಂತೆ ಇದ್ದರು." ಎಂದು ಹೇಳಿದ್ದಾರೆ.

'ಮ್ಯಾಂಚೆಸ್ಟರ್ ಗಾರ್ಡಿಯನ್' ಎಂಬ ಪತ್ರಿಕೆಯಲ್ಲಿ ಮಹದೇವ ಅವರ ನಿಧನದ

ನಂತರ ಪ್ರಕಟವಾದ ಒಂದು ವಿಶೇಷ ಲೇಖನದಲ್ಲಿ ಅವರ ಕಲಿಕೆಯ ಪ್ರೀತಿಯ ಬಗ್ಗೆ ಬರೆಯಲಾಗಿದೆ. ೧೯೩೧ರಲ್ಲಿ ಗಾಂಧೀಜಿ ಮತ್ತು ಅವರ ಕಾರ್ಯದರ್ಶಿ ಹಲವಾರು ತಿಂಗಳು ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಪಾಲ್ಗೊಳ್ಳುತ್ತಾ ಇಂಗ್ಲೆಂಡ್‌ನಲ್ಲಿ ವಾಸವಾಗಿದ್ದರು ಎಂಬುದನ್ನು ಸ್ಮರಿಸುತ್ತಾ, ಈ ಅವಧಿಯಲ್ಲಿ "ಮಹದೇವ ಅವರು ಇಂಗ್ಲಿಷರ ಮನೆಗಳಿಗೆ ಭೇಟಿ ನೀಡುವುದನ್ನು, ಅವರು ಹೇಗೆ ಬದುಕುತ್ತಾರೆ ಎಂಬುದನ್ನು ನೋಡಲು ಇಷ್ಟಪಡುತ್ತಿದ್ದರು. ಯಾರ ಮನೆಗೇ ಹೋದರೂ ಕೂಡಲೆ ಪುಸ್ತಕದ ಕಪಾಟುಗಳು ಅವರನ್ನು ಆಕರ್ಷಿಸುತ್ತಿದ್ದವು. ಅವರ ಅಪಾರವಾದ ಪುಸ್ತಕ ಪ್ರೀತಿಯು ಅವರು ಪುಸ್ತಕಗಳನ್ನು ನಿರ್ವಹಿಸುವ ರೀತಿಯಿಂದಲೇ ತಿಳಿಯುತ್ತಿತ್ತು. ಅವರಿಗೆ ಕೆಲವು ನಿಮಿಷಗಳ ಬಿಡುವು ಸಿಕ್ಕಿತೆಂದರೆ ಖಂಡಿತವಾಗಿ ಅವರನ್ನು ಪುಸ್ತಕದ ಅಂಗಡಿಯ ಬಳಿ ಕಾಣಬಹುದಿತ್ತು."

**ಗಾಂಧೀಜಿಯವರ ಆತ್ಮಸಾಕ್ಷಿ**

ಬಹು ಆಸಕ್ತಿಯಿಂದ ಗಮನವಿಟ್ಟು ಓದುತ್ತಿರುವಾಗಲೂ ಕೂಡ ಗಾಂಧೀಜಿಯವರಿಗೆ ಸಲಹೆ ನೀಡುವ, ಸಹಾಯ ಮಾಡುವ ಕಾರ್ಯವನ್ನು ಮತ್ತು ಮಾತುಗಳನ್ನು ದಾಖಲಿಸಿಕೊಳ್ಳುವ ತಮ್ಮ ಪ್ರಮುಖ ಕರ್ತವ್ಯವನ್ನು ಮಹದೇವ ಅವರು ಮರೆಯುತ್ತಿರಲಿಲ್ಲ. ಗೋಪಾಲಕೃಷ್ಣ ಗಾಂಧಿಯವರು ಹೇಳುವಂತೆ ಗಾಂಧೀಜಿಯವರ ದೈನಂದಿನ ಕೆಲಸ ಕಾರ್ಯಗಳ ಮತ್ತು ಕಾರ್ಯಕ್ರಮಗಳ ಪ್ರತಿಯೊಂದು ವಿವರವನ್ನೂ, ಅದು ಮಹತ್ವದ್ದಿರಲಿ ಅಥವಾ ಸಾಮಾನ್ಯವಾದುದೇ ಇರಲಿ, ದಿನಚರಿಯಲ್ಲಿ ದಾಖಲಿಸುವ ಮೂಲಕ ಮಹದೇವ ದೇಸಾಯಿಯವರು ಗಾಂಧೀಜಿಯವರ "ದ್ವಿತೀಯ ಪ್ರಾಣವೇ ಆಗಿದ್ದಾರೆ, ಮತ್ತು ಅವರು ದಾಖಲಿಸಿರುವ ಎಲ್ಲವೂ ಮುಂದಿನ ಇತಿಹಾಸಕಾರರಿಗೆ ಮತ್ತು ಜೀವನಚರಿತ್ರಕಾರರಿಗೆ ಅನಿವಾರ್ಯವಾದ ಬಹುಮುಖ್ಯ ಆಕರವಾಗಿರುವುವು." "ಮಹದೇವ ಅವರ ದಿನಚರಿಗಳು (೧೯ನೆಯ ಶತಮಾನದ ಸಂತ) ಶ್ರೀ ರಾಮಕೃಷ್ಣ ಅವರ ಹೆಸರಿನೊಂದಿಗೆ ಬೇರ್ಪಡಿಸಲಾಗದ ಮತ್ತೊಬ್ಬ 'ಎಂ' ಎಂಬುವವರ ಕೃತಿಗಳಂತೆ ಬಹುತೇಕ ತಮ್ಮಷ್ಟಕ್ಕೆ ತಾವೇ ಬರೆದುಕೊಂಡಿವೆ" ಎಂದು ಗೋಪಾಲ ಗಾಂಧಿ ಬರೆಯುತ್ತಾರೆ.

ಮಹದೇವ ದೇಸಾಯಿಯವರು ೧೯೪೨ ರ ಆಗಸ್ಟ್ ೧೫ ರಂದು ಇಹಲೋಕ ತ್ಯಜಿಸಿದರು. ಅವರಿಗಿಂತ ಎಷ್ಟೋ ಹಿರಿಯರಾದ ಗಾಂಧೀಜಿಯವರು ಅಲ್ಲಿಂದ ಮುಂದೆ ಐದು ವರ್ಷಗಳಿಗೂ ಹೆಚ್ಚು ಕಾಲ ಬದುಕಿದ್ದರು. ಕೊನೆಯವರೆಗೂ ಅವರು ಮಹದೇವ ಮತ್ತು ಅವರ ಸಲಹೆ ಸಹಕಾರಗಳನ್ನು ನೆನಪಿಸಿಕೊಳ್ಳುತ್ತಿದ್ದರು. ತಮ್ಮ ಜೀವನದ ಕೊನೆಯ ವಾರದಲ್ಲಿ ಒಂದು ಕಡೆ ಹಿಂದೂ ಮತ್ತು ಮುಸ್ಲಿಮರ ನಡುವೆ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಶ್ರಮಿಸುತ್ತಾ ಮತ್ತೊಂದು ಕಡೆ ನೆಹರೂ ಮತ್ತು ವಲ್ಲಭಭಾಯ್ ಪಟೇಲ್ ಅವರುಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವುದರಲ್ಲಿ ತೊಡಗಿದ್ದಾಗ ಗಾಂಧೀಜಿಯವರು ತಮ್ಮ ಮೊಮ್ಮಗಳು ಮನುವಿನ ಬಳಿ "ಇಂದೇಕೋ ಮಹದೇವ ಅವರ ನೆನಪು ಕಾಡುತ್ತಿದೆ. ಅವರು ಬದುಕಿದ್ದರೆ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗುವುದಕ್ಕೆ ಬಿಡುತ್ತಿರಲಿಲ್ಲ" ಎಂದು ಅಲವತ್ತುಕೊಳ್ಳುತ್ತಾರೆ.

ಮಹದೇವ ಅವರು ಗಾಂಧೀಜಿಯವರಿಗೆ ಮತ್ತು ಭಾರತಕ್ಕೆ ಎಷ್ಟು ಮುಖ್ಯರಾಗಿದ್ದರು ಎಂಬುದು ನಾನು ನನ್ನ ನಲವತ್ತನೇ ವರ್ಷಕ್ಕೆ ಕಾಲಿಡುವವರೆಗೆ ತಿಳಿದಿರಲೇ ಇಲ್ಲ. ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆಗಾಗಿ ಕೆಲಸ ಮಾಡುತ್ತಿದ್ದಾಗ, ಈ ಹಿಂದೆ ವಿದ್ವಾಂಸರಿಗೆ ನೋಡಲು ಅವಕಾಶವಿರದ ಗಾಂಧೀಜಿಯವರ ವೈಯಕ್ತಿಕ ದಾಖಲೆಗಳ ದೊಡ್ಡ ಸಂಗ್ರಹವನ್ನು ನೋಡುವುದು ನನಗೆ ಸಾಧ್ಯವಾಯಿತು. ದೇಶಕ್ಕೆ ಮಹದೇವ ಅವರ ಮಹತ್ತರವಾದ ಕೊಡುಗೆಯ ಬಗ್ಗೆ ಮತ್ತು ಅವರ ಹೃದಯ ಹಾಗು ಪ್ರತಿಭೆಯ ವಿಶಿಷ್ಟ ಗುಣಗಳ ಬಗ್ಗೆ ನನಗೆ ತಿಳಿದು ಬಂದುದು ಆಗಲೇ. ನನಗಿಂತ ತುಸುವೇ ಕಿರಿಯನಾದ, ಅಮೆರಿಕದಲ್ಲಿ ಬೆಳೆದ ನನ್ನ ಸೋದರ ಸಂಬಂಧಿ ಸುಬುಗೆ, ನಾನು ಬರೆದ ಜೀವನ ಚರಿತ್ರೆಯನ್ನು ಓದುವವರೆಗೂ "ಮಹದೇವ ದೇಸಾಯಿ ಮತ್ತು ಅವರ ಪ್ರಾಮುಖ್ಯತೆಯ ಬಗ್ಗೆ ತಿಳಿದಿರಲಿಲ್ಲ. ಅವರಿಲ್ಲದಿದ್ದರೆ ಭಾರತೀಯ ಗಾಂಧಿ ಇರುತ್ತಿರಲಿಲ್ಲ ಎಂಬುದು ಈಗ ನನಗೆ ಖಾತರಿಯಾಗಿದೆ. ದೇಶದಲ್ಲೆಲ್ಲೂ ಅವರ ಪ್ರತಿಮೆಗಳು ಏಕಿಲ್ಲ" ಎಂದು ಅವನು ಪತ್ರ ಬರೆದು ಪ್ರಶ್ನಿಸಿದ.

ಇಂತಹ ಶ್ಲಾಘನೀಯ ಕಾರ್ಯಕ್ಕೆ ಹಣ ಮತ್ತು ಬೆಂಬಲವನ್ನು ಒಟ್ಟುಗೂಡಿಸುವುದು ಕಷ್ಟ. ಆದರೆ ಗುಜರಾತೀ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿರುವ ಯುವ ವಿದ್ವಾಂಸರು ಯಾರಾದರೂ ಮಹದೇವ ಅವರ ಜೀವನ ಚರಿತ್ರೆಯನ್ನು ಬರೆಯುವ ಕೆಲಸ ಪ್ರಾರಂಭಿಸಬಹುದು. ಹಲವು ವರ್ಷಗಳ ಹಿಂದೆ ಮಹದೇವ ಅವರ ಮಗ ನಾರಾಯಣ ಅವರು ತಮ್ಮ ತಂದೆಯ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಆದರೆ ಅದು ಬಹಳ ಭಾವನಾತ್ಮಕವಾಗಿದೆ. ಸಾಕಷ್ಟು ಮಾಹಿತಿಯನ್ನೂ ಹೊಂದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಖಂಡಿತ ಅದೊಂದು ಕೊಡುಗೆ ಎಂಬುದು ನಿಜ. ಆದರೂ ಆ ಪುಸ್ತಕಕ್ಕೆ ಪೂರಕವಾಗಿ ಕೌಟುಂಬಿಕ ನಿಷ್ಠೆಯ ಭಾರವಿಲ್ಲದ ಒಂದು ಕೃತಿ ಬೇರೊಬ್ಬ ವಿದ್ವಾಂಸರ ಮೂಲಕ ಈಗ ಮೂಡಿಬರಬೇಕಿದೆ. ಅದು ಈಗ ಲಭ್ಯವಿರುವ ಮಾಹಿತಿಗಳನ್ನು ಬಳಸಿಕೊಳ್ಳುವ ಒಂದು ವಿಶಾಲ ಐತಿಹಾಸಿಕ ದೃಷ್ಟಿಯನ್ನೂ ಸಹ ಹೊಂದಿರಬೇಕು.

ಗಾಂಧೀಜಿಯವರ ದೃಷ್ಟಿಯ ಹಾಗೆ ಮಹಾದೇವ ಅವರದ್ದೂ ಸಂಕುಚಿತವಲ್ಲದ ಬಹು ವಿಶಾಲ ದೃಷ್ಟಿ. ಮಹಿಳೆಯರನ್ನು ಅವರು ಗೌರವಿಸುತ್ತಿದ್ದರು ಮತ್ತು ಅವರೊಂದಿಗೆ ಸ್ನೇಹ ಬೆಳೆಸುತ್ತಿದ್ದರು. ಒಬ್ಬ ಗುಜರಾತಿಯಾಗಿದ್ದ ಅವರು, ದೇಶದ ಇತರ ಭಾಗಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ಒಬ್ಬ ಹಿಂದುವಾಗಿ ಅವರು ಬಹುಸಂಖ್ಯಾತವಾದವನ್ನು ಕಂಡು ಅಸಹ್ಯಪಡುತ್ತಿದ್ದರು. ಭಾರತೀಯರಾದ ಅವರು ಜಗತ್ತಿನ ಇತರ ಭಾಗಗಳ ಬಗ್ಗೆ ಅಪಾರವಾದ ಕುತೂಹಲವನ್ನು ಹೊಂದಿದ್ದರು. ಅವರು ಒಬ್ಬ ಪ್ರತಿಭಾವಂತರಾದ, ಅಪಾರವಾಗಿ ಬರೆಯುತ್ತಿದ್ದ, ತುಂಟ ಹಾಸ್ಯ ಪ್ರಜ್ಞೆಯನ್ನೂ ಹೊಂದಿದ್ದ ಲೇಖಕರಾಗಿದ್ದರು. ಗಾಂಧೀಜಿಯವರೊಂದಿಗೆ ಮತ್ತು ಗಾಂಧೀಜಿಯವರಿಗಾಗಿ ಏನೆಲ್ಲಾ ಮಾಡಿದರೋ ಅವುಗಳ ಮೂಲಕ ತಮ್ಮ ದೇಶದ ಮತ್ತು ಪ್ರಪಂಚದ ಇತಿಹಾಸದ ಮೇಲೆ ಗಾಢವಾದ ಪ್ರಭಾವವನ್ನೂ ಬೀರಿದರು. ಅವರ ಜೀವನ ವೃತ್ತಾಂತವು ಒಂದು ಅದ್ಭುತವಾದ ಜೀವನಚರಿತ್ರೆಯಾಗಬಲ್ಲದು.

ಗಾಂಧೀಜಿಯವರಿಗೆ ಸಂಬಂಧಿಸಿದಂತೆ ಮಹದೇವ ದೇಸಾಯಿಯವರ ಬಗ್ಗೆ ನಾನೇ ಬರೆಯಬೇಕಾಯಿತು. ಆದರೂ ನನ್ನ ಸಂಶೋಧನೆಯ ಹಾದಿಯಲ್ಲಿ ನಾನು ಕಂಡಿದ್ದೇನೆಂದರೆ, ಆಂಗ್ಲೀಕರಣಗೊಂಡ ಕಾಶ್ಮೀರಿ ಜವಾಹರಲಾಲ್ ನೆಹರೂ, ಭಾರತೀಕರಣಗೊಂಡ ಇಂಗ್ಲಿಷ್ ಮಹಿಳೆ ಮೀರಾ ಬೆನ್, ತಮಿಳು ಸಂಸ್ಕೃತ ವಿದ್ವಾಂಸ ವಿ.ಎಸ್.ಶ್ರೀನಿವಾಸ ಶಾಸ್ತ್ರಿ ಮತ್ತು ವೈಸ್‌ರಾಯ್ ಅವರ ಖಾಸಗಿ ಕಾರ್ಯದರ್ಶಿ ಕೆಥೋಲಿಕ್ ಗಿಲ್ಬರ್ಟ್ ಲೆತ್‌ವೇಯ್ಟ್ ಇವರುಗಳೊಂದಿಗೆ ಮಹದೇವ ಅವರು ಮಾಡಿರುವ ಪತ್ರವ್ಯವಹಾರಗಳನ್ನು ಗಮನಿಸುವಾಗ ಅವರದ್ದೇ ಆದ ಸ್ನೇಹಿತರ ಬಳಗವು ಬಹಳ ವಿಶಾಲವಾದದ್ದು ಎಂಬುದು.

ನಾನು ಕಂಡಿದ್ದರಲ್ಲಿ ನನಗೆ ಬಹಳ ಸಂತೋಷ ತಂದಿರುವುದು ಯಾವುದೆಂದರೆ, ೧೯೩೮ರಲ್ಲಿ ಸೇವಾಗ್ರಾಮದಲ್ಲಿ ತಮ್ಮ ಬೆಳಗಿನ ವಾಯುಸಂಚಾರದ ವೇಳೆಯಲ್ಲಿ ಗಾಂಧೀಜಿಯವರು ಖಾದಿ ತೊಟ್ಟ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಮಹದೇವ ದೇಸಾಯಿಯವರೊಂದಿಗೆ ಇರುವ ಛಾಯಾಚಿತ್ರ. ಈ ಛಾಯಾಚಿತ್ರದಲ್ಲಿ ಎತ್ತರದ ಆ ಪಠಾಣರು ಪ್ರೀತಿಯಿಂದ ಸದಾ ಮುಗುಳ್ನಗುತ್ತಿರುವ ಆ ಪುಟ್ಟ ಚುರುಕು ವ್ಯಕ್ತಿತ್ವದ ಗುಜರಾತಿಯ ಹೆಗಲ ಮೇಲೆ ತಮ್ಮ ಕೈಯನ್ನು ಹಾಕಿರುವುದು.

ಈ ಸ್ವಾತಂತ್ರ್ಯ ದಿನದಂದು ನಾವು ನಮ್ಮ ರಾಷ್ಟ್ರವನ್ನು ನಿರ್ಮಾಣ ಮಾಡಿದವರನ್ನು ಸ್ಮರಿಸುತ್ತೇವೆ- ಬಿ ಆರ್ ಅಂಬೇಡ್ಕರ್, ಅಬ್ದುಲ್ ಕಲಾಂ ಆಜಾದ್, ಸುಭಾಷ್ ಚಂದ್ರ ಬೋಸ್, ಕಮಲಾದೇವಿ ಚಟ್ಟೋಪಾಧ್ಯಾಯ, ಬಿರ್ಸಾ ಮುಂಡಾ, ದಾದಾಬಾಯ್ ನವರೋಜಿ, ಜವಾಹರಲಾಲ್ ನೆಹರೂ, ವಲ್ಲಭಭಾಯ್ ಪಟೇಲ್, ಭಗತ್‌ಸಿಂಗ್, ಮತ್ತು ಇತರ ಹಲವರು. ಈ ಪಟ್ಟಿಯಲ್ಲಿರುವವರಂತೆಯೇ ಗೌರವಾನ್ವಿತರೂ ಮತ್ತು ಶ್ಲಾಘನೀಯರೂ ಆದ, ಸ್ವಾತಂತ್ರ್ಯ ದೊರೆಯುವ, ಸರಿಯಾಗಿ, ಐದು ವರ್ಷಗಳ ಹಿಂದೆ ತೀರಿಕೊಂಡಂತಹ ಮಹಾದೇವ ದೇಸಾಯಿ, ಅಂತೂ ಕೊನೆಗೆ ನಮಗೆ ದೊರೆತ ಸ್ವಾತಂತ್ರ್ಯಕ್ಕಾಗಿ, ನಿಸ್ವಾರ್ಥದಿಂದ ಉದಾತ್ತವಾಗಿ ಹೋರಾಡಿದಂತಹವರು.



**(ಗುಹಾ ಅವರು ಖ್ಯಾತ ಇತಿಹಾಸಕಾರರು ಮತ್ತು ಗಾಂಧಿ ಕುರಿತ ಎರಡು ಮುಖ್ಯ ಪುಸ್ತಕಗಳ ಲೇಖಕರು)**

**(ಕನ್ನಡಕ್ಕೆ: ಎಂ. ರಾಜು ಕೃಪೆ: *ದ ಟೆಲಿಗ್ರಾಫ್*,** ಆಗಸ್ಟ್ ೧೪, ೨೦೨೧)

---

**೧ನೇ ಪುಟದಿಂದ)**

ಚರ್ಚೆ-ಅನುಮೋದನೆ ಇಲ್ಲದೆ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರ ಹೊರಟು ನಿರಾಶೆ ಹುಟ್ಟಿಸಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆ ದೇಶದ ಪ್ರಧಾನ ವಿರೋಧ ಪಕ್ಷವಾದ ಕಾಂಗ್ರೆಸ್ ಏನು ಮಾಡುತ್ತಿದೆ? ಎಂದು ನೋಡಿದರೆ ಅದು ಆತ್ಮಹತ್ಯೆಯ ಹಾದಿಯಲ್ಲಿದೆ ಎಂದು ತೋರುತ್ತದೆ. ಇತಿಹಾಸ ಸಂಶೋಧನೆಯ ಭಾರತೀಯ ಮಂಡಳಿ ಸ್ವಾತ್ರಂತ್ರ್ಯದ ಅಮೃತ ಮಹೋತ್ಸವದ ಮುಖ್ಯ ಭಿತ್ತಿ ಪತ್ರದಿಂದ ನೆಹರೂ ಅವರನ್ನು ಕೈಬಿಟ್ಟಿರುವ ಪ್ರಸಂಗ ಈ ಪಕ್ಷದಿಂದ ಒಂದು ಪ್ರತಿಭಟನೆಯ ಸೊಲ್ಲೂ ಹೊರಡಿಸದಂತಹ ಲಘು ಬೆಳವಣಿಗೆಯಾಗಿ ಅದಕ್ಕೆ ಕಂಡಿದೆ ಎಂದರೆ ಇನ್ನೇನು ಹೇಳುವುದು? ಪಂಜಾಬ್‌ನಲ್ಲಿ ಗೆಲ್ಲುವ ಗ್ಯಾರಂಟಿ ಕುಳವಾಗಿದ್ದ ಅಮರೀಂದರ್ ಸಿಂಗ್ ಅವರ ವಿರುದ್ಧ ಭಿನ್ನಮತ ಹುಟ್ಟುಹಾಕಿದ ಶುದ್ಧ ತಲೆಹೋಕನೆಂದೇ ಹೆಸರಾದ ನವಜೋತ್ ಸಿಂಗ್ ರಾಜಕಾರಣಕ್ಕೆ ಮಾನ್ಯತೆ ನೀಡಿರುವ ರಾಹುಲ್-ಪ್ರಿಯಾಂಕರ ನಿರ್ಧಾರ ದುಸ್ಸಾಹಸದ್ದೇ ಸರಿ. ಆದರೆ ನಮ್ಮ ಸಿದ್ದರಾಮಯ್ಯ ಬರಹವಿರಲಿ ಚೂರುಪಾರು ಓದನ್ನೂ ಕೈಬಿಟ್ಟವರಂತೆ ಸಂಘ ಪರಿವಾರದ ಎಲ್ಲ ಚಟುವಟಿಕೆಗಳನ್ನೂ ಮತ್ತೇನೂ ತೋಚದೆ ಮನುವಾದಿ ಎಂದು ಖಂಡಿಸುತ್ತಾ ತಾವು ಕಲಿತ ಪುರಾತನ ಪಾಠವನ್ನೇ ಮತ್ತೆ ಒಪ್ಪಿಸುತ್ತಾ ಹಾಸ್ಯಾಸ್ಪದರಾಗುತ್ತಿದ್ದಾರೆ. ಸಿದ್ಧರಾಮಯ್ಯನವರು ಒಮ್ಮೆ ಕಣ್ಣು ಬಿಟ್ಟು ನೋಡಿದರೆ ಅವರು ಸದಾ ಜಪಿಸುವ ಸಾಮಾಜಿಕ ನ್ಯಾಯದ ಫಲಾನುಭವಿಗಳೇ ಈಗ ಜಾತಿ ಪದ್ಧತಿಯನ್ನು ಶಾಸ್ತ್ರ ಪ್ರಕಾರವೇ ಆಚರಿಸುವ ಮನುವಾದದ ದೊಡ್ಡ ದಂಡಾಗಿದೆ ಎಂಬುದು ಗೊತ್ತಾದೀತು.

**-ಸಂಪಾದಕ**

# ಮಹಾತ್ಮ ಗಾಂಧಿ: ಒಂದು ನೆನಪು







**ಈ ವರ್ಷದ ನಮ್ಮ ಈ ಗಾಂಧಿ ಜಯಂತಿ ಸಂಚಿಕೆಗಾಗಿ ನಾವು ಕೇಳಿದ ಮತ್ತು ಕೇಳಿಕೊಂಡ ಪ್ರಶ್ನೆಗಳು, ನಮಗೆ ಇಂದು ಗಾಂಧಿ ಏಕೆ ಬೇಕು? ಮತ್ತು ಎಂತಹ ಗಾಂಧಿ ಬೇಕು? ಈ ದೇಶದ ಚರಿತ್ರೆಯನ್ನು ಪುನರ್ಲೇಖಿಸುವ ಮಹಾ ಪ್ರಯತ್ನವೊಂದರ ಭಾಗವಾಗಿ ನಮ್ಮ ಸಮಷ್ಟಿ ಪ್ರಜ್ಞೆಯಿಂದಲೇ, ನಮ್ಮ ಸಮೂಹ ಸ್ಮೃತಿಯಿಂದಲೇ ಗಾಂಧೀಜಿಯನ್ನು ಮರೆ ಮಾಡುವ ವ್ಯವಸ್ಥಿತ ಮತ್ತು ಸುಯೋಜಿತ ಪ್ರಯತ್ನಗಳು ನಮ್ಮ ಹೊಸ ಪಟ್ಟಭದ್ರ ಹಿತಾಸಕ್ತಿಗಳಿಂದ ಎಗ್ಗಿಲ್ಲದೇ ನಡೆಯುತ್ತಿರುವ ಈ ಹೊತ್ತಿನಲ್ಲಿ ಈ ಪ್ರಶ್ನೆಗಳಿಗೆ ದೊರೆಯುವ ಉತ್ತರಗಳು ಕುತೂಹಲಕಾರಿಯಾಗಿರಬಹುದು. ನಾಡಿನ ವಿವಿಧ ಹಿನ್ನೆಲೆಗಳ ಪ್ರಾಜ್ಞರು ಈ ಪ್ರಶ್ನೆಗಳಿಗೆ ನೀಡಿರುವ ಈ ಉತ್ತರಗಳು ಇಲ್ಲಿವೆ.–ಸಂ.**

## ಆತ್ಮಸಾಕ್ಷಿಗೆ ಸಂವಾದಿಯಾಗಿ ನಡೆಯುವ ನಿರ್ಭೀತ ಗಾಂಧಿಯ ಚಿತ್ರ

ಗಾಂಧೀಜಿಯವರಿಂದ ನಾವು ಕಲಿಯಬೇಕಾದುದೇನು? ಪಡೆಯಬೇಕಾದುದೇನು? ನಾವು ಅಮೂಲ್ಯವಾದ ಏನನ್ನು ಕಳೆದುಕೊಂಡಿದ್ದೇವೆ?

ನಾವು ನಮ್ಮ 'ಆತ್ಮಸಾಕ್ಷಿ'ಯನ್ನು ಕಳೆದುಕೊಂಡಿದ್ದೇವೆ. ಕಳೆದುಕೊಳ್ಳುತ್ತಿದ್ದೇವೆ. ವ್ಯಕ್ತಿ, ತನ್ನ ಆತ್ಮಸಾಕ್ಷಿಯನ್ನು ತಾನು ನಂಬಬೇಕೆಂದು ಗಾಂಧೀಜಿ ತಮ್ಮ ಬಾಳಿನ ಮೂಲಕವೇ ನಮಗೆ ಕಲಿಸಿದರು. ನಮ್ಮ ಆತ್ಮಸಾಕ್ಷಿಯನ್ನು ನಾವು ನಂಬಲೇಬೇಕಾಗಿದೆ. ಅಂದರೆ ನಮ್ಮ ಕರುಳಿಗೆ ಹಸಿವಿನ ಸಂವೇದನೆಯು ನೈಸರ್ಗಿಕವಾಗಿ ಇರುವಂತೆ ನಮ್ಮ ಹೃದಯಕ್ಕೆ "ಒಳಿತಿನ" ಕುರಿತಾದ ಸಂವೇದನೆಯು ನೈಸರ್ಗಿಕವಾಗಿಯೇ ಇರುತ್ತದೆ ಎಂಬ ನಂಬಿಕೆ!

ಯಾವುದು ಒಳಿತು, ಯಾವುದು ಒಳಿತಲ್ಲ ಎಂಬ ಗ್ರಹಿಕೆ ಮತ್ತು ಹಸಿವಿನ ಸಂವೇದನೆಯು ನಮ್ಮನ್ನು ಜೀವಂತವಾಗಿರಿಸಿದಂತೆ ಒಳಿತಿನ ಸಂವೇದನೆಯೂ ನಮ್ಮನ್ನು ಜೀವಂತವಾಗಿರಿಸಿದೆ ಎಂಬ ಗ್ರಹಿಕೆ! ಇದು ಬರಿಯ ನಂಬಿಕೆಯಲ್ಲ. ಇದು ಶ್ರದ್ಧೆ!

ನಮ್ಮ ಹಸಿವೆಯೇ ಇತರರ ಹಸಿವೆಯ ಕುರಿತೂ, ನಮ್ಮ ನೋವೇ ಇತರರ ನೋವಿನ ಕುರಿತೂ ನಮ್ಮಲ್ಲಿ ಅರಿವು ಮೂಡಿಸುತ್ತದೆ. ಅಂದರೆ ಅರಿವಿಗೆ ಮೂಲತ: ಒಳಗೊಳ್ಳುವ ಗುಣವೇ ಇರುವುದು! ಇದು ಸಂವೇದನಾತ್ಮಕ ಅರಿವಿನ ನಿಸರ್ಗಸಹಜ ಸ್ವರೂಪ.

ಈ ಅರಿವನ್ನು ಯಾರೂ ನಮಗೆ ಕಲಿಸಬೇಕಾಗಿಲ್ಲ. ಏಕೆಂದರೆ ಇವು ಇಂದ್ರಿಯ ಸತ್ಯಗಳು! ಕರುಳು ಮತ್ತು ಹೃದಯ ಎನ್ನುವ ಎರಡು ಇಂದ್ರಿಯಗಳ ಸತ್ಯಗಳು. ಇದೇ ಕಾರಣಕ್ಕೆ ಭಾಷೆಯಲ್ಲಿ "ಕರುಳು" ಎಂದರೆ ಹೃದಯ– ಅಂತಃಕರಣ ಎಂದೇ ಅರ್ಥವಿರುವುದು. ಈ ಅರಿವನ್ನೇ "ಆತ್ಮಸಾಕ್ಷಿ"ಎನ್ನುವುದು. ಇದನ್ನು ಪಡೆದೇ ನಾವು ಹುಟ್ಟಿರುವೆವು. ಆದರೆ ನಮ್ಮ ನಾಗರಿಕತೆಯಲ್ಲಿ ಏನಾಗಿದೆ ಎಂದರೆ–ತಿಳಿದೋ ತಿಳಿಯದೆಯೋ–ಈ ನಿಸರ್ಗ ಸಹಜವಾದ ಸರಳವಾದ ಅರಿವನ್ನು ಕೆಡಿಸಲಾಗಿದೆ; ಕೆಡಿಸುವ ಯತ್ನ ಮಾಡಲಾಗಿದೆ; ಮಾಡಲಾಗುತ್ತಿದೆ.

ಹೇಗೆಂದರೆ– ಹೃದಯದ ಸಂವೇದನೆಯ ಮೇಲೆ ಬೌದ್ಧಿಕವಾದ ಸಿದ್ಧಾಂತಗಳನ್ನು ಹೇರುವ ಮೂಲಕ. ಒಳಗೊಳ್ಳುವುದು ಅರಿವಿನ ಗುಣ ಎಂದು ತಿಳಿದಾಗ, ಬೇರ್ಪಡಿಸಿ ನೋಡುವುದೂ ಸಾಧ್ಯ ಎಂದೂ ತಿಳಿದುಬಂತು.

ಹಾಗೆ ಬೇರ್ಪಡಿಸಿ ನೋಡಿದರೆ ಬೇರೆಯೇ ಒಂದು ಚಿತ್ರ ಕಂಡಂತಾಯಿತು. ತನ್ನಂತೆ ಇನ್ನೊಬ್ಬನೂ ಹಸಿದವನಾದುದರಿಂದಲೇ ತನ್ನ ಅನ್ನಕ್ಕೆ ಅವನು ಅಡ್ಡಿಯಾಗುವ ಚಿತ್ರ. ತನ್ನ ನೋವಿಗೆ ಇನ್ನೊಬ್ಬನು ಕಾರಣವಾಗಿರಬಹುದು ಎಂಬ ಚಿತ್ರ – ಕಾಣಿಸಿತು.

ಈ ಚಿತ್ರಗಳನ್ನು ನಾಗರಿಕತೆಯು ಪ್ರಜ್ಞಾಪೂರ್ವಕವಾಗಿ ಬೆಳೆಯಿಸಿತು.

ಈಗ ಈ ಪ್ರಜ್ಞೆಯೇ ನಮ್ಮ ಆತ್ಮಸಾಕ್ಷಿಯಾದಂತಿದೆ. ನಿಜವಾದ ಆತ್ಮಸಾಕ್ಷಿಯ ಜಾಗದಲ್ಲಿ ತಾನು ಅಧಿಕಾರ ನಡೆಸುತ್ತಿದೆ! ನಿಜವಲ್ಲದೆ ಇರುವುದರಿಂದಲೇ ಬಗೆಬಗೆಯ ಸಿದ್ಧಾಂತಗಳ ಮೂಲಕ ತನ್ನನ್ನು ಸಮರ್ಥನೆ ಮಾಡಿಕೊಳ್ಳುತ್ತಿದೆ. ನಿಜವಾದ ಆತ್ಮಸಾಕ್ಷಿಗೆ ಸಮರ್ಥನೆಯ ಅಗತ್ಯವೇ ಇರುವುದಿಲ್ಲ.



ಅಂಬೇಡ್ಕರ್ ಮುಂತಾದವರು ಎಷ್ಟು ಟೀಕಿಸಿದರೂ ಗಾಂಧೀಜಿ ತಮ್ಮ "ಅಂತರ್ವಾಣಿ"ಯನ್ನು ನೆಚ್ಚುವುದನ್ನು ಎಂದೂ ಬಿಡಲಿಲ್ಲ ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ತನ್ನ ಆತ್ಮಸಾಕ್ಷಿಗೆ ಸಂವಾದಿಯಾಗಿ ನಡೆಯುವ ನಿರ್ಭೀತ ಗಾಂಧಿಯ ಚಿತ್ರ ನಮ್ಮ ಮುಂದಿರುವುದು ಒಂದು ಅದೃಷ್ಟವೇ.

**–ಲಕ್ಷ್ಮೀಶ ತೋಳ್ಪಾಡಿ,** ವಿದ್ವಾಂಸರು, ಲೇಖಕರು, ಪುತ್ತೂರು

## ಹೊಸಯುಗದ ಗಾಂಧಿ ಹೀಗಿರಬೇಕು

ಗಾಂಧೀಜಿ ಈಗ ಜನಿಸಿದರೆ ಪ್ರಯೋಜನವಿಲ್ಲ. ಇಡೀ ಮನುಕುಲವೇ ಮಹಾಸಂಕಟದ ಕಡೆ ವಾಲುತ್ತಿದೆ;

"ಹೆಚ್ಚೆಂದರೆ ಮುಂದಿನ ಮೂವತ್ತು ವರ್ಷಗಳಲ್ಲಿ ನಮ್ಮೆಲ್ಲರ ತಪ್ಪುಗಳನ್ನು ಸರಿಪಡಿಸಿಕೊಳ್ಳದಿದ್ದರೆ ಉಳಿಗಾಲವಿಲ್ಲ" ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಭೂಮಿಯೇ ಎಚ್ಚರಿಕೆ ನೀಡುತ್ತಿದೆ. ಇದೀಗ ಜನ್ಮತಾಳಿ ಆ ವ್ಯಕ್ತಿ ಪ್ರೌಢಿಮೆಯ ಹಂತಕ್ಕೆ ಬರುವವರೆಗೆ ಕಾಯುವಂತಿಲ್ಲ. ಈಗಲೇ ಹದಿಹರಯವನ್ನು ದಾಟಿದ ವ್ಯಕ್ತಿಯಲ್ಲಿ ಗಾಂಧೀತನವನ್ನು ನಾವು ಹುಡುಕಬೇಕು.

ಯುವಜನಾಂಗವನ್ನು ಪ್ರಭಾವಿಸಬಲ್ಲ ಪ್ರತಿಭೆ ಆ ವ್ಯಕ್ತಿಯಲ್ಲಿ ಇರಬೇಕು. "ನಮ್ಮ ಭವಿಷ್ಯವನ್ನು ಮಣ್ಣುಮುಕ್ಕಿಸಬೇಡಿ" ಎಂದು ಇಂದಿನ ನಾಯಕರಿಗೆ ಚುರುಕು ಮುಟ್ಟಿಸಬಲ್ಲ ನಾಯಕತ್ವದ ಗುಣ ಆ ವ್ಯಕ್ತಿಯಲ್ಲಿ ಈಗಾಗಲೇ ಮೊಳೆಯುತ್ತಿರಬೇಕು.

ಅಂಥ ವ್ಯಕ್ತಿ ಬರೀ ರಾಷ್ಟ್ರಮಟ್ಟದಲ್ಲಿ ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದರೆ ಸಾಲದು. ಇಂದಿನ ಸಮಸ್ಯೆಗೆ ಯಾವೊಂದು ರಾಷ್ಟ್ರವೂ ಒಂಟಿಯಾಗಿ ಯಾವ ಪರಿಹಾರವನ್ನೂ ಹುಡುಕಲಾರದು. ಆ ವ್ಯಕ್ತಿ ಅನೇಕ ದೇಶಗಳನ್ನು ಏಕಕಾಲಕ್ಕೆ ಪ್ರಭಾವಿಸುವಂತಿರಬೇಕು. ಇಷ್ಟಕ್ಕೂ ಯಾವುದೋ ಒಂದು ದೇಶದಲ್ಲಿ ಹುಟ್ಟಿರಲೇಬೇಕಲ್ಲ? ಹಾಗಂತ, ಉರುಗ್ವೆಯಲ್ಲೊ ಉಗಾಂಡಾದಲ್ಲೊ ಉಕ್ರೇನಿನಲ್ಲೊ ಬೆಳೆಯುತ್ತಿದ್ದರೆ ಪ್ರಯೋಜನವಿಲ್ಲ. ಮಾಧ್ಯಮಗಳ ಬೆಳಕು ಪ್ರಖರವಾಗಿ ಬೀಳುವಲ್ಲೇ ಅಂದರೆ ಅಮೆರಿಕದಲ್ಲೊ ಅಥವಾ ಯುರೋಪ್ನಲ್ಲೋ ಬೆಳೆಯುತ್ತಿರಬೇಕು. ಮತ್ತೆ ಆ ಗತಕಾಲದ ಚರಕಾ, ಅರೆಬಟ್ಟೆ, ಬರಿಗಾಲಿನ ಸಂಕೇತಗಳನ್ನಾಗಲೀ ಪೆನ್ನು ಹಾಳೆಗಳ, ಲೆಟರ್ ಪ್ರೆಸ್ ಮುದ್ರಣದ ಮಾಧ್ಯಮವನ್ನಾಗಲೀ ಬಳಸಿದರೆ ಪ್ರಯೋಜನವಿಲ್ಲ. ಸಂಪರ್ಕ ತಂತ್ರಜ್ಞಾನದ ಎಲ್ಲ ಸಾಧ್ಯತೆಗಳನ್ನು ಬಳಸಿಕೊಳ್ಳುವ ಕಲೆ ಇಷ್ಟರಲ್ಲೇ ಕರಗತವಾಗಿರಬೇಕು. ಜೊತೆಗೇ ಯುವಮನಸ್ಸನ್ನು ನೇರವಾಗಿ ತಟ್ಟಬಲ್ಲ ಶಕ್ತಿಶಾಲಿ ಸಂಕೇತಗಳನ್ನು ಬಳಸುವ ಜಾಣ್ಮೆ, ಮನಸ್ಸಿಗೆ ನಾಟಬಲ್ಲ ಮಾತುಗಳನ್ನು ಉದುರಿಸಬಲ್ಲ ಕೌಶಲ, ನಾಯಕತ್ವಕ್ಕೆ ಧಮಕಿ ಹಾಕಬಲ್ಲ ಗತ್ತು ಮತ್ತು ಧಾರ್ಷ್ಟ್ಯ ಈಗಾಗಲೇ ಆ ವ್ಯಕ್ತಿಯಲ್ಲಿ ವ್ಯಕ್ತವಾಗುತ್ತಿರಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ತನ್ನ ಸುಖ ಸೌಕರ್ಯಗಳನ್ನು ಬಲಿಗೊಟ್ಟಾದರೂ ಮನುಕುಲದ್ದಷ್ಟೇ ಅಲ್ಲ, ಪೃಥ್ವಿಯ ಒಟ್ಟಾರೆ ಜೀವಸಂಕುಲದ ಒಳಿತಿಗೆ ತಾನು ಟೊಂಕಕಟ್ಟಿ ನಿಲ್ಲುತ್ತಿದ್ದೇನೆಂದು ಬಿಂಬಿಸಬಲ್ಲ ಆದರ್ಶವನ್ನು ಆ ವ್ಯಕ್ತಿ ಮೈಗೂಡಿಸಿಕೊಂಡಿರಬೇಕು. ಮಾಧ್ಯಮಗಳು ಅಹೋರಾತ್ರಿ ಒಡ್ಡುತ್ತಿರುವ ಎಲ್ಲ ಪರೀಕ್ಷೆಗಳಲ್ಲೂ ಪಾಸಾಗುತ್ತ, ತನ್ನಲ್ಲಿ ಕೃತಕತೆಯಿಲ್ಲವೆಂದೂ ಪ್ರತಿಯೊಂದು ಜೀವಕಣದಲ್ಲೂ ಆ ಪ್ರಜ್ಞೆ ಜಾಗೃತವಾಗಿದೆಯೆಂದೂ ಮತ್ತೆ ಮತ್ತೆ ಸಾಬೀತುಪಡಿಸುತ್ತಿರಬೇಕು.

ಅಂಥ ವ್ಯಕ್ತಿ ಈಗಾಗಲೇ ಇಪ್ಪತ್ತರ ಹರಯಕ್ಕೆ ಬಂದಿರಬೇಕಲ್ಲ, ಎಲ್ಲಿ ಎಲ್ಲಿ ಎಂದು ಕೇಳಿದಿರಾ?

ಸ್ವೀಡನ್ನಿನಲ್ಲಿ ಜನಿಸಿದ ಆ ವ್ಯಕ್ತಿಯ ಹೆಸರು ಗ್ರೇತಾ ಥನ್ಬರ್ಗ್.



**–ನಾಗೇಶ ಹೆಗಡೆ,** ವಿಜ್ಞಾನ ಅಂಕಣಕಾರರು, 'ಗ್ರೇತಾ ಥನ್‌ಬರ್ಗ್' ಎಂಬ ಹೆಸರಿನ ಬಯೋಪಿಕ್ ಗ್ರಂಥದ ಲೇಖಕರು, ಬೆಂಗಳೂರು

## ಗಾಂಧೀ ಎಂಬ ಸಾಕ್ಷಿ ಪ್ರಜ್ಞೆಯ ದಾರಿದೀಪ

ಸ್ವಾತಂತ್ರ್ಯಾನಂತರದ ಎಲ್ಲಾ ತಲೆಮಾರಿನವರಿಗೂ ಮಹಾತ್ಮ ಗಾಂಧಿಯವರ ಜತೆ ಭಾವನಾತ್ಮಕ ಸಂಬಂಧವೊಂದು ಇತ್ತು. ಆ ಸಂಬಂಧವೇ ಆಯಾ ಕಾಲಕ್ಕೆ ಭಾರತೀಯ ಸಮಾಜ ಹೊಂದಿದ್ದ ಸಮಷ್ಟಿ ಪ್ರಜ್ಞೆಯ ಸ್ವರೂಪವನ್ನು ನಿರ್ಧರಿಸಿದೆ. ಈಗ ಸ್ವಾತಂತ್ರ್ಯಾನಂತರದ ಮೂರನೆಯ ತಲೆಮಾರೊಂದು ಪ್ರವರ್ಧಮಾನಕ್ಕೆ ಬರುತ್ತಿರುವ ಕಾಲ. ಈ ತಲೆಮಾರನ್ನು ಇಂಗ್ಲಿಷ್‌ನಲ್ಲಿ ಜನರೇಶನ್ ಝೀ ಅಂತ ಕರೆಯುತ್ತಾರೆ. ಇವರ ಕಾಲಕ್ಕೆ ದೇಶದಲ್ಲಿ ಸೃಷ್ಟಿಯಾಗಿರುವ ರಾಜಕೀಯ ಪರಿಸರ ಇವರನ್ನು ಗಾಂಧೀ ದ್ವೇಷಿಗಳನ್ನಾಗಿ ಬೆಳೆಸಲು ಇನ್ನಿಲ್ಲದ ಪ್ರಯತ್ನ ಮಾಡಿದೆ ಮತ್ತು ಅದರಲ್ಲಿ ಸಾಕಷ್ಟು ಯಶಸ್ಸನ್ನೂ ಕಂಡಿದೆ. ಒಂದೆಡೆ ಮಾನವ ಸಂಬಂಧಗಳು ಬೆಸೆದುಕೊಂಡಿರುವ ಪರಿಸರದಿಂದ ಬೇರ್ಪಟ್ಟು ತಂತ್ರಜ್ಞಾನದ ಕೈಗೊಂಬೆಯಾಗಿರುವ, ಇನ್ನೊಂದೆಡೆ ಮಾಹಿತಿಯ ಮಹಾಪೂರದಲ್ಲಿ ದಿಕ್ಕುದೆಸೆ ಕಾಣದೆ ಈಜುತ್ತಿರುವ ಈ ತಲೆಮಾರಿನವರಿಗೆ ಗಾಂಧೀ ಎಂಬ ಸಾಕ್ಷಿ ಪ್ರಜ್ಞೆಯ ದಾರಿದೀಪದ ಅಗತ್ಯ ಹಿಂದಿನ ಬೇರೆಲ್ಲ ತಲೆಮಾರಿನವರಿಗಿಂತಲೂ ಹೆಚ್ಚಾಗಿಯೇ ಇದೆ.

ಯಾರಿಗೆ ಗಾಂಧೀಜಿ ಅಗತ್ಯವಾಗಿದ್ದಾರೋ, ಅವರನ್ನೇ ಗಾಂಧೀಜಿಯವರಿಂದ ಬೇರ್ಪಡಿಸಲಾಗಿದೆ. ಈ ತಲೆಮಾರಿನ ಜತೆಗೆ ಗಾಂಧೀಜಿಯವರನ್ನು ಭಾವನಾತ್ಮಕವಾಗಿ ಮತ್ತೆ ಬೆಸೆಯುವ ಕೆಲಸ ಆಗಬೇಕು. ಇಲ್ಲದೆ ಹೋದರೆ, ಮಾದರಿಯಾಗಬಲ್ಲ ಇನ್ನೊಂದು ಸಾಕ್ಷಿಪ್ರಜ್ಞೆ ಇಲ್ಲದ ಈ ದೇಶದಲ್ಲಿ ಭವಿಷ್ಯದ ಜನಾಂಗವನ್ನು ಅಪಾಯಕಾರಿಯಾದ ನೈತಿಕ ಅನಾಥಪ್ರಜ್ಞೆಯೊಂದು ಕಾಡಲಿದೆ. ಅದಕ್ಕೆ ದೇಶ ದೊಡ್ಡ ಬೆಲೆ ತೆರಬೇಕಾದೀತು. ಗಾಂಧಿ ದ್ವೇಷವನ್ನು ಅವರು ಬಿತ್ತುತ್ತಿದ್ದಾರೆ ಅಂತ ವ್ಯಥೆ ಪಡುತ್ತಾ ಕುಳಿತರೆ ಪರಿಸ್ಥಿತಿ ಇನ್ನೂ ಕೈಮೀರುತ್ತದೆ. ಈಗಾಗಲೇ ನೂರಾರು ಎಳೆಯರು ತಮ್ಮ ಕ್ಲಬ್ ಹೌಸ್/ವಾಟ್ಸಾಪ್ ಡಿಪಿಗಳಲ್ಲಿ ಗೋಡ್ಸೆಯ ಚಿತ್ರವನ್ನು ಅಳುಕಿಲ್ಲದೆ ಪ್ರದರ್ಶಿಸುತ್ತಿದ್ದಾರೆ. ದ್ವೇಷ ಎನ್ನುವುದು ಅಮಲು. ಅದನ್ನು ಇಳಿಸುವುದು ಸುಲಭವಲ್ಲ. ನಿಜವಾದ ಗಾಂಧೀಜಿಯನ್ನು ಮತ್ತೆ ಹೊಸ ತಲೆಮಾರಿನ ಹೃದಯದಲ್ಲಿ ಪ್ರತಿಷ್ಠಾಪಿಸಲು ಇರುವ ಒಂದೇ ಮಾರ್ಗ ಎಂದರೆ ಸತ್ಯವನ್ನು ಗಟ್ಟಿಯಾಗಿ ಹೇಳುವುದು. ಅವರು ಸುಳ್ಳು ಹೇಳುತ್ತಿದ್ದಾರೆ; ಅವರನ್ನು ನಂಬಬೇಡಿ ಅಂತ ಸಾಕ್ಷಿಸಹಿತ ಹೇಳುವ ಧೈರ್ಯ ತೋರುವುದು. ಗಾಂಧೀಜಿಯ ನೆನಪಿನಲ್ಲಿ ಮಾಡುವ ಇತರ ಎಲ್ಲಾ ಕಾರ್ಯಗಳನ್ನು ಬದಿಗಿಟ್ಟು ಗಾಂಧೀಜಿಯ ವಿಚಾರದಲ್ಲಿ ಸತ್ಯಾನ್ವೇಷಣೆ ನಡೆಸಲು ಯುವಜನರನ್ನು ಪ್ರೇರೇಪಿಸುವ ಆಂದೋಲನವೊಂದು ಕಾರ್ಯಾರಂಭವಾಗಬೇಕದ್ದು ಇಂದಿನ ಅಗತ್ಯ.

ಗಾಂಧೀಜಿ ಅವರ ಶಾಂತಿ, ಸತ್ಯ ಮತ್ತು ಅಹಿಂಸೆ, ಅಹಿಂಸಾತ್ಮಕವಾದ ಹೋರಾಟ ಮತ್ತು ಹಕ್ಕು ಪ್ರತಿಪಾದನೆ ವಿಶ್ವಮೌಲ್ಯವನ್ನು ಪಡೆದಿರುವಂಥಹವುಗಳು. ಬುದ್ಧನ ಜ್ಞಾನ, ಏಸುವಿನ ಹೃದಯವನ್ನು ಹೊಂದಿವೆ. ಪರಧರ್ಮ ಸಹಿಷ್ಣುತೆ, ವಿಶ್ವಭ್ರಾತೃತ್ವ, ಸತ್ಯ ಮತ್ತು ಅಹಿಂಸೆಯನ್ನು ವೈಯಕ್ತಿಕವಾಗಿ, ಸಾಮೂಹಿಕವಾಗಿ, ರಾಜಕೀಯ ಆಡಳಿತದಲ್ಲೂ ಸಹ ಜಾರಿಗೆ ತರುವುದು– ಒಂದು ಉದಾತ್ತವಾದ ಕೆಲಸ. ಆದರೆ ಅದು ಈಗಿನ ಸಮಾಜದಲ್ಲಿ ದುಸ್ತರವಾಗಿದೆ. ಪಾರ್ಲಿಮೆಂಟ್ ಹೊಸಲಿಗೆ ನಮಸ್ಕರಿಸಿ, ಸಂವಿಧಾನದ ಆಶಯಗಳಿಗೆ ವಿರುದ್ಧ ನಡೆಯುವಂತಹ ಜನರನ್ನು ನಾವು ನೋಡಿದ್ದೇವೆ. ಬೌದ್ಧಧರ್ಮವನ್ನು ಹೇಗೆ ಭರತಖಂಡದಿಂದ ಓಡಿಸಲಾಯಿತೋ ಅದೇ ರೀತಿ ಗಾಂಧಿ ಆದರ್ಶಗಳನ್ನು ಹೊರಗಟ್ಟಿದರೆ ಆಶ್ಚರ್ಯವಿಲ್ಲ.



**–ಎ.ಎಚ್. ರಾಜಾಸಾಬ್,** ಖ್ವಾಜಾ ಬಂದೇ ನವಾಜ್ ವಿಶ್ವವಿದ್ಯಾಲಯದ ಸಹಾಯಕ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು, ಕಲಬುರಗಿ

## ಅಂಥ ಗಾಂಧಿ, ಬರುವನೇ? ಬಂದನೆಂದಾದರೆ ಉಳಿವನೇ?

ಇವತ್ತು ನಾವು ತೀವ್ರ ತಲ್ಲಣಿಸುತ್ತಿರುವುದು ಕೋಮು ಗಲಭೆ, ಧರ್ಮಾಂಧತೆ, ವಸ್ತು ದಾಹ, ಅಪ–ಅಭಿವೃದ್ಧಿ ಇತ್ಯಾದಿಗಳಿಂದ, ಹೌದು. ಆದರೆ ಇವೆಲ್ಲವನ್ನೂ ಒಂದು ಹಂತದಲ್ಲಿ ಒಂದು ಪ್ರಬಲ ಮತ್ತು ಕನಸುಗಾರ ಸರಕಾರ ಬಂತೆಂದರೆ ಹತೋಟಿಗೆ ತರಬಹುದೇನೋ. ಆದರೆ ಇವತ್ತು ಪರಿಹರಿಸಲು ಅಸಾಧ್ಯ ಎಂಬ ಹಂತಕ್ಕೆ ಬಂದು ಮುಟ್ಟಿಕೊಂಡಿರುವುದು ಹೆಣ್ಣಿನ ಮೇಲೆ ನಿರಂತರ ನಡೆಯುತ್ತಿರುವ ಲೈಂಗಿಕ ಹಲ್ಲೆ. ಅದೂ ಅಮಾನುಷ ಹಲ್ಲೆ. ವಿವಿಧ ಸಾಮಾಜಿಕ ಮಾಧ್ಯಮಗಳಿಂದ ದಿನದಿನಕ್ಕೆ ಇದು ಅತಿರೇಕಕ್ಕೆ ಹೋಗುತ್ತಿದೆಯೇ ಹೊರತು ಕಡಿಮೆಯಾಗುವ ಲಕ್ಷಣ ಇದೆಯೇ? ಹೆಣ್ಣಿಗೆ ಇನ್ನಿನ್ನು ಸುರಕ್ಷಿತ ತಾಣವೇ ಇಲ್ಲವೇನೋ ಎಂಬಂಥ ಭಯಾನಕ ಸ್ಥಿತಿ ಸೃಷ್ಟಿಯಾಗುತ್ತಿದೆ. ನಮ್ಮ ನಂಬಿಕೆಯ ಬುಡಬೇರನ್ನೇ ಕಳಕೊಳ್ಳುವ ಪುರುಷಲೋಕ ಸೃಷ್ಟಿಯಾಗುತ್ತಿದೆ. ಪ್ರಧಾನವಾಗಿ ಇವತ್ತು ನಮ್ಮನ್ನು, ಹೆಣ್ಣುಮಕ್ಕಳನ್ನು, ದೇಶದ ಜನಸಂಖ್ಯೆಯ ಅರ್ಧದಷ್ಟು ಪ್ರಜೆಗಳನ್ನು, ಸುತ್ತಿ ಉಸಿರುಗಟ್ಟಿಸುತ್ತಿರುವುದು ಈ ಸಮಸ್ಯೆ. ಯಾವುದೇ ವಿಪ್ಲವ, ಅಸಮಾನತೆ, ಅವಮಾನ, ಕ್ರೌರ್ಯಗಳು, ವಿವಿಧಾರ್ಥದ ಮೇಲು ಕೀಳು ತಾರತಮ್ಯಗಳ ಆತ್ಯಂತಿಕ ಸಂದರ್ಭಗಳೂ (ಬಿಡಿ. ನಿತ್ಯದ ಮುಗ್ಧ ನಿಶ್ಚಿಂತ ಕ್ಷಣಗಳೂ) ಕೊನೆಗೂ ಮುಟ್ಟಿಕೊಳ್ಳುವುದು ಲೈಂಗಿಕ ಕಿರುಕುಳ, ಹಿಂಸೆ, ಬಲಾತ್ಕಾರ, ಹಿಂದೆಂದೂ ಕಾಣದ ಕೇಳದ ಮರ್ಮಾಂತಿಕ ಅತ್ಯಾಚಾರ, ಸಾಯಿಸಿಯೇ ಬಿಡುವ ಚಂಡಪ್ರವೃತ್ತಿಗೆ, ಅಂತಿರುವಾಗ– ಎಂತಹ ಗಾಂಧಿ ಬೇಕು ಎಂಬ ಪ್ರಶ್ನೆ ಕೇಳಿದ್ದರಿಂದ ಈ ಉತ್ತರ –ನಮಗೀಗ ತುರ್ತಾಗಿ ಬೇಕಾದ್ದು ಒಬ್ಬ ವಿಶಿಷ್ಟ ಗಾಂಧಿ. ನಮಗೆ ಬೇಕಾದ ಗಾಂಧಿ ಈ ಕಾಯಿಲೆಗೆ ಮದ್ದು ಹುಡುಕಬಲ್ಲ ಭೇಷಜನಾಗಿ ಬರಲಿ. ಕೇವಲ ಈ ದೇಶಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೇ ಬೇಕಾದಂತಹ 'ಮನೋ–ಧರ್ಮ' ದವನಾಗಿ ಬರಲಿ. ಕಳೆದ ಆ ಹಳೆಯ ಗಾಂಧಿಯ ಹೆಣ್ಣುಸತ್ವ ಇನ್ನಿಲ್ಲದಷ್ಟು ಉಜ್ವಲವಾಗಿ ಸುತ್ತಣ ಪುರುಷ ಪಿಶಾಚಿಗಳನ್ನು ಗುರುತಿಸಬಲ್ಲ, ಅಹಿಂಸಾತ್ಮಕವಾಗಿ ಬದಲಿಸಬಲ್ಲ, ಪಶ್ಚಾತ್ತಾಪದಲ್ಲಿ ಬೇಯಿಸಿ ಕಣ್ಣು ತೆರೆಯಿಸಬಲ್ಲ ಹೊಸಮಾನವನಾಗಿ ಬರಲಿ. ಮಹಿಳೆಯನ್ನು ಅನಿರೀಕ್ಷಿತ ಕೇಡಿಂದ ಬಚಾಯಿಸುವ ತಂತ್ರಜ್ಞಾನವನ್ನು ಒಪ್ಪಿ ಪ್ರತಿಪಾದಿಸುವವನಾಗಿ ಬರಲಿ.

ಗಾಂಧಿ ಬೇಕೀಗ, ಇಂಥ ಅಸಾಧ್ಯ ಸಾಧಿಸಬಲ್ಲ ಗಾಂಧಿ. ಸಮಾಜಕ್ಕೆ ಹೆಣ್ಣಲ್ಲಿ ಜೀವ ಕಾಣುವ ದೃಷ್ಟಿ ನೆಡಬಲ್ಲ ಕಾಲಾತ್ಮಕ ಗಾಂಧಿ. ಹೆಣ್ಣು ಗಂಡು ಎಂಬ ದ್ವೈತ ಅದ್ವೈತದ ಪೂರ್ಣಪ್ರಜ್ಞೆ ಎಚ್ಚರಗೊಳಿಸಬಲ್ಲವ. ಭೂಮಿ ಹುಟ್ಟಿದಾಗಿಂದ ಹುಟ್ಟಿ ಬೆಳೆಯುತ್ತಲೇ ಇರುವ ಮೂಲ ವಿಕೃತಿಯನ್ನು ಮೂಲೋಚ್ಚಾಟನೆ ಮಾಡಬಲ್ಲವ...



ಬರುವನೇ, ಬಂದನೆಂದಾದರೆ, ಉಳಿವನೇ?

**–ವೈದೇಹಿ, ಚಿಂತಕಿ, ಹಿರಿಯ ಲೇಖಕಿ, ಮಣಿಪಾಲ**

## ಗಾಂಧಿ ಶಿಕ್ಷಣ ನೀತಿ ಇಂದಿನ ಅಗತ್ಯ

ಗಾಂಧಿ ಹೇಗೆ ಮುಖ್ಯರಾಗುತ್ತಾರೆ ಎಂಬುದನ್ನು ಅವರು ಪ್ರತಿಪಾದಿಸಿದ ಶಿಕ್ಷಣ ನೀತಿಯನ್ನು ನಾವು ಅಳವಡಿಸಿಕೊಂಡರೆ ಭದ್ರ ಬುನಾದಿಯ ಮೇಲೆ ಸ್ವಸ್ಥ, ಸುಂದರ, ಸಮಾಜವನ್ನು ಕಟ್ಟಬಹುದು. ಪ್ರೌಢ ಶಾಲೆಯವರೆಗಿನ ಶಿಕ್ಷಣ, ಮಾತೃಭಾಷೆ / ಪರಿಸರದ ಭಾಷೆಯಲ್ಲೆ ಇರಬೇಕು. ಸಮಾಜದ ಎಲ್ಲಾ ಸ್ತರದ ಮಕ್ಕಳು, ಒಂದೇ ಸೂರಿನಡಿ ಓದಿ, ಆಡಿ ಬೆಳೆದರೆ, ಎಳವೆಯಿಂದಲೆ ತಾರತಮ್ಯ ಭಾವನೆ ಬೆಳೆಯುವುದಿಲ್ಲ. ಅಲ್ಲದೆ ಅರ್ಥವಾಗುವ ಭಾಷೆಯಲ್ಲೆ ಶಿಕ್ಷಣ ದೊರೆತರೆ ಸುಲಭವಾಗಿ ಮೆದುಳಿಗೆ ಹೋಗುತ್ತದೆ. ಮನನವಾಗಿ ಹೃದಯವಂತಿಕೆಯೂ ಬರುತ್ತದೆ. ಪರಿಸರದ ಭಾಷೆಯಲ್ಲಿ ಕಲಿತು ವಿಶ್ವಮಾನ್ಯರಾದವರ ಸಾವಿರ ಸಾವಿರ ಉದಾಹರಣೆ ಕೊಡಬಹುದು. ಗಾಂಧಿ, ಗುರುವರ್ಯ ಟ್ಯಾಗೂರ್‌ರಿಂದ ಹಿಡಿದು ನಮ್ಮೊಡನೆ ಇರುವ ಖ್ಯಾತ ವಿಜ್ಞಾನಿ ಪ್ರೊ. ಸಿ.ಎನ್.ಆರ್. ರಾವ್, ಐ.ಎಂ.ಎಫ್ ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ರಿಜರ್ವ್ ಬ್ಯಾಂಕ್ ಗವರ್ನರ್ ಆಗಿದ್ದ ಡಾ॥ ವೈ.ವಿ. ರೆಡ್ಡಿ ಹೀಗೆ ಪಟ್ಟಿ ಬೆಳೆಯುತ್ತದೆ. ಇದು ಭಾಷಾಭಿಮಾನದ ಪ್ರಶ್ನೆಯಲ್ಲ. ಭಾಷೆ ಎಂಬುದು ಜ್ಞಾನ ಸಂಪಾದಿಸಲು, ಹೃದಯಕ್ಕೆ ಅಪದಮನಿ–ಅಭಿದಮನಿಗಳಷ್ಟೇ ಮುಖ್ಯವಾದದ್ದು. ದೇಶ ಕಟ್ಟುವ ಕ್ರಿಯೆಗೆ ಶಿಕ್ಷಣವೇ ಭದ್ರ ಬುನಾದಿ ಎಂದು ಭಾವಿಸಿ, ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತಂದರೆ ನಮ್ಮ ಬಹುತೇಕ ಸಮಸ್ಯೆಗಳು ಸೃಷ್ಟಿಯಾಗುವುದೇ ಇಲ್ಲ. ಸಮಾನ ಶಿಕ್ಷಣ ಪಡೆದವರಿಗೆ ಸಮಷ್ಟಿ ಪ್ರಜ್ಞೆಯ ಅರಿವಿರುತ್ತದೆ. ಕಳೆದ ಮೂರು ದಶಕಗಳಲ್ಲಿ ಜಾಗತೀಕರಣವೂ ಕಾರಣವಾಗಿ ಶಿಕ್ಷಣ ಕ್ಷೇತ್ರ ಶಿಕ್ಷಣೋದ್ಯಮವಾಗಿ ಮಾರ್ಪಟ್ಟಿದೆ. ಪೈಪೋಟಿಯಿಂದ ಅಂಕಗಳಿಗೆ ಮಾತ್ರ ಆಯ್ದ ವಿಷಯಗಳನ್ನು ಕೇಂದ್ರೀಕರಿಸಿ ಅಭ್ಯಾಸ ಮಾಡುತ್ತಿದ್ದಾರೆ. ಮಾನವಿಕಗಳನ್ನು ಅಭ್ಯಾಸಮಾಡದಿದ್ದರೆ ಮಾನವನಾಗಲು ಹೇಗೆ ಸಾಧ್ಯ? ಬುಡ ಭದ್ರ ಮಾಡಿಕೊಳ್ಳದೆ ಕಳಶದ ಕಡೆ ನಮ್ಮ ದೃಷ್ಟಿ ನೆಟ್ಟಂತಾಗಿದೆ. ಜಾಗತಿಕವಾಗಿ ಯೋಚಿಸುತ್ತಾ ನಮ್ಮ ನೆಲ, ನಮ್ಮ ಮನೆ, ನಮ್ಮ ಸಮಾಜವನ್ನು ಮರೆತರೆ ಇಲ್ಲಿ ಸಲ್ಲದವರಾಗಿ, ಅಲ್ಲಿಯೂ ಸಲ್ಲುವುದಿಲ್ಲ.

ನೈತಿಕ ನೆಲೆಗಟ್ಟಿನ, ಅಧ್ಯಾತ್ಮವನ್ನೊಳಗೊಂಡ, ಮಾನವಿಕಗಳ ಸಹಿತ, ಪರಿಸರ ಭಾಷೆಯಲ್ಲಿ ಸಮಾನ ಶಿಕ್ಷಣ ಪಡೆಯದ ಕಾರಣ ಇಂದಿನ ಯುವ ಪೀಳಿಗೆ ಸ್ಪಂದನವನ್ನೇ ಕಳೆದುಕೊಳ್ಳುತ್ತಿದ್ದಾರೆ. ಗಂಗಾ ಶುದ್ಧಿಗಾಗಿ ನಿರಶನ ಮಾಡಿ ಜೀವ ಕಳೆದುಕೊಂಡ ಸಂತ ಪುರುಷೋತ್ತಮ ಅಗರ್ವಾಲ್, ಆದಿವಾಸಿಗಳಿಗಾಗಿ ದುಡಿಯುತ್ತಿದ್ದ ಸ್ಟ್ಯಾನ್‌ಸ್ವಾಮಿಯ ಬಲಿದಾನ, ಜನವಿರೋಧಿ ಮೂರು ಕೃಷಿ ಕಾಯ್ದೆಗಳ ರದ್ದಿಗಾಗಿ ಸುಮಾರು ಮುನ್ನೂರು ದಿನಗಳಿಂದ ಹೋರಾಡುತ್ತಿರುವ ರೈತರ (ಬಹುತೇಕರು ಈ ಯುವಜನರ ತಂದೆ ತಾಯಿಯರು) ಬಗೆಗೆ ದಿವ್ಯ ನಿರ್ಲಕ್ಷ್ಯ, ಉದಾಸೀನ ತಳೆದಿರುವ ಪ್ರಭುತ್ವದ ನೀತಿಯನ್ನು ನೋಡಿಯೂ ತಮಗೆ ಸಂಬಂಧವಿಲ್ಲದಂತೆ ತಣ್ಣಗೆ ಇರುವುದು ದುರಂತದ ಸಂಗತಿ. ಭೋಗದ ಹಸಿವಿನಿಂದ ನರಳುತ್ತಿರುವ ಯುವ ಜನಾಂಗದ ಮೌನವೇ ಪ್ರಭುತ್ವವನ್ನು ಕ್ರೂರಿಯನ್ನಾಗಿ ಮಾಡಿರುವುದು. ಜನವಿರೋಧಿ ಕಾಯ್ದೆಗಳ ವಿರುದ್ಧ ಹೋರಾಡುವುದು ಅಪರಾಧವಲ್ಲ. ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟದಲ್ಲಿ ಕಾಯ್ದೆ ಭಂಗ ಚಳುವಳಿ ಅತ್ಯಂತ ಪ್ರಮುಖವಾದದ್ದು. ಈಗಲಾದರೂ ಎಚ್ಚೆತ್ತುಕೊಂಡರೆ ಶಿಕ್ಷಣದ ಮೂಲಕ ಬದಲಾವಣೆ ತರಬಹುದೆಂಬುದು ನನ್ನ ನಂಬಿಕೆ.



**–ಸಿ. ಚನ್ನಬಸವಣ್ಣ, ಖ್ಯಾತ ಪ್ರಕಾಶಕರು, ಹಿರಿಯ ಸಮಾಜವಾದಿಗಳು, ಬಳ್ಳಾರಿ**

## ಪರ್ಯಾಯ ಜೀವನಶೈಲಿಗಾಗಿ ಗಾಂಧಿ

ಗಾಂಧಿ ನಮಗೆ ಇವತ್ತು ಬೇಕಾಗಿರುವದು ಅತ್ಯಂತ ಮುಖ್ಯವಾಗಿ ನಮ್ಮ ಜೀವನಶೈಲಿಯ [ ವೈಯಕ್ತಿಕ ಮತ್ತು ಸಾರ್ವತ್ರಿಕ] ಸಂದರ್ಭದಲ್ಲಿ. ಹವಾಮಾನ ಸಂಕಷ್ಟ ಮತ್ತು ಭೂ-ತಾಪ ಹೆಚ್ಚಳ ಇವು ಇಂದು ಕೇವಲ ಮನುಷ್ಯಕುಲವಷ್ಟೇ ಅಲ್ಲ ಇಡೀ ಜೀವಸಂಕುಲವೇ ಎದುರಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆ. ಜಾತಿ ಮತ ಗುಡಿ ಗುಂಡಾರ ರಾಜಕೀಯ ಸಾಮಾಜಿಕ ಹೀಗೆ ನಮ್ಮ ಎಲ್ಲ ವ್ಯವಸ್ಥೆಗಳನ್ನು ನೀರಿನಲ್ಲಿ ಮುಳುಗಿಸಿ ಅಥವಾ ಶಾಖದಲ್ಲಿ ಸುಟ್ಟು ಹಾಕಲಿದೆ ಈ ಸಮಸ್ಯೆ. ಮುಂದಿನ ಕೇವಲ ಮೂವತ್ತು ವರ್ಷಗಳಲ್ಲಿ ಸಮುದ್ರದ ಮಟ್ಟ ಏರಿ ಭಾರತದ ೨೫ ಕರಾವಳಿ ನಗರಗಳಲ್ಲಿ ನೀರು ನುಗ್ಗಲಿದೆ. ಒಳನಾಡಿನಲ್ಲಿ ನಗರಗಳು ಅತಿಶಾಖದ ಕೂಪಗಳಾಗಲಿವೆ. ಅರಣ್ಯನಾಶ ಮತ್ತು ರಾಸಾಯನಿಕ ಕೃಷಿಯಿಂದಾಗಿ ಮಣ್ಣಿನ ಫಲವತ್ತತೆ ಕಡಿಮೆಯಾಗಿ ಕೃಷಿಯ ಬಿಕ್ಕಟ್ಟು ಇನ್ನೂ ಹೆಚ್ಚಲಿದೆ. ಜೊತೆಗೇ ನೈಸರ್ಗಿಕ ತೈಲದ ಕೊರತೆ, ಜೀವಿವೈವಿಧ್ಯದ ಸರ್ವನಾಶ ಮುಂತಾದವು ನಮ್ಮ ಬದುಕನ್ನು ಇನ್ನಷ್ಟು ಭೀಕರಗೊಳಿಸಲಿವೆ. ಮೇಲಾಗಿ ಬೊಜ್ಜು ಮಧುಮೇಹ ರಕ್ತದ ಏರೊತ್ತಡ ಮುಂತಾದ ಜೀವನಶೈಲಿಯ ಕಾಯಿಲೆಗಳು. ಇದೆಲ್ಲಕ್ಕೂ ಕಾರಣ ನಾವು ಮನುಷ್ಯರ ಹೊಟ್ಟೆಬಾಕ ಪರಿಸರನಾಶಕ ಜೀವನಶೈಲಿ. ಇದಕ್ಕೆಲ್ಲ ಪರಿಹಾರವೇನು? ಮುಂದಿನ ಐವತ್ತು ವರ್ಷಗಳಲ್ಲಿ ವಿಜ್ಞಾನ ತಂತ್ರಜ್ಞಾನದ ಆವಿಷ್ಕಾರಗಳು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬಹುದು. ಆದರೆ ಇವತ್ತಿನ ಮಟ್ಟಿಗಂತೂ ಅದು ಮುಗಿಲ ಮರೀಚಿಕೆ. ಅಲ್ಲದೆ ನಮಗೆ ಅಷ್ಟು ಸಮಯವೂ ಉಳಿದಿಲ್ಲ ಎಂಬುದು ತಜ್ಞರ ಅಭಿಮತ. ಹಾಗಾಗಿ ನಮಗೆ ಇಂದು ಬೇಕಾಗಿರುವದು ಆಧುನಿಕ ಪರಿಭಾಷೆಯಲ್ಲಿ ಹೇಳುವದಾದರೆ ಶೂನ್ಯ ಇಂಗಾಲದ ಸುಸ್ಥಿರ ಜೀವನಶೈಲಿ. ಇದನ್ನೇ ಗಾಂಧಿ ಹೇಳಿದ್ದು ಸಂತೋಷದಾಯಕ ಆರೋಗ್ಯದಾಯಕ ಸ್ವೇಚ್ಛಾ ಸರಳತೆ ಎಂದು. ಹೇಳಿದ್ದಷ್ಟೇ ಅಲ್ಲ ಬಾಳಿ ತೋರಿಸಿದ್ದು. ಆಹಾರ, ಬಟ್ಟೆ, ಕಟ್ಟಡ ನಿರ್ಮಾಣ, ಕೃಷಿ, ಗುಡಿ ಕೈಗಾರಿಕೆ ಮುಂತಾದ ಪ್ರತಿಯೊಬ್ಬರ ದಿನನಿತ್ಯದ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಸ್ವ ಇಚ್ಛಾ ಸರಳತೆ ಸಾಧಿಸುವದು ಹೇಗೆ ಎಂಬುದಕ್ಕೆ ಗಾಂಧಿಯ ಬದುಕೇ ನಮಗೆ ಜೀವಂತ ಮಾದರಿ. "ವೈಯಕ್ತಿಕವೇ ಜಾಗತಿಕ" ಎಂಬ ಮಹಾಸತ್ಯವನ್ನು ಹೇಳಿ ಬದುಕಿದ ಗಾಂಧಿ ಒಬ್ಬ ಝೆನ್ ಸಂತ. ನಮ್ಮ ಜೀವನಶೈಲಿಗೆ ಇಂದು ಪೂರಕವಾಗುವ ಗಾಂಧಿಯ ಪ್ರಯತ್ನ ಪ್ರಯೋಗಗಳ ಕುರಿತು ಭಾಷಣ ಬರಹಗಳ ರೂಪದಲ್ಲಿ ಚರ್ಚಿಸುವದು ಸರಿಯೇ. ಆದರೆ ಅದಕ್ಕಿಂತ ಹೆಚ್ಚು ಮುಖ್ಯ ಅವುಗಳನ್ನು ಅನುಷ್ಠಾನಕ್ಕೆ ತರುವದು. ಇದನ್ನು ಸಾಧ್ಯ ಮಾಡಿಕೊಳ್ಳುವದಕ್ಕಾಗಿ ನಾವು ಸಮಾನಮನಸ್ಕರು ಮತ್ತೆ ಮತ್ತೆ ಸೇರಿ ನಮಗೆ ಇಂದು ಸೂಕ್ತವೆನಿಸುವ ಪರ್ಯಾಯಗಳ ಬಗ್ಗೆ ಸ್ಪಷ್ಟತೆ ತಂದುಕೊಳ್ಳುವದು ಹಾಗೂ ಆ ಮೂಲಕ ನಮ್ಮೊಳಗೆ ಗಾಂಧಿಯನ್ನು ಜೀವಂತವಾಗಿಟ್ಟುಕೊಳ್ಳುವದು ಇಂದಿನ ತುರ್ತು.



**–ಸಂಜೀವ ಕುಲಕರ್ಣಿ,** ಖ್ಯಾತ ವೈದ್ಯರು, ಚಿಂತಕರು, ಧಾರವಾಡ

## ನಮಗೆ ಬೇಕು ಸರ್ವೋದಯದ ಗಾಂಧಿ

ನಾವೆಲ್ಲ ಕಾಯುತ್ತಿದ್ದೇವೆ. ಗಾಂಧಿ ಅವರೆದುರಿಗಿದ್ದ ವೈರಿಗಳು ಇಂದು ರೂಪ ಬದಲಾಯಿಸಿದ್ದಾರಷ್ಟೇ. ವಸಾಹತೀಕರಣದ ಸ್ಥಳದಲ್ಲಿ ಜಾಗತೀಕರಣ, ಕೋಮುವಾದಗಳು ಪ್ರಬಲವಾಗುತ್ತಿರುವ ಸಮಕಾಲೀನ ಸಂದರ್ಭದಲ್ಲಿ ವೈಯಕ್ತಿಕ ಶುದ್ಧತೆ ಮತ್ತು ಸಮುದಾಯವನ್ನು ಒಳಗೊಳ್ಳುವ ನಾಯಕತ್ವಗಳಿಗಾಗಿ ನಾವು ಮತ್ತೆ ಮತ್ತೆ ಗಾಂಧಿ ಕಡೆಗೇ ನೋಡಬೇಕಾಗುತ್ತದೆ. 'ಸಹಿಷ್ಣುತೆ' 'ಅಹಿಂಸೆ' 'ಕರುಣೆಯ' ಕಾರಣಗಳಿಗಾಗಿ ನಮಗೆ ಗಾಂಧಿ ಸರ್ವಕಾಲಕ್ಕೂ ಅಗತ್ಯವಾಗುತ್ತಾರೆ.

ವಾಣಿಜ್ಯೀಕರಣದ ಮಾರ್ಗವಾಗಿ ಭೋಗವಾದವನ್ನು ವೈಭವೀಕರಿಸಿ, ಕೊಳ್ಳುಬಾಕುತನವನ್ನೇ ಪ್ರವೃತ್ತಿಗೊಳಿಸುತ್ತಿರುವ 'ಇನ್ನಷ್ಟು, ಮತ್ತಷ್ಟು' ಮನೋಭಾವದ ಬದಲಿಗೆ ಈ ಕಾಲಘಟ್ಟದಲ್ಲಿ ಗಾಂಧಿಯವರ 'ಇಷ್ಟು ಸಾಕು' ಎನ್ನುವ ಮನಸ್ಥಿತಿ ನಮ್ಮದಾಗಬೇಕಿದೆ.

ವೈಭವದ ಜೀವನ ಶೈಲಿಯನ್ನೇ ಆದರ್ಶವೆಂದು ಭಾವಿಸಿರುವ ತರುಣ ಸಮುದಾಯಕ್ಕೆ ತನ್ನ ಜೀವನ ಮತ್ತು ಸಂದೇಶಗಳ ಮೂಲಕ 'ಸರಳವು ಸುಂದರ'ವೆಂಬುದನ್ನು ಬೋಧಿಸಿದ ಗಾಂಧಿಗಿಂತ ಮತ್ತೆ ಬೇರೆ ಉದಾಹರಣೆ ಬೇಕೆ? ಪ್ರತಿಯೊಂದೂ ಚಟುವಟಿಕೆಯೂ ಬೆಲೆ ನಿಗದಿಗೊಳಿಸಿಕೊಂಡು ಮನುಷ್ಯ ಸಂಬಂಧಗಳನ್ನು ಅನುಮಾನದಿಂದ ನೋಡುವ ಈ ಕಾಲದಲ್ಲಿ ನಮ್ಮ ಬಾಪುವಿನ 'ಸೇವೆಯ ಮಾರ್ಗ'ವನ್ನು ನೆನೆಪಿಸಿಕೊಳ್ಳಬೇಕಿದೆ.

ವ್ಯಾಪಾರ ಕೇಂದ್ರಿತ ಅಭಿವೃದ್ಧಿಯನ್ನು ಸಾಮಾನ್ಯ ಜನಸಮೂಹದ ಮೇಲೆ ಹೇರಲಾಗುತ್ತಿದೆ. ಸಂಕುಚಿತ ಮನಸ್ಥಿತಿಯ ಅಧಿಕಾರ ಕೇಂದ್ರದ ಅಭಿವೃದ್ಧಿಯ ಪರಿಕಲ್ಪನೆ, ನೈಜತೆಗೆ ದೂರವಿದ್ದು ಬಡವರ, ಶೋಷಿತರ, ಮಹಿಳೆಯರ, ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಗಂಭೀರವಾಗಿ ಗ್ರಹಿಸಿಲ್ಲ. ಈ ಹಿನ್ನೆಲೆಯಲ್ಲಿ ಸರ್ವೋದಯ ಸಾರುವ ಗಾಂಧಿ ನಮಗಿಂದು ಬೇಕಿದ್ದಾರೆ.

ಪ್ರಭುತ್ವ ಪ್ರಬಲವಾಗಿರುವಾಗ ಪ್ರತಿಭಟನೆಗಳು ಕ್ಷೀಣವಾಗುತ್ತವೆ. ಪ್ರಶ್ನಿಸುವ, ಪ್ರತಿಭಟಿಸುವ ಮನಸ್ಥಿತಿ ದುರ್ಬಲವಾಗುತ್ತ ಹೋಗುತ್ತದೆ. ಆಳುವ ವರ್ಗಕ್ಕೆ ಬೇಕಿರುವುದೂ ಇದೆ. ಅನ್ಯಾಯವನ್ನು ವೈಯಕ್ತಿಕ ಮತ್ತು ಸಾಮುದಾಯಿಕ ನೆಲೆಯಲ್ಲಿ ಪ್ರತಿಭಟಿಸುವ ನಾಯಕನಾಗಿ ಗಾಂಧಿ ಅಗತ್ಯವಾಗಿದ್ದಾರೆ. ಕೇಂದ್ರದ ಕೃಷಿ ಮಸೂದೆಗಳ ವಿರುದ್ಧ ನಮ್ಮ ರೈತರು ನಡೆಸುತ್ತಿರುವ ಅಹಿಂಸಾತ್ಮಕ ಹೋರಾಟದಲ್ಲಿ ಗಾಂಧಿಯ ದರ್ಶನವಾಗುತ್ತಿದೆ.

ರಾಷ್ಟ್ರವಾದದ ಹೆಸರಿನಲ್ಲಿ ನಡೆಯುತ್ತಿರುವ ಸಂಕುಚಿತ ಮನೋಧೋರಣೆಯ ಕಾರ್ಯಸೂಚಿಗೆ ಪರ್ಯಾಯವಾಗಿ ಪರಸ್ಪರ ನಂಬಿಕೆಯ, ಮಾನವ ಸಂಬಂಧಗಳಲ್ಲಿ ವಿಶ್ವಾಸವಿರಿಸಿರುವ 'ಟ್ರಸ್ಟಿಶಿಪ್' ಮೂಲಕ ವಿಶಾಲ ತಳಹದಿಯ, ಮಾನವತಾವಾದದ ಘನತೆಯನ್ನು ವಿಸ್ತರಿಸುವ ಚಿಂತನೆಯ ಮೂಲಕ ಗಾಂಧಿ ನಮಗಿಂದು ಅಗತ್ಯವಾಗಿದ್ದಾರೆ.



**–ಎಚ್.ಬಿ. ಪೂಜಾರ,** ನಿವೃತ್ತ ಅಧ್ಯಾಕರು, ಸಮಾಜವಾದಿ ಚಿಂತಕರು, ಗದಗ

## 'ಸಂಭವಾಮಿ ಯುಗೇ ಯುಗೇ'! : ಕಾಯುತ್ತಿದ್ದೇನೆ, ಗಾಂಧಿ ಅವತರಿಸುವನೆಂದು!

ಇತ್ತೀಚಿನ ದಿನಗಳಲ್ಲಿ ನಮ್ಮನ್ನು ಅತೀವವಾಗಿ ಧೃತಿಗೆಡಿಸಿದ್ದು ಆಫ್ಘನಿಸ್ತಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳು. ಒಂದು ಕಾಲದಲ್ಲಿ ಅತ್ಯಂತ ಆಧುನಿಕವಾಗಿ ಮುಂದುವರೆದಿದ್ದ ಆ ದೇಶ ಇಂದು ಧರ್ಮಾಂಧರ ಕೈಯಲ್ಲಿನ ಬಂದೂಕಿನಡಿಗೆ ಸಿಕ್ಕು ನರಳುತ್ತಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಧ್ವನಿ ಎತ್ತಿದ್ದ ಮಲಾಲಾಳನ್ನು ಗುಂಡಿಕ್ಕಿ ಕೊಲ್ಲಲು ಪ್ರಯತ್ನಿಸಿದ್ದ ಜನವೇ ದೇಶದ ಆಡಳಿತವನ್ನು ಕೈಗೆ ತೆಗೆದುಕೊಂಡಿರುವ ಪರಿಣಾಮ ಅಲ್ಲಿನ ಸ್ತ್ರೀ ಶಿಕ್ಷಣ, ಆರೋಗ್ಯ ವ್ಯವಸ್ಥೆಯೆಲ್ಲದರ ಮೇಲಾಗಲಿದೆ. ಮಹಿಳೆಯರ ಶಿಕ್ಷಣ ಮತ್ತು ಹಕ್ಕುಗಳ ಬಗ್ಗೆ ಗಾಂಧೀಜಿಯವರದ್ದು ನೂರು ವರ್ಷಗಳ ಹಿಂದೆಯೇ ಬಹಳ ಗಟ್ಟಿಯಾದ ಧ್ವನಿ. ಗಾಂಧೀಜಿಯವರ ಹತ್ಯೆಗೈದಾತನ ಮೂರ್ತಿ ಪ್ರತಿಷ್ಠಾಪಿಸಿ ಪೂಜೆಗೈಯಲು ಹೊರಟಿರುವ ಭಾರತ ಕೂಡ ಆಫ್ಘನಿಸ್ಥಾನದ ಹಾದಿಯಲ್ಲೇ ಸಾಗಲಿದೆ ಎಂಬ ಎಲ್ಲಾ ಪೂರ್ವ ಸೂಚನೆಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತಿವೆ. ಪ್ರತಿಭಟನೆ ಅಲ್ಲಿಯೂ ನಡೆಯುತ್ತಿದೆ, ನಮ್ಮ ನೆಲದಲ್ಲೂ ನಡೆಯುತ್ತಿದೆ. ಗಾಂಧಿ ತೋರಿದ ಮಾರ್ಗದಲ್ಲಿ ಎಂಬುದೇ ಬಹುದೊಡ್ಡ ಸಮಾಧಾನ.

**ಸ್ಥಳೀಯವಲ್ಲದ ಕೇಂದ್ರೀಕೃತ ಮಾರಕ ಯೋಜನೆಗಳು:** ಹಿಂದೆ ದೇಶಕ್ಕೆ ಒಗ್ಗದ, ಸ್ಥಳೀಯವಲ್ಲದ ಬ್ರಿಟಿಷರ ಅನೇಕ ಕಾಯಿದೆ ಕಾನೂನುಗಳು ಬಂದಾಗೆಲ್ಲ ಕಾನೂನುಭಂಗ ಚಳುವಳಿ, ಅಸಹಕಾರ ಚಳುವಳಿಯಲ್ಲಿ ಇಡೀ ದೇಶದ ಜನರನ್ನೂ ಸಂಘಟಿಸಿ ಕಾಯಿದೆಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ಗಾಂಧೀಜಿಯವರು ಸಫಲರಾಗಿದ್ದರು. ಇಂದು ನಡೆದಿರುವುದೂ ಅದೇಯೇ. ರಾಜ್ಯ ಮತ್ತು ಒಕ್ಕೂಟ ಸರಕಾರಗಳ ಗಡಿರೇಖೆಗಳನ್ನೇ ಅಳಿಸಿಹಾಕಿ ತನ್ನದಲ್ಲದ ವಿಷಯದಲ್ಲಿ ಕೈಹಾಕಿ ಕೃಷಿ ಕಾಯಿದೆಯೇನು, ಸಹಕಾರ ಕಾಯಿದೆಯೇನು, ಈಗ ಟ್ರಿಬ್ಯುನಲ್ ಕೋರ್ಟ್‌ಗೆ ಸಂಬಂಧಿಸಿದ ಕಾಯಿದೆಗಳೇನು ಎಲ್ಲದರಲ್ಲೂ ಮೂಗು ತೂರಿಸಿ ಸ್ಥಳೀಯ ನಿರ್ಧಾರಗಳನ್ನು ಹೊಸಕಿ ಹಾಕುವ ಸ್ಥಳೀಯ ಸರಕಾರಗಳನ್ನು ಮಾನ್ಯ ಮಾಡದ, ಎಲ್ಲವೂ ತನ್ನ ಮೂಗಿನ ನೇರಕ್ಕೇ ನಡೆಯಬೇಕೆನ್ನುವ ಒಕ್ಕೂಟ ಸರಕಾರದ ನೀತಿಗಳು. ಕೋವಿಡ್‌ನ ಕಾರಣಕ್ಕೆ ಒಕ್ಕೂಟ ಸರಕಾರದ ಯಾವೊಂದು ಕೆಲಸವೂ ನಿಂತಿಲ್ಲ. ಆದರೆ ಪ್ರಜೆಗಳು ಭಾಗವಹಿಸಬಹುದಾದ ಸ್ಥಳೀಯ ಸರಕಾರವಾದ ಗ್ರಾಮ ಪಂಚಾಯತಿಗಳ ಗ್ರಾಮಸಭೆಗಳಿಗೆ ಮಾತ್ರ ಅವಕಾಶವಿಲ್ಲ. ಅಧಿಕಾರಶಾಹಿಯು ಪ್ರಜಾತಂತ್ರದ ಮೇಲೆ ಮೇಲುಗೈ ಸಾಧಿಸುತ್ತಿದೆ. ಹೇರಿಕೆಯ ಕಾನೂನುಗಳು ಜಾರಿಗೊಳ್ಳದಂತೆ ಮಾಡಲು ನಮಗೀಗ ಗಾಂಧೀಜಿಯವರು ಬೇಕು, ಅವರ ವಿಚಾರಗಳ ಮಾರ್ಗದರ್ಶನ ಬೇಕು. ಅವರ ಮನೋಬಲದ ಮುಂದಾಳತ್ವ ಬೇಕು.

ಅತ್ಯಾಚಾರ, ಅನಾಚಾರಗಳು ಪರಾಕಾಷ್ಠೆ ತಲುಪಿದಾಗ, 'ಸಂಭವಾಮಿ ಯುಗೇ ಯುಗೇ'! ಎಂದಿದ್ದನಂತೆ ಶ್ರೀಕೃಷ್ಣ. ಭರವಸೆಯಿಂದ ಕಾಯುತ್ತಿದ್ದೇನೆ, ಶ್ರೀಕೃಷ್ಣನಿಗಲ್ಲ, ಗಾಂಧಿ ಅವತರಿಸುವನೆಂದು!



**–ಶಾರದಾ ಗೋಪಾಲ್,** ಸಾಮಾಜಿಕ ಕಾರ್ಯಕರ್ತೆ, ಅಂಕಣಕಾರ್ತಿ, ಧಾರವಾಡ

## ಭೋಗ ವಿಲಾಸದ ಮಹಾರೋಗಕ್ಕೆ ಔಷಧಿ

ಇಡೀ ಜಗತ್ತೇ ಭೋಗವಿಲಾಸದ ಮಹಾರೋಗಕ್ಕೆ ಈಡಾಗಿ ತತ್ತರಿಸುತ್ತಿದೆ. ಹಾಗಾಗಿ ಔಷಧಿಯ ರೂಪದಲ್ಲಿ ನಮಗೆ ಈ ಹೊತ್ತು ಗಾಂಧಿ ಬೇಕು. ಗಣ್ಯರಿಬ್ಬರ ಈ ಮಾತುಗಳು ಇದಕ್ಕೆ ಪುಷ್ಠಿ ನೀಡುತ್ತವೆ. "ಇದುವರೆಗಿನ ಭೂಮಿಯ ಮೇಲಿನ ಶೋಷಣೆಯ ಇತಿಹಾಸದಲ್ಲಿ ಪ್ರಕೃತಿ ನಾಳೆಗೂ ಉಳಿಯುತ್ತಿತ್ತು. ಇಂದಿನ ಜಾಗತೀಕರಣ, ಖಾಸಗೀಕರಣದ ದಾಹದಲ್ಲಿ ಪ್ರಕೃತಿ ನಾಳೆಗೆ ಉಳಿಯುವುದಿಲ್ಲವೇನೋ ಎಂಬಷ್ಟು ವೇಗವಾಗಿ ಧ್ವಂಸೀಕರಣ ನಡೆಯುತ್ತಿದೆ (ದೇವನೂರು ಮಹಾದೇವ :೩೦-೧-೨೦೧೪: ಪ್ರಜಾವಾಣಿ)

"ವಿಶ್ವದ ಕಳೆದೆರೆಡು ಶತಮಾನಗಳಿಂದ ನಡೆದುಬಂದಿರುವ ಕ್ಷಿಪ್ರಕ್ರಾಂತಿಗಳು, ವೈಜ್ಞಾನಿಕ

ಸಂಶೋಧನೆಗಳ ಆಸ್ಫೋಟಗಳು, ತಂತ್ರಜ್ಞಾನದ ನಾಗಾಲೋಟಗಳು, ಮಾನವನ ಅನುಭವ, ಜ್ಞಾನವನ್ನು ಅಗಾಧವಾಗಿ ಹಿಗ್ಗಿಸಿ ಬಿಟ್ಟಿವೆ. ಆದರೂ ಮಾನವನೆದೆಯ ಕಾಳಕೂಟದಲ್ಲಿ ಹಿಂದೆಂದೂ ಕಾಣದ ದುರಾಸೆ, ಶೋಷಣೆ, ವಂಚನೆ, ದ್ವೇಷಾಸೂಯೆಗಳ ಅಗ್ನಿಪರ್ವತವೇ ಸೃಷ್ಟಿಯಾಗುತ್ತಿದೆ ಎನ್ನುತ್ತಾರೆ ಮಾನವಶಾಸ್ತ್ರಜ್ಞರು" (ಕೆ.ಎಸ್. ನಾರಾಯಣಸ್ವಾಮಿ : "ನನ್ನ ಆದರ್ಶ ಗ್ರಾಮ" ಪುಸ್ತಕದಲ್ಲಿ)

ಆಧುನಿಕ ಜಗತ್ತಿನ ಮೇಲ್ಕಂಡ ಸಮಸ್ಯೆಗಳಿಗೆ ಗಾಂಧೀಜಿ ಅವರ ಸತ್ಯ, ಅಹಿಂಸೆ, ಕ್ಷಮಾದಾನ ತತ್ವಗಳಲ್ಲಿ ನಂಬಿ ಬದುಕಿ ಅವುಗಳಿಗೆ ಪರಿಹಾರವನ್ನು ಕಂಡುಕೊಂಡು ಬದುಕಿದ ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲ ಮೊದಲಾದವರು ಗಾಂಧೀ ವ್ಯಕಿ ವಿಚಾರಗಳಿಂದ ಪ್ರಭಾವಿತರಾಗಿ ತಮ್ಮ ಹೋರಾಟದಲ್ಲಿ ಯಶಸ್ಸು ಕಂಡು ಕೊಂಡಿರುವುದು ನಮಗೆಲ್ಲ ಗೊತ್ತೇ ಇದೆ. ಹಾಗೇ "ಜನರನ್ನು ಮಾನಸಿಕವಾಗಿ ತಯಾರು ಮಾಡುವವರೆಗೂ ಅವರಿಗೆ ಅಧಿಕಾರ ಹಸ್ತಾಂತರ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ" ಎಂದು 'ಗ್ರಾಮಸ್ವರಾಜ್ಯ'ದ ಒಂದು ಸಣ್ಣ ಪ್ರಯೋಗ ಮಾಡಿದ್ದ ಪೋಲೆಂಡ್‌ನ ಮಾರಿಷ್ ಫ್ರೀಡ್‌ಮನ್ ಮತ್ತು ಈ ಪ್ರಯತ್ನಕ್ಕೆ ಸಹಕಾರ ನೀಡಿದ್ದ ಔಂದ್ ಪ್ರಾಂತ್ಯದ ರಾಜಕುಮಾರ ಅಪಾ ಪಂತ್ ಅವರಿಗೆ ಹೇಳಿದ್ದ ಮಾತುಗಳೂ ಇಂದಿನ ಸಂದರ್ಭದಲ್ಲಿ ಅರ್ಥಪೂರ್ಣವೆನಿಸುತ್ತವೆ.

ನಮ್ಮ ದೇಶದ ದುರಂತವೆಂದರೆ, ನಾಯಕರ ಸ್ವಾರ್ಥ ಮನೋಭಾವದಿಂದ ಬಹಳ ಯಶಸ್ವಿಯಾಗಿ ಮಾದರಿಯಾಗಿ ನಡೆಯುತ್ತಿದ್ದ ಸಾರ್ವಜನಿಕ ಉದ್ದಿಮೆ, ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿ ಜನಸಾಮಾನ್ಯರ ಬದುಕು ದುಸ್ತರವಾಗುವಂತೆ ಮಾಡಲಾಗಿದೆ. ಇದಕ್ಕೆಲ್ಲಾ ಪರಿಹಾರ ಇಲ್ಲವೆಂದಿಲ್ಲ. ಜನರಲ್ಲಿ ಅರಿವು ಮೂಡಿಸಿ ಸಮುದಾಯದ ಹಿತದಲ್ಲಿ ತಮ್ಮೆಲ್ಲರ ಹಿತವಿದೆ ಎಂದು ಭಾವಿಸಿ ಜನರು ಬದುಕುವಂತೆ ಮಾಡಬೇಕಾಗಿದೆ. ಯುವ ಜನರಲ್ಲಿ, ಗ್ರಾಮೀಣ ಜನರ ಜನಪ್ರತಿನಿಧಿಗಳಲ್ಲಿ, ನೌಕರ ವರ್ಗದವರಲ್ಲಿ ವ್ಯಕ್ತಿ ಮತ್ತು ಸಮಷ್ಟಿಯ ಬದುಕಿನ ಬಗ್ಗೆ ಹೆಚ್ಚೆಚ್ಚು ಅರಿವು ಮೂಡಿಸಿ ಎಲ್ಲರಲ್ಲೂ ಬದ್ಧತೆ ಬರುವಂತೆ ಮಾಡುವುದೇ ಇಂದು ನಮ್ಮ ಮುಂದಿರುವ ಪರಿಹಾರ. ಜೊತೆಗೆ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದು ಅತ್ಯಂತ ಅವಶ್ಯಕ ಮತ್ತು ಅನಿವಾರ್ಯ. ಇದಕ್ಕಾಗಿ ಗಾಂಧೀಜಿ ವ್ಯಕ್ತಿ ವಿಚಾರಗಳನ್ನು ಮನ ಮನಗಳಿಗೆ, ಮನೆ ಮನೆಗಳಿಗೆ ತಲುಪಿಸಬೇಕಾಗಿದೆ.



**–ಜಿ.ಬಿ. ಶಿವರಾಜು,** ನಿವೃತ್ತ ಅಧ್ಯಾಪಕ, ಹಿರಿಯ ಗಾಂಧಿ ಚಿಂತಕ, ಬೆಂಗಳೂರು

## ಕೇಡು, ಅವಿಚಾರಗಳ ನಿಯಂತ್ರಣ ಗಾಂಧಿ ಚಿಂತನೆಗಳಿಂದ ಮಾತ್ರ ಸಾಧ್ಯ

ನಾನು ಕಂಡಂತೆ, ಗಾಂಧೀಜಿ ಅವರಲ್ಲಿದ್ದ ಸರಳತೆ, ಸಹನೆ ಹಾಗೂ ಭಿನ್ನಾಭಿಪ್ರಾಯಗಳನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುವ ಪ್ರವೃತ್ತಿ ಅನನ್ಯವಾದದ್ದು. ಗಾಂಧೀಜಿ ಅವರ ತಮ್ಮ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದ ಪ್ರಜಾಪ್ರಭುತ್ವದ ನಡೆ. ಇದೊಂದು ಅನುಕರಣೀಯವಾದ ಗುಣ. ಅಧಿಕಾರದ ವಿಸ್ತರಣೆ, ಮಿತಿಯಿಲ್ಲದ ಸುಖದ ಹಪಾಹಪಿ ಜನಾಂಗೀಯ ಶ್ರೇಷ್ಠತೆಯ ವ್ಯಸನಗಳ ಕಾರಣಕ್ಕಾಗಿ ಇಂದು ವಿಶ್ವದೆಲ್ಲೆಡೆ ಹಿಂಸೆ ಮತ್ತು ಕ್ರೌರ್ಯಗಳು ವಿಜೃಂಭಿಸುತ್ತಿವೆ. ಇದರಿಂದಾಗಿ ಮಾನವ ಕುಲ ಹಾಗೂ ಪ್ರಕೃತಿ ಈ ಎರಡೂ ನಲುಗುತ್ತಿವೆ. ಇದರ ಫಲವಾಗಿ ಮನುಷ್ಯನ ಒಳಗಿರುವ ಮಾನವತೆಯ ದೀಪದ ಬೆಳಕು ಮಸುಕಾಗುತ್ತಿರುವುದು ಭವಿಷ್ಯದಲ್ಲಿ ನಮ್ಮ ಮುಂದಿನ ತಲೆಮಾರು ಎದುರಿಸಬೇಕಾದ ಸಂಘರ್ಷ, ಹಿಂಸೆಗಳನ್ನು ನೆನೆದರೆ ಮನಸ್ಸು ಮುದುಡುತ್ತದೆ. ಮನುಷ್ಯನಲ್ಲಿರುವ ಇಂತಹ ಕೇಡು ಮತ್ತು ಅವಿಚಾರಗಳನ್ನು ನಿಯಂತ್ರಿಸಲು ಗಾಂಧೀಜಿ ಅವರ ಚಿಂತನೆಗಳಿಗೆ ಮಾತ್ರ ಸಾಧ್ಯ ಎನ್ನುವುದು ಈಗ ಖಚಿತವಾಗಿ ನಮಗೆ ಮನದಟ್ಟಾಗಿದೆ.

ನಮ್ಮ ಸಮಾಜದಲ್ಲಿ ಜಾತಿ, ಧರ್ಮಗಳ ನಡುವೆ ದೊಡ್ಡ ಪ್ರಮಾಣದ ಅಪನಂಬಿಕೆ, ಅಸಹನೆ, ದ್ವೇಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಆತಂಕ ಹುಟ್ಟಿಸುತ್ತಿದೆ. ಮನುಷ್ಯತ್ವವನ್ನೇ ದಹಿಸುವ ಈ ಕ್ಷುದ್ರ ಹಿಂಸೆಯನ್ನು ಗಾಂಧೀಜಿ ಅವರು ಬ್ರಿಟಿಷರ ಮೇಲೆ ಪ್ರಯೋಗಿಸಿದ ಶಾಂತಿ ಮತ್ತು ಅಹಿಂಸಾತ್ಮಕ ವಿಧಾನಗಳಿಂದಲೇ ಹೋಗಲಾಡಿಸಬೇಕು. ಬೇರಾವುದೂ ಸೂಕ್ತವಲ್ಲ' ಎಂಬ ಗಾಂಧಿ ಅವರ ನಿಲುವು ಸದಾ ಸ್ಮರಣೀಯ.

ದುಂದುವೆಚ್ಚ ಮತ್ತು ಆಡಂಬರದ ಜೀವನ ಶೈಲಿ ಮತ್ತು ನಮ್ಮ ಪ್ರದರ್ಶನಾತ್ಮಕ ಅರ್ಥಹೀನ ಆಚರಣೆಗಳು ರದ್ದಾಗಬೇಕು. ದಿನೇ ದಿನೇ ಕ್ಷೀಣಿಸುತ್ತಿರುವ ವಿವಿಧ ಸಮುದಾಯಗಳ ನಡುವಿನ ಸಾಮರಸ್ಯ, ಸಹೋದರತ್ವದ ಭಾವನೆಗಳನ್ನು ಬೆಸೆಯಲು ಕಲೆ, ಸಾಹಿತ್ಯ ಮತ್ತು ಶಿಕ್ಷಣದ ಮೂಲಕ ಅರಿವು ಮೂಡಿಸುವ ಕಾರ್ಯಗಳು ತೀವ್ರಗೊಳ್ಳಬೇಕು. ಸರಳತೆ, ಮಾನವ ಸೇವೆ, ಇತರರನ್ನು ನೋಯಿಸದ ಬದುಕಿನ ಸಂದೇಶಗಳು ತುರ್ತಾಗಿ ನಮ್ಮ ಸಾರ್ವಜನಿಕ ಬದುಕಿನ ಮಾರ್ಗದರ್ಶಿ ಸೂತ್ರವಾಗಿ ನಾವು ಬಳಸಿಕೊಳ್ಳಬೇಕಾಗಿದೆ.



**–ಹೆಚ್.ಎಂ. ರುದ್ರಸ್ವಾಮಿ,** ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿ, ದಲಿತ ಚಿಂತಕರು, ಚಿಕ್ಕಮಗಳೂರು

## ಬದುಕಿನುದ್ದಕ್ಕೂ ಪ್ರಯೋಗಗಳಲ್ಲಿ ತೊಡಗಿದ್ದ ವಿಜ್ಞಾನಿ ಗಾಂಧಿ ಬೇಕು.

ಒಮ್ಮೆ ಗಾಂಧಿಯವರ ಮನೆಯ ಮಗುವೊಂದು ಸೀಸದ ಕಡ್ಡಿ ಬೇಕೆಂದು ಕೇಳುತ್ತದೆ. ಮೊದಲು ಕೊಡಿಸಿದ್ದು ಏನಾಯಿತೆಂದು ಪ್ರಶ್ನಿಸಿದಾಗ ಸತ್ಯ ಹೊರಬೀಳುತ್ತದೆ. ಆ ಮಗು ಹೊಸ ಸೀಸದ ಕಡ್ಡಿ ಆಸೆಗೆ ಹಳೆಯದಾದ ಆದರೆ ಇನ್ನೂ ಉಪಯೋಗಿಸಬಹುದಾಗಿದ್ದ ಸೀಸದ ಕಡ್ಡಿಯನ್ನು ಎತ್ತಲೋ ಎಸೆದಿರುತ್ತದೆ. ಗಾಂಧಿಯವರು ತಾವು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಮಗುವಿನ ಜೊತೆ ಮಗುವಾಗಿ ಸೀಸದ ಕಡ್ಡಿಯನ್ನು ಹುಡುಕುತ್ತ ವಸ್ತುಗಳನ್ನು ಪೋಲು ಮಾಡದಿರುವ ಬಗ್ಗೆ ತಿಳಿಹೇಳುತ್ತಾರೆ.

ವೈಸ್‌ರಾಯ್ ಇರ್ವಿನ್‌ರೊಡನೆ ೧೯೩೧ರ ಮಾತುಕತೆಗೆ ಗಾಂಧಿಯವರು ವಾಹನ ಸೌಕರ್ಯವನ್ನು ನಿರಾಕರಿಸಿ, ವೈಸ್‌ರಾಯ್‌ರ ಅರಮನೆಗೆ ೭ ಕಿ.ಮೀ. ದೂರವನ್ನು ನಡಿಗೆಯಲ್ಲೇ ಹೋಗಿಬರುತ್ತಾರೆ. ಒಮ್ಮೊಮ್ಮೆ ಮಾತುಕತೆ ಸರಿರಾತ್ರಿಯಾದರೂ ನಡೆದೇ ಹೋಗಿಬರುತ್ತಿದ್ದರಂತೆ.

ದಂಡಿ ಸತ್ಯಾಗ್ರಹಕ್ಕೆ ಹೊರಟ ಗುಂಪಲ್ಲಿ ಗಾಂಧಿಯವರೇ ವಯಸ್ಸಿನಲ್ಲಿ ಅತ್ಯಂತ ಹಿರಿಯರಾಗಿದ್ದರು. ೬೧ ವರ್ಷದ ಅವರು ನಡೆಯುತ್ತಿದ್ದಾರೋ, ಓಡುತ್ತಿದ್ದಾರೋ ಎಂದು ಅನುಮಾನ ಬರುವಷ್ಟು ಉತ್ಸಾಹದಲ್ಲಿ ಇದ್ದರಂತೆ. ಆಗ ಆಶ್ರಮವಾಸಿಯೊಬ್ಬರು ಗಾಂಧಿಯವರ ಕೈಗೆ ಒಂದು ಬಿದಿರ ಊರುಗೋಲು ಕೊಡುತ್ತಾರೆ!

ದೇಶದ ಪ್ರಮುಖ ನಾಯಕರ ಜೊತೆ ಎಂತಹ ಗಹನ ವಿಷಯವನ್ನು ಚರ್ಚಿಸುತ್ತಿದ್ದಾಗಲೂ ಆಶ್ರಮದ ಮೇಕೆಯ ಅನಾರೋಗ್ಯದ ಕಡೆ ಗಮನವಿಟ್ಟಿರುತ್ತಿದ್ದರು ಗಾಂಧಿ!

'ಈಶ್ವರ ಅಲ್ಲ ತೇರೆ ನಾಮ್' ಎಂದ ಗಾಂಧಿ, ನಿಜವಾದ ಕ್ರೈಸ್ತ ಎಂದು ಪಾದ್ರಿಗಳಿಂದ ಪ್ರಶಂಸೆಗೊಳಗಾದ ಗಾಂಧಿ, ಎದೆಗೆ ಗುಂಡೇಟು ಬಿದ್ದಾಗಲೂ 'ಹೇ ರಾಮ್' ಎಂದ ಗಾಂಧಿ!

ಇಂಥ ಗಾಂಧಿ ಬೇಕು.

ತನ್ನ ಸಹಜತೆಯಿಂದಲೇ, ಸರಳತೆಯಿಂದಲೇ, ಜುಗ್ಗತನದಿಂದಲೇ ಪರಿಸರಪ್ರೇಮಿಯಾಗಿದ್ದ ಗಾಂಧಿ ಬೇಕು.

ತಾವು ನಂಬಿದ ತತ್ವಗಳಿಂದಲೇ ಅಸೀಮ ಧೈರ್ಯ ಹೊಂದಿದ್ದ ಜಿಗುಟು ಗಾಂಧಿ ಬೇಕು.

ಕೇಡಿನೊಂದಿಗೆ ರಾಜಿಯಾಗದ 'ಮೊಂಡ' ಗಾಂಧಿ ಬೇಕು.

ಒಳಗು ಮತ್ತು ಹೊರಗು ಒಂದೇ ಆಗಿದ್ದ ಗಾಂಧಿ ಬೇಕು.

ನಡೆ ನುಡಿ ಒಂದೇ ಆಗಿದ್ದ ಗಾಂಧಿ ಎಂಬ ಸಂತ ಬೇಕು.

ಶತ್ರುಗಳ ಎದೆಯಲ್ಲಿ ಪ್ರೀತಿಯನ್ನು, ಮಿತ್ರರ ಆತ್ಮೋನ್ನತಿಯನ್ನು ಏಕಕಾಲಕ್ಕೆ ಉಂಟುಮಾಡಬಲ್ಲವರಾಗಿದ್ದ ಗಾಂಧಿ ಬೇಕು.

ಸಣ್ಣಪುಟ್ಟ ಸಂಗತಿಗಳ ಮೂಲಕವೇ ಮಹತ್ತರವಾದುದನ್ನು ಸಾಧಿಸುತ್ತಿದ್ದ ಗಾಂಧಿ ಬೇಕು.

ಬದುಕಿನುದ್ದಕ್ಕೂ ಪ್ರಯೋಗಗಳಲ್ಲಿ ತೊಡಗಿದ್ದ ವಿಜ್ಞಾನಿ ಗಾಂಧಿ ಬೇಕು.



**–ಮಿರ್ಜಾ ಬಷೀರ್,** ಪಶುವೈದ್ಯ ಇಲಾಖೆಯ ನಿವೃತ್ತ ಅಧಿಕಾರಿ, ಕಥೆಗಾರ, ತುಮಕೂರು

## ನಮಗೀಗ ಬೇಕಿರುವುದು ಆ ಲೌಕಿಕ ಫಕೀರ ಗಾಂಧೀಜಿಯೇ ಅಲ್ಲವೇ?

ಇಂದಿನ ಸಂದರ್ಭಕ್ಕೆ ಬೇಕಾಗಿರುವ ಗಾಂಧೀಜಿ ಹೇಗಿರಬೇಕು ಎಂದರೆ ಉತ್ತರ ಸುಲಭ. ಅಂದಿನ ಸಂದರ್ಭದಲ್ಲಿ ಇದ್ದ ಗಾಂಧೀಜಿಯೇ ಇಂದಿಗೂ ಬೇಕಿರುವುದು. ಬಿಂದು–ವಿಸರ್ಗ ಬದಲಾಗುವ ಅಗತ್ಯವಿಲ್ಲ. ಯಾರದು ಇಂದಿಗೂ ಬೇಕಾಗಿರುವ ಅಂದಿನ ಗಾಂಧೀಜಿ?

ಅವರು ಒಬ್ಬಂಟಿಯಾಗುವ ಭಯವಿಲ್ಲದೆ ಸತ್ಯ ಹೇಳುವ–ಹೇಳಿದ ಸತ್ಯಕ್ಕೆ ಬದ್ಧವಾಗಿರುವ ಗಾಂಧೀಜಿ? ಅವರೇ ಈಗಲೂ ಬೇಕಾಗಿರುವುದು. ರಾಜಕೀಯಕ್ಕೆ ಸೂಕ್ತವಾಗುವ (politically correct) ಸತ್ಯಗಳನ್ನೇ ಹೇಳುವ ಹೇಡಿ ರಾಜಕಾರಣವೊಂದು ಈ ದೇಶದಲ್ಲಿ ಅಂತ್ಯವಾಗಬೇಕಾದರೆ ನಮಗೀಗ ಬೇಕಾಗಿರುವುದು ಆ ಗಾಂಧೀಜಿಯೇ ಅಲ್ಲದೆ ಇನ್ನಾವ ತೆರನ ಗಾಂಧೀಜಿ?

ರಾಜಕೀಯದಲ್ಲಿ ನಿರಂತರವಾಗಿ ಆವಿಷ್ಕಾರಗಳನ್ನು ಮಾಡುತ್ತಲೇ ರಾಜಕಾರಣ ಮಾಡುತಿದ್ದ ಆ ಗಾಂಧೀಜಿಯೇ ಈಗಲೂ ಬೇಕಾಗಿರುವುದು. ಯಾಕೆಂದರೆ, ರಾಜಕಾರಣ ಈಗ ಹೊಸ ಪ್ರಯೋಗಗಳೇ ಇಲ್ಲದೆ ಬರಡಾಗಿದೆ. ಹೊಸ ಪ್ರಯೋಗ ಅಂತ ಪ್ರಾರಂಭವಾದದ್ದೆಲ್ಲಾ ಹಳೆಯ ಜಾಡು ಹಿಡಿಯುತ್ತದೆ. ಅಡ್ಡ ದಾರಿ ಹಿಡಿದು

(೧೩ನೇ ಪುಟಕ್ಕೆ

ಪ್ರಬಂಧ

# ನಮ್ಮೂರ ಕಾಮನ ಹಬ್ಬ

–ಜಿ. ವಿ. ಆನಂದಮೂರ್ತಿ

> ಇದ್ದಕ್ಕಿದ್ದ ಹಾಗೆ ಕಾಲವೇ ತುಂಡಾದಂತೆ ಈ ಎಲ್ಲ ಕಲೆಗಳೂ ಒಮ್ಮಿಂದೊಮ್ಮೆಲೇ ವಿಸ್ಮೃತಿಯ ಧೂಳಿನಲ್ಲಿ ಮರೆಯಾದವು! ಗೊಂಬೆ ಪ್ರದರ್ಶನ ಮಾಡುತ್ತಿದ್ದ ರುದ್ರಣ್ಣಯ್ಯ ಅವರು ಕಾಲವಾದ ನಂತರ, ಆ ಕಲೆಯು ಅವರ ಬೆನ್ನಹಿಂದೆಯೇ ಕಣ್ಮರೆಯಾಯಿತು. ಅವರ ಕುಟುಂಬದವರು ಗೊಂಬೆಗಳನ್ನೆಲ್ಲಾ ಸಂಸ್ಥೆಯೊಂದಕ್ಕೆ ದಾನ ಮಾಡಿದರು. ಈಗ ಆ ಕುಟುಂಬದವರು ಜೀವನಕ್ಕಾಗಿ ಬೇರೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಹುಲಿವೇಷ, ಪಾಳೇಗಾರನ ವೇಷ, ಡಿಗಂಭರಿ ಪಾತ್ರಗಳೆಲ್ಲಾ ತೆರೆಯ ಹಿಂದಕ್ಕೆ ಸರಿದವು. ಆದರೆ ಅವರು ಉಳಿಸಿಹೋದ ಯಕ್ಷಲೋಕದ ರಂಗಭೂಮಿ ಇಂದು ಖಾಲಿಯಾಗಿಯೇ ಉಳಿದಿದೆ. ಆ ಅಭಿಜಾತ ಕಲಾವಿದರು ಇಂತಹ ಮಾಸಲಾರದ ನೂರಾರು ನೆನಪುಗಳನ್ನು ನಮ್ಮೊಳಗೆ ಉಳಿಸಿಹೋಗಿದ್ದಾರೆ



ಚಿತ್ರ: ಗುಜ್ಜಾರ್

**ಜೀ**ಶಂಪ ಅವರು ಬರೆದಿರುವ ಕನ್ನಡದ ನೆಲದಿಂದ 'ಕಣ್ಮರೆಯಾದ ಕೀಲುಗೊಂಬೆಯಾಟ'ದ ಬಗೆಗಿನ ಲೇಖನವು ನನ್ನನ್ನು ಎಳವೆಯ ದಿನಗಳಿಗೆ ಕರೆದೊಯ್ಯಿತು. ಸಂಕ್ರಾಂತಿ ಕಳೆದ ನಂತರ ಬೇಸಗೆಯ ದಿನಗಳಲ್ಲಿ ಆಗ ನಮ್ಮ ಕೇರಿಗೆ ಹಾವಾಡಿಸುವವರು, ದುರ್ಗಮ್ಮನನ್ನು ತಲೆಮೇಲೆ ಹೊತ್ತುತರುತ್ತಿದ್ದವರು, ಬಸವನಾಡಿಸುವವರು, 'ದೊಂಬಿದಾಸರು', 'ತೊಗಲುಗೊಂಬೆ'ಯವರು ವಾಡಿಕೆಯಂತೆ ಯಾವುದೋ ಅದೃಶ್ಯ ಲೋಕದಿಂದ ಬಂದಂತೆ ಬರುತ್ತಿದ್ದರು! ಹೀಗೆ ಬಂದವರು ತಮ್ಮ ಪ್ರದರ್ಶನಗಳನ್ನು ಮುಗಿಸಿಕೊಂಡು ಕೇರಿಯವರು ಕೊಟ್ಟ 'ಪಡಿ'ಯನ್ನು ಸ್ವೀಕರಿಸಿ ಮರಳುತ್ತಿದ್ದರು. ಮತ್ತೆ ಅವರ ದರ್ಶನ ನಮಗೆ ದೊರೆಯುತ್ತಿದ್ದುದು ಮುಂದಿನ ಬೇಸಗೆಯಲ್ಲಿಯೇ! ಅದರಲ್ಲೂ ಗೊಂಬೆರಾಮರ 'ತೊಗಲುಗೊಂಬೆ' ಆಟವನ್ನಂತೂ ಕತ್ತಲಿನೊಡನೆ ಹಂಚಿಕೊಂಡು ನೋಡಿ ಸುಖಿಸಿದ ನೆನಪುಗಳು ಈಗಲೂ ನನ್ನೊಳಗೆ ಅಚ್ಚೊತ್ತಿದಂತೆ ಉಳಿದಿದೆ. ನಮ್ಮ ಕೇರಿಯನ್ನು ಗಂಧರ್ವಲೋಕವನ್ನಾಗಿ ಮಾಡುತ್ತಿದ್ದ ಆ ಮಾಯಾಲೋಕದ ಕಲಾವಿದರು ನದಿಯ ಮೇಲಿನ ಹೆಜ್ಜೆ ಗುರುತಿನಂತೆ ಎತ್ತ ಹೋದರು?

ಆಗ ನಮ್ಮ ಕೇರಿಯಲ್ಲಿ ಪ್ರತಿ ವರುಷ ಮಾರ್ಚ್ ತಿಂಗಳಿನಲ್ಲಿ ಕಾಮನ ಹಬ್ಬವನ್ನು ಆಚರಿಸುತ್ತಿದ್ದೆವು. ಈಗಿನಂತೆ ಕಾಮನ ಹಬ್ಬದಲ್ಲಿ ಬಣ್ಣಗಳನ್ನು ಎರಚುವ ಸಂಪ್ರದಾಯ ಆಗ ನಮ್ಮಲ್ಲಿರಲಿಲ್ಲ! ಕಾಮನ ಹಬ್ಬವೆಂದರೆ ಗೊಂಬೆ ಪ್ರದರ್ಶನ, ಹುಲಿವೇಷ, ಡಿಗಂಭರಿ ವೇಷ, ಕತ್ತಿವರಸೆ, ದೊಣ್ಣೆವರಸೆ, ಕಾವಡಿ, ಕರಗ ಹಾಗೂ ಪಾಳೇಗಾರನ ವೇಷಗಳು ನಮ್ಮ ಕಣ್ಣ ಮುಂದೆ ಬಂದು ನಲಿಯುತ್ತವೆ. ಹುಲಿವೇಷಕ್ಕೆ ಪ್ರಖ್ಯಾತರಾಗಿದ್ದ ದೊಂಬರ ಜಾಲಪ್ಪ ಮತ್ತು ಅವರ ಮಗ ಸೀನ (ಶ್ರೀನಿವಾಸ), ಗಾರೆ ಕೆಲಸದ ರಾಮಣ್ಣ, ಮೇಸ್ತ್ರಿ ಆಂಜಿನಪ್ಪ, ಕಠಾರಿ ಸಿದ್ದ, ದೋಬಿ ರಾಮಣ್ಣ ಅವರ ವೇಷವನ್ನು ನೋಡುವುದೇ ಚಂದ. ಮೈ ತುಂಬಾ ಹುಲಿಯ ಪಟ್ಟೆಗಳು, ಎರಡೂ ಕೈಯಲ್ಲಿ ನಿಂಬೆಹಣ್ಣು, ಕಣ್ಣಿಗೆ ಕಪ್ಪು ಕನ್ನಡಕ, ಕಾಲಿಗೆ ಕಟ್ಟಿರುತ್ತಿದ್ದ ಕಂಬಳಿ ದಾರದ ಕಂಕಣ, ಸೊಂಟಕ್ಕೆ ಬಂದೋಬಸ್ತಿನಿಂದ ಬಿಗಿದಿರುತ್ತಿದ್ದ ಗೆಜ್ಜೆ, ಹುಲಿಯೂ ಹೆದರುವಂತಹ ಸಿಡಿಗಣ್ಣಿನ ನೋಟ. ಇವರ ಕುಣಿತವಂತೂ ಹುಚ್ಚೆಬ್ಬಿಸುವಂತೆ ಇರುತ್ತಿತ್ತು. ನೆಲದ ಮೇಲೆ ಬೆಂಕಿಪಟ್ಟಣಕ್ಕೆ ಸಿಕ್ಕಿಸಿರುತ್ತಿದ್ದ ಒಂದು ರೂಪಾಯಿಯ ನೋಟನ್ನು ಕೇವಲ ಕಣ್ಣಿನ ರೆಪ್ಪೆಯಲ್ಲೇ ತೆಗೆಯುತ್ತಿದ್ದ, ನೆಲದಮೇಲೆ ಇಟ್ಟಿದ್ದ ನಿಂಬೆಹಣ್ಣನ್ನು ಕೇವಲ ಹಣೆಯಿಂದಲೇ ಒಡೆಯುತ್ತಿದ್ದ ಸೀನನ ಹುಲಿವೇಷವಂತೂ ಮೈನಿಮಿರೇಳಿಸುವಂತೆ ಇರುತ್ತಿತ್ತು! ಪಾಳೇಗಾರನ ವೇಷಕ್ಕೆ ಪ್ರಸಿದ್ದರಾಗಿದ್ದ ಅಜಾನುಬಾಹು ವೆಂಕಟಾಚಾರ್ರು, ದೊಂಬರ ಪುಟ್ಟರಾಜು, ತಿಗಳರ ನರಸಿಂಹಮೂರ್ತಿ ಅವರ ದೇಹದ ಭಾಷೆ, ಹೆಜ್ಜೆಗಳ ಗತಿಯನ್ನು ರೆಪ್ಪೆ ಮುಚ್ಚದೆ ನೋಡುತ್ತಿದ್ದೆವು. ಇನ್ನು ಮುನಿದ ಪಾಳೇಗಾರನನ್ನು ರಮಿಸುವ ಹೆಣ್ಣಾಗಿ ಕ್ಷೌರಿಕರ ನಂಜಪ್ಪ ಹಾಗೂ ತೋಟದ ಹನುಮಯ್ಯ ಅವರ ಉಡುಗೆ ಮತ್ತು ನಡಿಗೆಯ ಅಭಿನಯವಂತೂ ಹೆಣ್ಣುಮಕ್ಕಳು ನಾಚುವಂತೆ ಇರುತ್ತಿತ್ತು. ಇವರ ಜೊತೆಗೆ ಕಲ್ಲುಗೆಲಸದ ತಿಮ್ಮಯ್ಯನವರ ಮಕ್ಕಳಾದ ದೊಡ್ಡೀರ ಮತ್ತು ಚಿಕ್ಕೀರ ಅವರ ಮೋಹಕ ದೊಣ್ಣೆವರಸೆ, ಕಾವಡಿ ಆಡಿಸುವುದರಲ್ಲಿ ಹೆಸರಾಗಿದ್ದ ಪೈಲ್ವಾನ್ ಸಿದ್ದ, ನವುರಾಗಿ ಕರಗ ಕುಣಿಸುತ್ತಿದ್ದ ಮೇಸ್ತ್ರು ಚೆನ್ನವೀರಪ್ಪ, ಕತ್ತಿವರಸೆಯಲ್ಲಿ ಹನುಮಂತರಾಯಪ್ಪ..... ಎಷ್ಟೊಂದು ಕಲಾವಿದರು! ಇವರೆಲ್ಲರೂ ತಮ್ಮೊಳಗೆ ಮೊರೆಯುತ್ತಿದ್ದ ಕಲೆಯನ್ನು ಪರಿಮಳದಂತೆ ಹರಡುವಲ್ಲಿ ನಿಪುಣರಾಗಿದ್ದರು. ನಿಜವಾಗಿಯೂ ಇವೆಲ್ಲವೂ ಶೂದ್ರ ಜಗತ್ತಿನ ಅಸಾಧಾರಣ ಕಲೆಗಳು.

ಹುಲಿವೇಷದ ಅವಿಭಾಜ್ಯ ಅಂಗವಾಗಿರುವ 'ಟಾಜಾ' ಮತ್ತು 'ತಮಟೆ' ಬಾರಿಸುತ್ತಿದ್ದ ದೊಡ್ಡಹಟ್ಟಿಯವರಾದ ಮೋದಪ್ಪ ಮತ್ತು ಡೋರಪ್ಪ ಅವರ ಗತ್ತನ್ನು ನೋಡುವುದು ಇನ್ನೂ ಚೆಂದ! ಮಣ್ಣಿನ ಮಡಕೆಗೆ ಬಿಗಿದ ಚರ್ಮದಿಂದ ಮಾಡಿದ್ದ ವಾದ್ಯವನ್ನು ಸ್ಥಳೀಯವಾಗಿ 'ಟಾಜಾ' ಎಂದು ಕರೆಯುತ್ತಿದ್ದರು. ಎಂತಹವರನ್ನೂ ಕುಣಿತಕ್ಕೆ ಪ್ರೇರೇಪಿಸುವಂತೆ, ಮೋದಪ್ಪ ಅವರು ಈ ಚರ್ಮವಾದ್ಯವನ್ನು ಹುಚ್ಚೆಬ್ಬಿಸುವಂತೆ ಬಾರಿಸುತ್ತಿದ್ದರು. ಅದೇ ರೀತಿ ಡೋರಪ್ಪನವರು 'ಕುಡ' ತೆಗೆದುಕೊಂಡು ತಮಟೆಯನ್ನು ಹೆಗಲಿಗೇರಿಸಿದರೆ ಹುಲಿಗಳ ಕಾಲುಗಳು ನೆಲದ ಮೇಲೆ ನಿಲ್ಲುತ್ತಿರಲಿಲ್ಲ! ಹೀಗೆ ಕಾಮನ ಹಬ್ಬಕ್ಕೆ ರಂಗು ತರುತ್ತಿದ್ದ ಅಸಾಮಾನ್ಯ ಕಲಾವಿದರು ಇವರು. ಅವರಲ್ಲಿದ್ದ ಶ್ರದ್ಧೆ ಮತ್ತು ಬದುಕಿನ ಬಗೆಗಿನ ನಿರ್ವ್ಯಾಮೋಹವೇ ಅವರ ಕಲೆಯನ್ನು ಉನ್ನತೀಕರಿಸಿತ್ತು. ಇಂತಹ ಅಸಂಖ್ಯಾತ ಪ್ರತಿಭಾವಂತರಿದ್ದ ದೊಡ್ಡಹಟ್ಟಿಗೆ ಎಲ್ಲೂ ದಾಖಲಾಗದಿರುವ ಒಂದು ಭವ್ಯ ಇತಿಹಾಸವಿದೆ. ಮಹಾತ್ಮ ಗಾಂಧೀಜಿ ಹೆಜ್ಜೆಯಿಟ್ಟ ಹಟ್ಟಿಯಿದು ಎಂದರೆ ನಿಮಗೆ ಆಶ್ಚರ್ಯವಾಗಬಹುದು! ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ಅಂಗವಾಗಿ ೧೯೩೨ ರಿಂದ ೧೯೩೪ರ ಅವಧಿಯಲ್ಲಿ ಒಮ್ಮೆ ಗಾಂಧೀಜಿ ದೊಡ್ಡಹಟ್ಟಿಗೆ ಬಂದಿದ್ದರು. ಹಟ್ಟಿಯ ರಸ್ತೆಯ ನಡುವೆ ಹಾಸಿದ್ದ ದುಪ್ಪಿ ಮೇಲೆ ಗಾಂಧೀಜಿ ಕುಳಿತು ಶಿಕ್ಷಣದ ಮಹತ್ವ, ಪಾನ ನಿರೋಧ ಮತ್ತು ಸ್ವಚ್ಛತೆಯ ಬಗ್ಗೆ ಎಲ್ಲರಿಗೂ ತಿಳಿಯ ಹೇಳಿ, ಅಲ್ಲಿಯೇ ಇದ್ದ ಪುಸ್ತಕವೊಂದರಲ್ಲಿ ಸಹಿ ಮಾಡಿ ಹೋದ ರಸಭರಿತ ನೆನಪುಗಳನ್ನು ಈಗಲೂ ಈ ಹಟ್ಟಿ ಉಳಿಸಿಕೊಂಡಿದೆ. ಅಕ್ಷರಜ್ಞಾನವೇ ದೊಡ್ಡದು ಎನ್ನುವ ದಿನಗಳಲ್ಲಿ, ಪಾರಂಪರಿಕ ಕೌಶಲವೂ ಜ್ಞಾನಕ್ಕೆ ಸಮಾನವಾದದ್ದು ಎನ್ನುವುದನ್ನು ಜಗತ್ತಿನ ಮುಂದೆ ತೋರಿಸುತ್ತಿದ್ದ ವಿಶಿಷ್ಟ ಹಟ್ಟಿಯಿದು. ಆ ದಿನಗಳಲ್ಲಿ ಮಣೆಗಾರರೆ ಇದ್ದ ಈ ದೊಡ್ಡಹಟ್ಟಿಗೆ ಕ್ಷೌರಿಕರು ಪ್ರವೇಶಿಸುತ್ತಿರಲಿಲ್ಲ. ಆದ್ದರಿಂದ ಇದೇ ಹಟ್ಟಿಯವರಾದ ಮೋದಪ್ಪ ಮತ್ತು ಡೋರಪ್ಪ ಕ್ಷೌರ ಮಾಡುವುದನ್ನು ಕಲಿತು ತಮ್ಮ ಬಂಧುಗಳಿಗೆ ಹಟ್ಟಿಯಾಚೆಗೆ ಇದ್ದ ಇಪ್ಪೆತೋಪಿನಲ್ಲಿ ಕುಳಿತು ಕ್ಷೌರ ಮಾಡುತ್ತಿದ್ದರು. ಹೀಗೆ ಮಾಡುವುದರ ಮೂಲಕ ಭಾರತದ ತರತಮ ಭಾವದ ಜಾತಿಪದ್ಧತಿಗೆ ಮೋದಪ್ಪ ಮತ್ತು ಡೋರಪ್ಪ ಖಡಕ್ಕಾಗಿ ಉತ್ತರಿಸಿದ್ದರು. ಇದೊಂದು ರೋಚಕ ಕಥೆ! ಭಾರತದ 'ಸದ್ಗುಣಿಗಳ ಚರಿತ್ರೆ' ಇದುವರೆಗೂ ಮುಟ್ಟದ ಇಂತಹ ವಿದ್ರಾವಕ ಬದುಕಿನ ಸಾಮಾಜಿಕ ಮತ್ತು ಐತಿಹಾಸಿಕ ಕಥನಗಳು ದೊಡ್ಡಹಟ್ಟಿಯ ಆಳಕ್ಕಿಳಿದರೆ ಕೈಗೆ ಸಿಗುತ್ತವೆ. ಇವೆಲ್ಲವನ್ನೂ ಪ್ರತ್ಯೇಕವಾಗಿಯೆ ಹೇಳಬೇಕು. ಈ ಮಹನೀಯರೆಲ್ಲರೂ ಕೂಗಳತೆಯಲ್ಲಿದ್ದ ನನ್ನ ಕೇರಿಯ ಬೆಳಕು, ಗಾಳಿ, ನೀರು, ಪ್ರೀತಿಯನ್ನು ಹಂಚಿಕೊಂಡು ಬೆಳೆದಿದ್ದ ಒಡನಾಡಿಗಳು.

ಇವೆಲ್ಲವೂ ನಮ್ಮ ಗತದ ನೆನಪುಗಳು. ಇದೆಲ್ಲವನ್ನೂ ಮೀರಿ ನಮ್ಮ ಕೇರಿ ತನ್ನೊಳಗಿನ ಕಡುಬಡತನ, ಅಸೂಯೆ, ದ್ವೇಷ, ಮಿತಿಮೀರಿದ ಕುಡಿತದಿಂದ ನಡೆಯುತ್ತಿದ್ದ ಗಂಡಸರ ದಗಲ್ಬಾಜಿತನಗಳು, ಹೆಂಗಸರ ಮಾರಾಮಾರಿ ಬೀದಿ ಜಗಳಗಳು ಇವೆಲ್ಲವೂ ನಮ್ಮ ಕೇರಿಯ ದಿನನಿತ್ಯದ ಗೋಳುಗಳು. ಹಾಗೆ ನೋಡಿದರೆ, ನಮ್ಮ ಕೇರಿಯಲ್ಲಿ ಪರಸ್ಪರ ಜಗಳವಾಡದ ವ್ಯಕ್ತಿಗಳು, ಕುಟುಂಬಗಳೇ ಇರಲಿಲ್ಲ! ಇವುಗಳ ಬೆನ್ನಲ್ಲೇ ಹೊಂದಾಣಿಕೆ ಮತ್ತು ಜಾತ್ಯತೀತತೆಯ ಬದುಕನ್ನು ಮುಚ್ಚುಮರೆಯಿಲ್ಲದೆ ಪ್ರದರ್ಶಿಸುತ್ತಿದ್ದ ಕೇರಿಯು ನಮ್ಮನ್ನೆಲ್ಲಾ ಸಾಮರಸ್ಯ ಬದುಕಿನ ರಾಯಭಾರಿಗಳನ್ನಾಗಿ ಬೆಳೆಸಿತು. ಇಂತಹ ಹದವರಿತ ಕೇರಿಯಲ್ಲಿ ಈ ಎಲ್ಲ ಕಲೆಗಳೂ ಉತ್ಸವದಂತೆ ನಡೆಯುತ್ತಿದ್ದವು. ಇಂದಿಗೂ ಕೇರಿಯಲ್ಲಿ ಎರಡು ಹೆಜ್ಜೆ ನಡೆದರೆ ಸಾಕು, ಈ ಎಲ್ಲ ನೆನಪುಗಳ ಬೇರುಗಳು ಅದಕ್ಕಂಟಿರುವ ಮಣ್ಣಿನ ಸಮೇತ ಮೇಲೆದ್ದು ಬಂದು ನನ್ನೊಡನೆ ಮಾತನಾಡುತ್ತವೆ.

ಕಾಮನಹಬ್ಬಕ್ಕೆ ನಮ್ಮ ಕೇರಿಯಲ್ಲಿದ್ದ ಕೊಲ್ಲಾಪುರದಮ್ಮನ ದೇವಾಲಯದ ಅಂಗಳದಲ್ಲಿ ಒಂದು ಪುಟ್ಟ ಹಸುರು ಚಪ್ಪರದ ವೇದಿಕೆ ಹಾಕುತ್ತಿದ್ದರು. ವೇದಿಕೆಯಲ್ಲಿ ಎಂಟು ದಿನಗಳ ಕಾಲ ಪ್ರತಿನಿತ್ಯವೂ ಶಿವನ ಪವಾಡಕ್ಕೆ ಸಂಬಂಧಿಸಿದ ಗೊಂಬೆ ಪ್ರದರ್ಶನ ನಡೆಯುತ್ತಿತ್ತು. ಇದನ್ನು ನಮ್ಮ ಕೇರಿಯ ಹಿರಿಯರು ಅನೇಕ ವರುಷಗಳಿಂದ ಸಂಪ್ರದಾಯದಂತೆ ನಡೆಸಿಕೊಂಡು ಬರುತ್ತಿದ್ದರು. ಗೊಂಬೆಗಳನ್ನು ಪ್ರದರ್ಶನಕ್ಕೆ ಅಲಂಕರಿಸುತ್ತಿದ್ದವರು ಶಿವಾಚಾರದ ರುದ್ರಣ್ಣಯ್ಯ ಎನ್ನುವವರು. ಎಲ್ಲರೂ ಅವರನ್ನು ಗೊಂಬೆ ಅಣ್ಣಯ್ಯ ಎಂದೇ ಕರೆಯುತ್ತಿದ್ದರು. ಬಹುಪಾಲು ನಮಗೆ ಅಪರಿಚಿತರಾಗಿದ್ದ ಕಲಾವಿದರು ಅವರು. ನಾನು ನೋಡುವ ಹೊತ್ತಿಗಾಗಲೇ ಅವರು ೬೦ ವರ್ಷಗಳನ್ನು ದಾಟಿದ್ದರು. ಪ್ರದರ್ಶನದ ಗೊಂಬೆಗಳನ್ನು ಓಕ್ ಮರದಲ್ಲಿ ಮಾಡಿ ರಂಗೂನ್ ಬಣ್ಣದಿಂದ ಆಕರ್ಷಕವಾಗಿ ಅಲಂಕರಿಸಿದ್ದರು. ನಾಲ್ಕು ಅಥವಾ ಐದು ಅಡಿ ಉದ್ದದ ಗಂಡು–ಹೆಣ್ಣಿನ ಕಾಷ್ಠಶಿಲ್ಪಗಳು ಅವು. ಆ ಗೊಂಬೆಗಳ ಶಿರ, ಕೈ–ಕಾಲುಗಳು ಕೀಲಿನಿಂದ ನಿರ್ಮಿತವಾಗಿದ್ದವು. ಶಿವ ಕಥೆಗೆ ಅನುಗುಣವಾಗಿ ಅವುಗಳನ್ನು ವಿವಿಧ ಭಂಗಿಗಳಲ್ಲಿ ನವರಾತ್ರಿ ಗೊಂಬೆಗಳನ್ನು ಇಡುವಂತೆ ಸ್ಥಿರವಾಗಿ ಜೋಡಿಸುತ್ತಿದ್ದರು. ಅವುಗಳಿಗೆ

ಅಂದವಾದ ಉಡುಗೆ, ತೊಡುಗೆಗಳನ್ನು ತೊಡಿಸುತ್ತಿದ್ದರು. ಕತೆಗೆ ಪೂರಕವಾದ ದೃಶ್ಯ ಸಂಯೋಜನೆಯೂ ಕೂಡ ಅದ್ಭುತವಾಗಿರುತ್ತಿತ್ತು! ಹೀಗೆ ಏಳು ದಿನಗಳ ಗೊಂಬೆ ಪ್ರದರ್ಶನ ನಂತರ ಎಂಟನೆಯ ದಿನ ಕಾಮನ ಹಬ್ಬದಂದು 'ಕಾಮದಹನ'ದ ಕಥೆಯನ್ನು ಹೇಳುವ ಪ್ರದರ್ಶನದೊಂದಿಗೆ ಅದು ಮುಗಿಯುತ್ತಿತ್ತು.


ಚಿತ್ರ: ಗುಜ್ಜಾರ್

'ಗೊಂಬೆಗಳ ಪ್ರದರ್ಶನ' ಒಂದು ಜನಪದ ಕಲೆ. ಆದರೆ ಈ ಕಲೆ ವ್ಯಾಪಕವಾಗಿ ಕರ್ನಾಟಕದ ಎಲ್ಲ ಕಡೆಯೂ ಇರಲಿಲ್ಲ! ಆದರೆ ಕೆಲವು ಭಾಗಗಳಲ್ಲಿ ಮಾತ್ರ ಈ ಕಲೆ ಆಚರಣೆಯಲ್ಲಿತ್ತು ಎನ್ನುವುದನ್ನು ಕೆಲವರಿಂದ ಕೇಳಿ ತಿಳಿದಿದ್ದೇನೆ. ಹೀಗಾಗಿ ವಿದ್ವಾಂಸರ ಕಣ್ಣುಗಳಿಂದ ದೂರವಾಗಿದ್ದು, ನಮ್ಮ ಜಿಲ್ಲೆಯಲ್ಲಿ ಎಲ್ಲೋ ಕೆಲವು ಕುಟುಂಬಗಳು ಮಾತ್ರ ಪೋಷಿಸುತ್ತಿದ್ದ ಪ್ರಾಚೀನ ಕಲೆಯಿದು ಎನಿಸುತ್ತದೆ. ಆದರೆ ಈ ಕಲೆ ಸಮಾಜದ ಪೋಷಣೆಯಿಲ್ಲದೆ ಇಂದು ನಮ್ಮಿಂದ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಸುದೈವದಿಂದ ಇಂತಹ ಅಪರೂಪದ ಕಲೆಯನ್ನು ನಮ್ಮ ಕೇರಿ ಗುರುತಿಸಿ ಪೋಷಿಸುತ್ತಿತ್ತು.

ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ಪ್ರದರ್ಶನಕ್ಕೆ ಇಡುತ್ತಿದ್ದ ಗೊಂಬೆಗಳನ್ನು ಹಲವಾರು ಮರದ ಪೆಟ್ಟಿಗೆಗಳಲ್ಲಿ, ಹಳೆಯ ಶುಭ್ರವಾದ ಬಟ್ಟೆಗಳನ್ನು ಸುತ್ತಿ ಪ್ರಾಚೀನ ನಿಧಿಯನ್ನು ಕಾಪಾಡುವಂತೆ ಅವರು ಸಂರಕ್ಷಿಸುತ್ತಿದ್ದರು. ಅವು ಕೇವಲ ಪೆಟ್ಟಿಗೆಗಳಾಗಿರಲಿಲ್ಲ! ಒಂದು ಪರಂಪರೆಯನ್ನೇ ತಮ್ಮೊಳಗೆ ರಕ್ಷಿಸಿಕೊಂಡು ಬಂದ ಮಾಯಾ ಪೆಟ್ಟಿಗೆಗಳಂತಿದ್ದವು. ನನ್ನ ಎಳವೆಯ ದಿನಗಳಲ್ಲಿ ಈ ಪೆಟ್ಟಿಗೆಗಳನ್ನು ಅಲ್ಲಾವುದ್ದೀನನ ಅದ್ಭುತ ದೀಪದಂತೆ ನೋಡುತ್ತಿದ್ದೆವು. ಕೀಟಲೆ, ದೊಂಬಿ ಮಾಡುವಲ್ಲಿ ಎತ್ತಿದ ಕೈಯಾಗಿದ್ದ ನಮ್ಮಂತಹ ಕುತೂಹಲಿಗಳ ಬಗೆಗೆ ಆ ಹಿರಿಯ ಕಲಾವಿದರು ತೋರುತ್ತಿದ್ದ ಔದಾರ್ಯ, ಪ್ರೀತಿ, ಕ್ಷಮಾಗುಣವನ್ನು ನನ್ನ ಅಂತರಂಗ ಮರೆತಿಲ್ಲ. ಗೊಂಬೆಗಳನ್ನು ಕತೆಗೆ ಅನುಗುಣವಾಗಿ ಜೋಡಿಸುವುದರಲ್ಲಿ ಆ ಕಲಾವಿದನ ಕೈ ಬೆರಳುಗಳು ಅದ್ಭುತ ಯಶಸ್ಸನ್ನು ಪಡೆದಿದ್ದವು. ತಮ್ಮಲ್ಲಿದ್ದ ಅಸಾಧಾರಣ ಕಲೆಯ ಬಗ್ಗೆ ಅವರಿಗಿದ್ದ ತುಡಿತ, ಜ್ಞಾನ, ಅರ್ಪಣಾ ಮನೋಭಾವ ಅನುಕರಣೀಯವಾದದ್ದು ಎಂದು ಈಗ ನನಗನಿಸುತ್ತದೆ.

ಪೆಟ್ಟಿಗೆಯೊಳಗೆ ವಿರಮಿಸುತ್ತಿದ್ದ ಒಂದೊಂದು ಗೊಂಬೆಯೂ ಇನ್ನೊಂದು ಗೊಂಬೆಯ ಜೊತೆ ನಮಗೆ ತಿಳಿಯದ ಭಾಶೆಯಲ್ಲಿ ಮಾತನಾಡುತ್ತಿರುವ ಜೀವಂತ ಮನುಷ್ಯರಂತೆ ಕಾಣುತ್ತಿದ್ದವು. ಅಂತಹ ಸಂತಸದ ದಿನಗಳನ್ನು ನೆನೆದರೆ, ಇಂದಿನ ನೀರಸವಾದ ಉಪಭೋಗ ಸಂಸ್ಕೃತಿಯ ರಸಾನುಭೂತಿ ಇಲ್ಲದ ದಿನಗಳು ಬೇಸರ ತರಿಸುತ್ತವೆ.

ಈ ಗೊಂಬೆಗಳನ್ನು ಕತೆಗೆ ಅನುಸಾರವಾಗಿ ಅಲಂಕರಿಸಲು ಆ ಹಿರಿಯ ಕಲಾವಿದರಿಗೆ ೩ ರಿಂದ ೪ ಗಂಟೆಗಳ ಸಮಯವಾಗುತ್ತಿತ್ತು. ಹೀಗಾಗಿ ಅವರು ಮಧ್ಯಾಹ್ನದ ಹೊತ್ತನ್ನು ಕಳೆದುಕೊಂಡು ಗೊಂಬೆಗಳ ಅಲಂಕಾರವನ್ನು ಕೈಗೆತ್ತಿಕೊಳ್ಳುತ್ತಿದ್ದರು. ನಗುಮುಖದ ಚಿನ್ನದ ಜರತಾರಿ ಇರುವ ಕೆಂಪು, ಹಸುರು, ನೀಲಿ ಬಣ್ಣದ ಸೀರೆಗಳನ್ನು ಉಡಿಸಿರುತ್ತಿದ್ದ ಗೊಂಬೆಗಳು. ಅವುಗಳಿಗೆ ಗಿಲೀಟಿನ ಆಭರಣಗಳು, ಮೂಗಿನ ಎರಡೂ ಬದಿಗೆ ಹೊಳೆಯುವ ನತ್ತುಗಳು, ಕಿವಿಯಲ್ಲಿ ಮಿನುಗುವ ಓಲೆ, ಬೈತಲೆಗೊಂದು ಆಭರಣ, ತಲೆಯ ಮೇಲೆ ಹೊನ್ನ ಬಣ್ಣದ ಕಿರೀಟ, ಕಾಲಂದುಗೆ, ಸೊಂಟದಲ್ಲಿ ಎದ್ದುಕಾಣುವಂತಿದ್ದ ಡಾಬು, ಎರಡೂ ಕೈಗಳಿಗೆ ಕೆಂಪು ಮತ್ತು ಹಸುರಿನ ಬಳೆಗಳು, ಹೀಗೆ ಕಣ್ಸೆಳೆಯುವಂತಿದ್ದ ಆ ಗೊಂಬೆಗಳು ಅರಮನೆಯಲ್ಲಿರುವ ಮಹಾರಾಣಿಯರಂತೆ ಕಾಣಿಸುತ್ತಿದ್ದವು. ಪುರುಷ ಪಾತ್ರಗಳೂ ಹೀಗೆಯೇ ಸಿನಿಮಾದಲ್ಲಿ ಕಾಣುವಂತೆ ಅಲಂಕಾರಗೊಂಡಿರುತ್ತಿದ್ದವು.

ಗೊಂಬೆಗಳ ಅಲಂಕಾರ ಮುಗಿದು, ಕತ್ತಲಾದ ಮೇಲೆ ಗೊಂಬೆಗಳಿಗೆ ಪೂಜೆ ಮುಗಿದ ಬಳಿಕ ಅವರು ಅಡ್ಡವಾಗಿದ್ದ ತೆರೆ ಸರಿಸುತ್ತಿದ್ದರು. ವಿದ್ಯುತ್ ದೀಪಗಳ ಪ್ರಕಾಶದಲ್ಲಿ ಅಲ್ಲೊಂದು ಮೈಮರೆಸುವ ಪೌರಾಣಿಕ ಕಥನ ಲೋಕವೇ ಅನಾವರಣಗೊಳ್ಳುತ್ತಿತ್ತು. ಆ ಉಜ್ವಲ ಬೆಳಕಿನ ಪ್ರವಾಹದಲ್ಲಿ ಮೀಯುತ್ತಿದ್ದ ಗೊಂಬೆಗಳು ಮನುಷ್ಯ ಜೀವಿಗಳ ನಡುವೆ ಇರುವ ಸಂಬಂಧಗಳನ್ನು ಪುನರಭಿನಯಿಸುವಂತೆ ತೋರುತ್ತಿದ್ದವು. ನೋವು ಮತ್ತು ವಿಷಾದದ ಸುಳಿವಿಲ್ಲದ, ಮಾನವೀಯತೆಯ ಮುಗುಳ್ನಗುವನ್ನು ಹೊತ್ತ ಈ ಗೊಂಬೆಗಳು ಹೊಳೆಯುತ್ತಿದ್ದವು. ಯಾರನ್ನಾದರೂ ಸುಲಭವಾಗಿ ಪ್ರಭಾವಿಸಬಲ್ಲ ಬಹು ಸೊಗಸಿನ ಲೋಕ ಇದು! ಇಂತಹ ಸುಗಂಧ ಬೀರುವ ಗೊಂಬೆಗಳ ಪ್ರದರ್ಶನವನ್ನು ನೋಡುತ್ತಾ ನನ್ನ ಬಾಲ್ಯದ ಅನೇಕ ವರುಷಗಳನ್ನು ಕಳೆದಿದ್ದೇನೆ.

ನಾಗರಿಕತೆಗೆ ಸವಾಲೆಸೆಯುವಂತಿದ್ದ ಈ ಗೊಂಬೆಗಳ ಪ್ರದರ್ಶನವು ಜನಪದ ಕಲೆಗಳನ್ನು ಹಾಗೂ ಕಾಮನ ಹಬ್ಬದಲ್ಲಿ ಸಮಷ್ಟಿಯ ಪಾಲ್ಗೊಳ್ಳುವಿಕೆಯನ್ನು ಆಹ್ವಾನಿಸುತ್ತಿತ್ತು. ಹೀಗೆ ಏಳು ದಿನಗಳ ಪ್ರದರ್ಶನದ ನಂತರ ಎಂಟನೆಯ ದಿನ ಕಾಮದಹನದ ಕತೆಯೊಂದಿಗೆ ಮುಕ್ತಾಯಗೊಳ್ಳುತ್ತಿತ್ತು. ಅಂತಿಮ ಪೂಜೆಯ ನಂತರ ವೇದಿಕೆಯ ಮುಂಭಾಗದಲ್ಲಿ ನಾವೆಲ್ಲಾ ಏಳು ದಿನಗಳ ಕಾಲ ಅವರಿವರ ಮನೆಯಲ್ಲಿ ಬಯ್ಗುಳ ತಿಂದು, ಕದ್ದು ಸಂಗ್ರಹಿಸಿದ್ದ ಸೌದೆ, ತೆಂಗಿನ ಸೋಗೆ, ಬೆರಣಿ, ಬಿದಿರಿನ ತೊಟ್ಟಿಲು, ಮರದ ಕೊರಡು ಮುಂತಾದವನ್ನು ರಾಶಿ ಹಾಕಿ ಬೆಂಕಿ ಹಚ್ಚುತ್ತಿದ್ದೆವು. ಕಾಮದಹನದ ವೇಳೆಗೆ ವೇದಿಕೆಯಲ್ಲಿ ಅಲಂಕರಿಸಿದ್ದ ರತಿ-ಮನ್ಮಥರ ಮುಂದೆ ತೆರೆಬಿಡುತ್ತಿದ್ದರು. ಆನಂತರ ಹುಲಿವೇಷ, ಪಾಳೇಗಾರನ ವೇಷ, ಡಿಗಂಬರಿ ವೇಷಗಳು ನಮ್ಮ ಕೇರಿಯ ಬೀದಿಗಳ ಮೇಲೆ ಅಬ್ಬರಿಸುತ್ತಾ ಕಿನ್ನರ ಲೋಕವನ್ನೇ ಸೃಷ್ಟಿಸುತ್ತಿದ್ದವು.

ಆದರೆ ಇದ್ದಕ್ಕಿದ್ದ ಹಾಗೆ ಕಾಲವೇ ತುಂಡಾದಂತೆ ಈ ಎಲ್ಲ ಕಲೆಗಳೂ ಒಮ್ಮಿಂದೊಮ್ಮೆಲೇ ವಿಸ್ಮೃತಿಯ ಧೂಳಿನಲ್ಲಿ ಮರೆಯಾದವು! ಗೊಂಬೆ ಪ್ರದರ್ಶನ ಮಾಡುತ್ತಿದ್ದ ರುದ್ರಣ್ಣಯ್ಯ ಅವರು ಕಾಲವಾದ ನಂತರ, ಆ ಕಲೆಯು ಅವರ ಬೆನ್ನಹಿಂದೆಯೇ ಕಣ್ಮರೆಯಾಯಿತು. ಅವರ ಕುಟುಂಬದವರು ಗೊಂಬೆಗಳನ್ನೆಲ್ಲಾ ಸಂಸ್ಥೆಯೊಂದಕ್ಕೆ ದಾನಮಾಡಿದರು. ಈಗ ಆ ಕುಟುಂಬದವರು ಜೀವನಕ್ಕಾಗಿ ಬೇರೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಹುಲಿವೇಷ, ಪಾಳೇಗಾರನ ವೇಷ, ಡಿಗಂಬರಿ ಪಾತ್ರಗಳೆಲ್ಲಾ ತೆರೆಯ ಹಿಂದಕ್ಕೆ ಸರಿದವು. ಆದರೆ ಅವರು ಉಳಿಸಿಹೋದ ಯಕ್ಷಲೋಕದ ರಂಗಭೂಮಿ ಇಂದು ಖಾಲಿಯಾಗಿಯೇ ಉಳಿದಿದೆ. ಆ ಅಭಿಜಾತ ಕಲಾವಿದರು ಇಂತಹ ಮಾಸಲಾರದ ನೂರಾರು ನೆನಪುಗಳನ್ನು ನಮ್ಮೊಳಗೆ ಉಳಿಸಿಹೋಗಿದ್ದಾರೆ.



ನಮ್ಮ ಪ್ರಾಚೀನ ಜನಪದ ಕಲೆಗಳು ಸಮಾಜವನ್ನು, ಮನುಷ್ಯರನ್ನೂ ಬೆಸೆಯುತ್ತವೆ ಎನ್ನುವ ತತ್ತ್ವಕ್ಕೆ ಕಾಮನಹಬ್ಬವು ಮಾನ್ಯತೆ ಕೊಡುತ್ತದೆ. ಜನಪದ ಕಲಾವಿದರು ತಮ್ಮ ಬದುಕಿನಲ್ಲಿ ವಿಕೃತವಾದ ಏನನ್ನೂ ಸೃಷ್ಟಿಸಲಾರರು ಎನ್ನುವುದಕ್ಕೆ ಇಂತಹ ಕಲೆಗಳೇ ಉದಾಹರಣೆ.

**(ಲೇಖಕರು ನಿವೃತ್ತ ಕನ್ನಡ ಅಧ್ಯಾಪರು, ಪ್ರಬಂಧಕಾರರು ಮತ್ತು ಕಥೆಗಾರರು)**

---

**೧೧ನೇ ಪುಟದಿಂದ)**

ಸುಲಭದ ಮಾದರಿಗಳನ್ನು ಕಂಡುಕೊಳ್ಳುವುದೇ ಆವಿಷ್ಕಾರ ಅಂತ ಆಗಿರುವ ಈ ಕಾಲದಲ್ಲಿ ರಾಜಕೀಯದಲ್ಲೊಬ್ಬ ಆವಿಷ್ಕಾರಿ ವಿಜ್ಞಾನಿಯಂತೆ ಕಂಡುಬಂದಿದ್ದ ಆ ಗಾಂಧೀಜಿ ಈ ಕಾಲಕ್ಕೂ ಬೇಕೇ ಬೇಕಲ್ಲವೇ?

ಯಾರೋ ಆ ಗಾಂಧೀಜಿಯನ್ನು ರಾಜಕಾರಣದ ಸಂತ ಅಂತ ಕರೆದಿದ್ದರಂತೆ. ರಾಜಕಾರಣದ ಅದೇ ಆ ಸಂತ ಇಂದಿನ ಸಂದರ್ಭದಲ್ಲಿ ಬೇಕಾಗಿದ್ದಾರೆ. ಯಾಕೆಂದರೆ ಇಂದಿನ ರಾಜಕಾರಣಕ್ಕೆ ಸಂತತ್ವದ ಸಿಂಚನ ಆಗುವ ಅಗತ್ಯವಿದೆ. ಅದು ಇನ್ನೊಬ್ಬನ ನೋವನ್ನು ತನ್ನ ನೋವೆಂದು ಅನುಭವಿಸಿ ಮಾಡುವ ರಾಜಕಾರಣ. ಹೊಸ ಹೊಸ ನೋವುಗಳನ್ನು ಸೃಷ್ಟಿಸಿ ಅವುಗಳನ್ನೇ ಬಳಸಿ ಅಧಿಕಾರದ ಬೇಟೆಗೆ ಹೊರಟಿರುವ ನಾಯಕತ್ವ ದೇಶದಲ್ಲೆಲ್ಲಾ ತುಂಬಿರುವಾಗ ನಮಗೀಗ ಬೇಕಾಗಿರುವುದು ರಾಜಕಾರಣ ಮಾಡುತ್ತಲೇ ಸಂತನಂತೆ ಕಂಡ ಆ ಲೌಕಿಕ ಫಕೀರ ಗಾಂಧೀಜಿಯೇ ಅಲ್ಲವೇ?



**–ನಾರಾಯಣ ಎ.** ಅರ್ಥಶಾಸ್ತ್ರ ಪ್ರಾಧ್ಯಾಪಕರು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು

### ಏನು ಬರೆದರೂ ಉಪದೇಶವೇ ಅನಿಸುತ್ತದೆ....

ಗಾಂಧಿ ತತ್ವಗಳನ್ನು ನಮ್ಮ ಇಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಯೋಚಿಸುವುದು ಕಷ್ಟವೆನಿಸುತ್ತಿದೆ.

ಏನು ಬರೆಯಬೇಕೆಂದರೂ ನನ್ನಿಂದಾಗದ್ದನ್ನು ಬರೆಯುವುದು ಹೇಗೆ ಎಂಬ ಪಾಪಪ್ರಜ್ಞೆಯೇ ಮುಂದೆ ಬಂದು ನಿಲ್ಲುತ್ತದೆ.

ಸರಳ ಮತ್ತು ಕನಿಷ್ಠ ಬಟ್ಟೆ ಧರಿಸಿ ತೋರಿಸಿದವನನ್ನು ಅತ್ಯಂತ ಗೌರವದಿಂದ ಕಾಣುವ ಪ್ರಾಮಾಣಿಕ ಭಾವ ನನ್ನದಾದರೂ ಆಚರಣೆಯ ವಿಷಯದಲ್ಲಿ ನನಗೆ ಅದು ಸಾಧ್ಯವೇ ಅನಿಸುತ್ತಿಲ್ಲ. ಸೈಕಲ್ ಮತ್ತು ಗುಡಿಸಲು ಕೂಡ ಹೊಂದಿರದ ಜನರ ನಡುವೆ ನಾವು ಸ್ವಲ್ಪ ಹೆಚ್ಚೇ ಆರಾಮಾಗಿದ್ದೇವೆ ಅಂತ ಅನಿಸುತ್ತದೆ. ಅಷ್ಟಾಗಿಯೂ ನಾವು ಹಾಗೇ ಇದ್ದೇವೆ...

ಸುಳ್ಳು ಹೇಳುವುದಿಲ್ಲ, ಮೋಸ ಮಾಡುವುದಿಲ್ಲ, ಅಸ್ಪೃಶ್ಯತೆ ಆಚರಿಸುವುದು ಕೂಡ ಮೊದಲಿಗಿಂತ ಕಡಿಮೆ ಅಂತೆಲ್ಲ ಹೇಳಬಹುದಾದರೂ ಅವೆಲ್ಲ ಸಹಜವಾಗಿ ಇರಬೇಕಾದವುಗಳೇ ಅಲ್ಲವೇ?

ಹೀಗಿರುವಾಗ ಏನು ಬರೆದರೂ ಉಪದೇಶವೇ ಅನಿಸುತ್ತದೆ. ಗಾಂಧಿಯವರಿಂದ ತುಂಬಾ ದೂರ ಸಾಗಿಬಿಟ್ಟಿದ್ದೇವೆ ಎಂಬ ಅನಿಸಿಕೆಯೇ ಬಲವತ್ತರವಾಗುತ್ತಿದೆ....



ಆದರೆ ಈ ವಿಷಯವಾಗಿ ತಮ್ಮ ಅಕ್ಟೋಬರ್ ಸಂಚಿಕೆಯಲ್ಲಿ ಬರಲಿರುವ ಲೇಖನಗಳ ಬಗ್ಗೆ ತೀವ್ರ ಕುತೂಹಲ ಹೊಂದಿದ್ದೇನೆ...

**–ವಿಜಯೇಂದ್ರ ಪಾಟೀಲ,**
ನಿವೃತ್ತ ಬ್ಯಾಂಕ್ ಮ್ಯಾನೇಜರ್, ಲೇಖಕರು, ಗೋಕಾಕ

# ನವಿಲುಗರಿ

## ಸಬ್ ಕೋ ಸನ್ಮತಿ



ಇದು ಪವಿತ್ರ ದಿನ ನಮಗೆ
ಗೋರಿಯೊಳಗಿನ ಹಿರಿಯರನ್ನು
ದೇವಲೋಕದೊಳಗಿನ ದೇವರನ್ನು
ಪೂಜಿಸುತ್ತೇವಲ್ಲ, ಹಾಗೆ ಈ ದಿನ

ನಿಜ, ನಾವೆ ಗುಂಡಿಕ್ಕಿದೆವು, ರಕ್ತ
ಹರಿಯದ ಹಾಗೆ ಆತುಕೊಂಡೆವು
ಅವನಿಗೆ, ಎದ್ದು ನಿಂತು ಭಕ್ತಿಯಲಿ
ಹಾಡಿದೆವು ರಘುಪತಿ ರಾಘವ..

ಹಾಗೆಯೇ ಬಿಡಬಹುದಿತ್ತು ಅವನ
ನಮ್ಮವನ, ಹಾಡುತ್ತಿದ್ದ ಅದೇ ಹಾಡು
ಅದೇ ರಾಗ ಎಷ್ಟೊಂದು ಕೇಳುವುದು?

ನಮಗೂ ಇದ್ದವಲ್ಲ ನೂರು ತಾಪತ್ರಯ
ದೇಶ ಕಟ್ಟುವುದೆಂದರೆ ಸಾಮಾನ್ಯವೇ
ಒಡೆದು, ಬಡಿದು, ಬಗ್ಗಿಸಿ, ನಮ್ಮೆದೆಗಳ
ಹಿಗ್ಗಿಸಿ ಅದೆಷ್ಟೋ ಇಂಚುಗಳಿಗೆ, ತೋಳ-
ಬಲ ತೋರಿಸಬೇಕಲ್ಲ ಇಡೀ ಜಗತ್ತಿಗೆ

ಮುದುಕ, ಉಪವಾಸದಲ್ಲೇ ಇದ್ದು
ಸೊರಗಿದವನು, ಇಷ್ಟಿಷ್ಟೇ ಕರಗಿದವನು
ಇನ್ನೆಷ್ಟು ದಿನ ಇದ್ದಾನು ಅವನು ತನಗಾಗಿ
ದೇಶಕ್ಕಾಗಿ ಪ್ರಾಣಕೊಡಲು ಸಿದ್ಧನಿದ್ದನಲ್ಲ

ಈಗ ನೆಮ್ಮದಿ, ಶಾಂತಿ
ಲೋಕಕ್ಕೆ
ಮತ್ತೆ ಸಬ್ಕೋ ಸನ್ಮತಿ

–ಜಿ.ಪಿ.ಬಸವರಾಜು

## ವ್ಯರ್ಥ ಪ್ರಯತ್ನ

ತುಂಬಲು ಯತ್ನಿಸುತ್ತೇನೆ ಮನವನ್ನು
ಒಣ ಮಾತುಗಳಿಂದ
ಒದ್ದೆ ನಿರೀಕ್ಷೆಗಳಿಂದ
ಹರಕು ಆಸೆಗಳಿಂದ
ಬರಡು ಭಾಷ್ಯಗಳಿಂದ

ಅವರಿವರ ಭರವಸೆಯಿಂದ
ಎರವಲಿನ ಸಾಲುಗಳಿಂದ
ಕತ್ತಲಿಂದ ಬೆಳಕಿಂದ
ಬಣ್ಣ ಭಿತ್ತಿ ಬೆಡಗಿಂದ

ನೋವಾದರೆ ನೋವು
ಅದಾದರೂ ಇರಲೆಂದು
ನಗುವಾದರೆ ನಗು
ಹೇಗಾದರೂ ಬರಲೆಂದು

ಗೊತ್ತಿದ್ದರೂ ಚೆನ್ನಾಗಿ
ಒಡಕು ಮಡಕೆಯೊಳಗೇನು ತುಂಬಿದರೂ
ಉಳಿಯುವುದು ಬರಿ ಬಿರುಕೊಂದೇ ಎಂದು



–ಸ್ವಯಂಪ್ರಭಾ





ಚಿತ್ರಗಳು: ವಿಜಯಶ್ರೀ ಹಾಲಾಡಿ



## ನೀರ ನುಡಿ



ಹೊಳೆಗುಂಟ
ಹೊಳೆಯಾಗಿ ನಲಿಯುವುದು
ಲೀಲಾಜಾಲ
ತೇಲುವುದು ಈಜುವುದು
ಹರಿಯುವುದು ಇಷ್ಟ ನನಗೆ.
ಎದುರು ಸೆಳವಿನ ಜೊತೆಗೆ
ಹೋರುವುದು ಸೆಣಸುವುದು
ಕಷ್ಟ ನನಗೆ.
ಆಂಥವರ ಕಂಡಾಗ
ಉಕ್ಕುವುದು ಗೌರವವು
ಮೆಚ್ಚು ನುಡಿಯುವುದು
ಅಭಿಮಾನ ನನಗೆ.

ಬಾಲ್ಯದಿಂದಲೂ
ನೀರ ನುಡಿ ನೀರೆ ನಡೆ
ನೀಲ ಗಗನಾಂಗಣದಿ
ಲೀನ ಮೇಘಗಳಂತೆ
ಮೆಲುವಾಗಿ ಚಲಿಸಿದೆ.
ಅವ್ವ, ನಿನಗಿದೇ ಇಷ್ಟ
ಹಾಗೆ ರೂಪಿಸಿದಿ ನನ್ನನ್ನು.
ಬೇಸರ ಇಲ್ಲ ಆಕ್ಷೇಪ
ವಾಸ್ತವದ ಸ್ವೀಕೃತಿ ಅಷ್ಟೆ.

–ಸಿದ್ಧಲಿಂಗ ಪಟ್ಟಣಶೆಟ್ಟಿ

(ಇದೇ ಕವಿಯ ಇತ್ತೀಚಿನ 'ಜೀವ ಕಾನನದಲ್ಲಿ' ಕವನ ಸಂಕಲನದಿಂದ ಆಯ್ದ ಪದ್ಯ)

## ಮುಟ್ಟದವರು

ಉಣ್ಣುವ ಅನ್ನವನೇ
ಎತ್ತಿ ಹಾಕುವರು
ಭೂಮಿ ನೀಡುವ ಧಾನ್ಯವ
ಮುಟ್ಟಗೊಡರು.

ಕುಡಿವ ನೀರು
ನಮ್ಮದೆನ್ನುವರು
ದಾಹಕ್ಕೆ ಚಂಬಿಂದ
ಸುರಿವರು.



ನೆಲ ಅವರದಂತೆ
ದೇವರು ಅವರವಂತೆ
ಸತ್ತ ದನಗಳು ಮಾತ್ರ
ನಮ್ಮವಂತೆ.

ಊರ ಜಾತ್ರೆ ಸಹ
ಸ್ವಂತವಂತೆ
ಅ ಜಾಗವ ತುಳಿಯಬಾರದಂತೆ
ನಾವು ಪ್ರೇತಗಳಂತೆ.

ಅಪ್ಪ ಶಿವಪ್ಪ
ಎ ಷ್ಟು ದಿನ ಈ ಅಂತೆ-ಕಂತೆ
ಇದೆಲ್ಲಾ ಯಾಕಂತೆ?

–ಅಕ್ಬರ್ ಸಿ. ಕಾಲಿಮಿರ್ಚಿ

(ಇದೇ ಕವಿಯ ಇತ್ತೀಚಿನ 'ಹಸಿವು ಮತ್ತು ತಲ್ಲಣಗಳ ನದಿ' ಕವನ ಸಂಕಲನದಿಂದ ಆಯ್ದ ಕವನ)

# ಕನ್ನಡಕ್ಕೆ ಇಲ್ಲದ ಕಿಕ್ಕೂ, ಹಿಂದುತ್ವವೂ, ಸಂಸ್ಕೃತೀಕರಣವೂ... : ಒಂದು ಟಿಪ್ಪಣಿ




**ಮ**ಹಾತ್ಮ ಗಾಂಧಿ ರಸ್ತೆ ಎಂ.ಜಿ. ರೋಡ್ ಆದದದ್ದನ್ನು ನೋಡಿಯಾಯಿತು, ರವಿಂದ್ರ ನಾಥ ಟ್ಯಾಗೋರ್ ನಗರ ಆರ್. ಟಿ. ನಗರವಾದದ್ದನ್ನು ಸಹಿಸಿಯಾಯಿತು. ಇದಕ್ಕೆ ಜನರ ಬಾಯಲ್ಲಿ ಉದ್ದನೆ ಹೆಸರು ಮೊಟಕುಗೊಳ್ಳುವುದು ಸಹಜ ಎಂದು ಸಮಾಧಾನಪಟ್ಟುಕೊಂಡದ್ದೂ ಆಯಿತು. ಆದರೆ ಬಸವನಗುಡಿ ಎಂಬ ಕನ್ನಡದ ಮುದ್ದಾದ ಹೆಸರು ಬುಲ್ ಟೆಂಪಲ್ ಎಂದಾದಾಗ, ಕೋತಿ ಬಂಡೆ ಎಂಬ ಜನ ಕೊಟ್ಟ ಅಚ್ಚ ಕನ್ನಡದ ಹೆಸರು ಮಂಕಿ ರಾಕ್ ಆದಾಗ; ಬೇವಿನಮರದ ರಸ್ತೆ ಎಂಬ ಹತ್ತಾರು ವರ್ಷಗಳ ಜನ ಬಳಕೆಯ ಹೆಸರು ಮಾರ್ಗೋಸಾ ರೋಡ್ ಆದಾಗ, ರಾಗಿ ಗುಡ್ಡದ ರಸ್ತೆ ಮೌಂಟನ್ ರೋಡ್ ಆದಾ ನಮಗೆ ಏನೂ ಅನ್ನಿಸುವುದಿಲ್ಲ ಏಕೆ? ಏಕೆಂದರೆ ಇದನ್ನು ನಾವೇ, ನಮ್ಮ ವಸಾಹತೀಕೃತ ಮನಸ್ಸೇ ಮಾಡಿರುವುದು. ವಸಾಹತೀಕೃತ ಮನಸ್ಸು ಅಂದರೆ ನಮ್ಮ ಬಗ್ಗೆ, ನಾವಿರುವ ಆವರಣದ ಬಗ್ಗೆ ನಮಗೇ ತಿರಸ್ಕಾರ, ಜುಗುಪ್ಸೆ ಇರುವ ಸ್ಥಿತಿ. ಈ ಬಗ್ಗೆ ನಮಗೆ ನಾಚಿಕೆಯೇ ಇಲ್ಲ!

ಈಗ ನಮ್ಮ ಪತ್ರಿಕೆಯ ನಗರಗಳ, ವಿಶೇಷವಾಗಿ ಬೆಂಗಳೂರಿನ ಹಲವು ಚಂದಾದಾರರ ವಿಳಾಸಗಳನ್ನು ಕನ್ನಡದಲ್ಲಿ ಬರೆಯಲು ಕಸರತ್ತು ಮಾಡಬೇಕಾಗಿಬಂದಿರುವ ಪರಿಸ್ಥಿತಿಯನ್ನು ಕಂಡಾಗ ನಮ್ಮ ಜನಕ್ಕೆ ಏನಾಗಿದೆ ಎಂದು ಆಶ್ಚರ್ಯವಾಗುತ್ತದೆ. ಅವರ ಮನೆಗಳ. ಆಪಾರ್ಟ್‌ಮೆಂಟ್‌ಗಳ ಹೆಸರುಗಳು ಇಂಗ್ಲಿಷ್ ಭಾಷೆಯನ್ನೂ ದಾಟಿ ಫ್ರೆಂಚ್, ಇಟಾಲಿಯನ್, ಸ್ವಿಸ್ ಭಾಷೆಗಳ ಎಲ್ಲೆಗಳನ್ನು ಮುಟ್ಟಿವೆ. ವೆನ್‌ಝ್ಲಾ, ಸ್ಲ್ಯೂಸ್ಜಿ, ಝೇವ್ಲಾ ಇತ್ಯಾದಿ ನಾಮಾಮೃತಗಳ ವಸತಿಕೂಟಗಳು ಬೆಂಗಳೂರಿನಲ್ಲಿ ತಲೆ ಎತ್ತಿವೆ. ಅವು ಹಾಳಾಗಿ ಹೋಗಲಿ, ಇವನ್ನು ನೋಡಿ: ಬ್ರಿಗೇಡ್ ಯುಟೋಪಿಯಾ, ಸನ್‌ಡ್ಯೂ ಟವರ್ಸ್, ಸನ್‌ರೈಸ್ ಪಾರ್ಕ್, ವಿಷುಯಲ್ ಪ್ಯಾರಡೈಸ್, ಸಿಲ್ವರ್ ನೆಸ್ಟ್, ಬ್ಲೂಂಫೀಲ್ಡ್ ಗಾರ್ಡನ್, ಫೀನಿಕ್ಸ್ ಕೆಸಕು, ಏಟ್ರಿಯಾ ವಿಲ್ಲ ಪ್ಯಾಲೇಸ್... ತಮ್ಮ ವಸತಿಕೂಟಗಳಿಗೆ ಈ ಹೆಸರಿಟ್ಟವರು ಇನ್ನೂ ವಾಹುತೀಕೃತ ಮನಃಸ್ಥಿತಿಯಲ್ಲೇ ಬಂಧಿಸಲ್ಪಟ್ಟಿರುವವರು ಎಂದೇ ಹೇಳಬೇಕು.! ಏಕೆ ಕನ್ನಡದ, ಬೇಡ ಭಾರತೀಯ ಭಾಷೆಗಳಲ್ಲಿ ಸುಂದರ ಹೆಸರುಗಳಿಗೆ ಅಭಾವವೆ? ಸೂರ್ಯಕಿರಣ, ಮಂಜಿನ ಹನಿ, ವನದರ್ಶನ, ಅರುಣೋದಯ, ಹೂಬುಟ್ಟಿ, ಆಕಾಶ ಮಲ್ಲಿಗೆ, ಚಂದ್ರದರ್ಶನಿ, ಬನಸಿರಿ, ಹಸಿರು ಗೂಡು ಹೀಗೆ ಸಾಲು ಸಾಲು ಹೆಸರುಗಳನ್ನೇ ಹೇಳಬಹುದು.

## ಕನ್ನಡದಲ್ಲಿ ಕಿಕ್ಕೇ ಇಲ್ಲವಲ್ಲ ಸಾರ್!

ಇದನ್ನು ನನ್ನೊಬ್ಬ ಗೆಳೆಯರಿಗೆ ಹೇಳಿದಾಗ ಆತ ಇವುಗಳಲ್ಲಿ ಇಂದು ಜನರಿಗೆ ಬೇಕಾದ 'ಕಿಕ್' ಇಲ್ಲವಲ್ಲ ಸಾರ್! ಎಂದ. ಹೌದು ಇದು 'ಕಿಕ್'ಗಳ ಕಾಲ. ಹಿಂದುತ್ವದ, ಸಂಸ್ಕೃತೀಕರಣದ ಭರಾಟೆ ಹೆಚ್ಚಿದಷ್ಟೂ ನಮ್ಮ ಜನರಿಗೆ ಇಲ್ಲಿಂದ ಪಾರಾಗಿ 'ಅನ್ಯ'ರಾಗಿ ಪಡೆಯುವ 'ಕಿಕ್'ನದ್ದೇ ಆಕರ್ಷಣೆಯಾಗಿರುವುದು ಒಂದು ವಿಪರ್ಯಾಸ! ಅಥವಾ ಇದು ಹಿಂದುತ್ವ ಮತ್ತು ಸಂಸ್ಕೃತೀಕರಣಗಳ ವಿಪರ್ಯಾಸವೇ ಇರಬಹುದು! ಏಕೆಂದರೆ ಇವುಗಳ ಜೊತೆಗೆ ಡಿಜಿಟಲೀಕರಣವನ್ನು ಒತ್ತಾಯಿಸುವ ಅರ್ಥಿಕ ನೀತಿಗಳ ಮೂಲಕ ನಮ್ಮನ್ನೆಲ್ಲ ಜಾಗತೀಕರಣಕ್ಕೊಳಗಾದ ಹೆಮ್ಮೆಯ ಪ್ರಜೆಗಳನ್ನಾಗಿ ಮಾಡುವ ಕಲ್ಯಾಣ ಯೋಜನೆ ನಡೆದಿದೆಯಲ್ಲ! ನಮ್ಮ ಚಂದಾರರೊಬ್ಬರು ತಮ್ಮ ೨ ಅಂಚೆಯಣ್ಣನಿಗೆ ನಾವು ಪತ್ರಿಕೆಯ ಮೇಲೆ ಕನ್ನಡದಲ್ಲಿ ಅಚ್ಚೊತ್ತಿದ ವಿಳಾಸ ಓದಲು ಕಷ್ಟವಾಗುತ್ತಿದೆ, ದಯವಿಟ್ಟು ವಿಳಾಸಗಳನ್ನು ಇಂಗ್ಲಿಷ್‌ನಲ್ಲಿ ಬರೆಯಿರಿ ಎಂದು ಕೋರಿದಾಗ ನಾನು ಬಿಲ್‌ಕುಲ್ ಆಗದು ಎಂದೆ. ಜೊತೆಗೆ ನಮಗೆ ಕನ್ನಡದಲ್ಲೇ ಕಿಕ್ ಸಾಕಷ್ಟು ಸಿಗುತ್ತಿದೆ ಎಂದೂ ಸೇರಿಸಿದೆ! ಒಂದು ಕ್ಷಣ ಅರ್ಥವಾಗದೆ ಅವರು ಮೌನವಾಗಿ, ನಂತರ ಅರ್ಥವಾದಂತೆ ಜೋರಾಗಿ ನಕ್ಕು ನಮ್ಮ, ಕನ್ನಡಾಭಿಮಾನಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ ನಾನು ಅವರನ್ನು ತಿದ್ದಿದೆ: ಇದು ಅಭಿಮಾನವಲ್ಲ; ನಾವು ನಾವಾಗಿ ಉಳಿಯುವ ಸ್ವಾಸ್ಥ್ಯದ, ಮರ್ಯಾದೆಯ ವಿಷಯ ಎಂದೆ. ಮುಟ್ಟಿ ನೋಡಿಕೊಂಡವರಂತೆ ತೆಪ್ಪಗಾದರು!

ಅದೇನೇ ಇರಲಿ, ಈ ಹಿಂದುತ್ವ ಮತ್ತು ಸಂಸ್ಕೃತೀಕರಣಗಳ ಜೋಡಿ ಪರಿಣಾಮ ಸಂಸ್ಕೃತವಾದೀಕರಣವಾಗಿ ನಮ್ಮ ಜನ ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ಹೆಸರಿಡುವ' ವಿಷಯದಲ್ಲಿ ಬಹು ಯಶಸ್ವಿಯಾಗಿರುವಂತಿದೆ. ಈ ಹೆಸರುಗಳನ್ನು ನೋಡಿ: ವಿವಾ, ವಿಹಾ, ವಿಹಾನ್, ಇಹಾ, ಆರುಷ್, ಸಾನ್ವಿ, ನೀಹಾ, ಸುಯಾಂಶ್ ಇತ್ಯಾದಿ. ವಿವರಿಸಿ ಹೇಳದಿದ್ದರೆ ಅರ್ಥವಾಗದ (ಅರ್ಥವಿದ್ದ ಪಕ್ಷದಲ್ಲಿ!) ಹೆಸರುಗಳನ್ನು ಇಟ್ಟು ಇವರೆಲ್ಲ ಕೇಳಿದವರಿಗೆ ಹೆಮ್ಮೆಯಿಂದ ಅರ್ಥ ಹೇಳುತ್ತಾ ಸಂಸ್ಕೃತೀಕರಣದ ಕಿಕ್ ಪಡೆಯುತ್ತಿದ್ದಾರೆ! ನನ್ನ ಮೊಮ್ಮಗನ ಹೆಸರು ಆರುಷ್ ತೇಜಸ್ವಿ. ನಾನು ಅವನನ್ನು ಆರುಷ್ ಎಂದರೂ ಬೆಳಕು, ತೇಜಸ್ ಎಂದರೂ ಬೆಳಕು. ಎರಡು ಬೆಳಕು ಯಾರಿಗೋ? ಎಂದು ತಮಾಷೆ ಮಾಡಿದರೆ ಆ ಪುಟ್ಟನಿಂದ' ಥಟ್ಟೆಂದು ಬಂದ ಉತ್ತರ: ಒಂದು ಬೆಳಕು ಆಫ್ ಆದರೆ ಬ್ಯಾಕ್ ಅಪ್ ಇರಲಿ ಅಂತ ಇರಬೇಕು! ಈಗಿನ ಮಕ್ಕಳಿಗೂ ಏನು ಕಿಕ್ ಹೊಡೆದಿದೆ, ಏನು ಕಥೆ!

## ನೀನು ಎಲ್ಲಿಗೂ ಸೇರದೆ ರಾಷ್ಟ್ರೀಯನಾಗಬಹುದು!

ಒಂದು ಕಾಲದಲ್ಲಿ ದೇಸಿ ಹೆಸರುಗಳನ್ನು ಹುಡುಕಿ ತಮ್ಮ ಮಕ್ಕಳಿಗೆ ಹೆಸರಿಟ್ಟು ಸಂತೋಷಪಡೆಯುವ ಒಂದು ತಲೆಮಾರೇ ಇತ್ತು. ಚುಕ್ಕಿ, ಪಚ್ಚೆ, ತೆನೆ (ಈ ಮೂರು ಎಂಡಿಎನ್ ಅವರ ಮಕ್ಕಳು–ಮೊಮ್ಮಕ್ಕಳ ಹೆಸರುಗಳು) ನೇಸರ, ಬೆಳ್ಳಿ, ಸಿರಿ, ನನ್ನಿ ಭೂಮಿ, ಇಳಾ ಇತ್ಯಾದಿ. ಆದರೆ ಈಗ ಎಲ್ಲ ತಲೆಕೆಳಕಾಗಿದೆ. ಜನ ಕೂಡ ತಲೆಕೆಳಗಾಗಿಯೇ ಓಡಾಡಬಯಸಿದ್ದರಿಂದ ಇದು ಹೀಗಾಗಿದೆ! ಹಾಗಾಗಿಯೇ ಇಂದು ಬೆಂಗಳೂರಿನ ನಾಲ್ಕನೆಯ ತರಗತಿಯ ಒಬ್ಬ ಬಾಲಕ ತನ್ನ ಶಿಕ್ಷಣ ಕ್ರಮದಲ್ಲಿ ಕನ್ನಡವನ್ನು ಕಡ್ಡಾಯ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದಾನೆ! ಇಲ್ಲಿ ಬಾಲಕ ನೆಪ ಅಷ್ಟೆ. ಆವನ ಹಿಂದೆ ಒಂದು ಹಿತಾಸಕ್ತ ಗುಂಪೇ ಇರುತ್ತದೆ. ಇವರಿಗೆ ತಾವು ಬದುಕುತ್ತಿರುವ ಪರಿಸರದ ಭಾಷೆಯನ್ನು ಕಲಿಯುವುದು ಒಂದು ಹೆಮ್ಮೆ ಅನ್ನಿಸುವುದರಲಿ, ಒಂದು ಅಗತ್ಯ, ಒಂದು ಕರ್ತವ್ಯ ಎಂದು ಅನ್ನಿಸದಂತಹ ಲೋಕವನ್ನು ನಾವಿಂದು ನಿರ್ಮಾಣ ಮಾಡಿದ್ದೇವೆ. ಈ ಹುಡುಗ ತನ್ನ ಅರ್ಜಿಗೆ ಕೊಟ್ಟಿರುವ ಕಾರಣ ತನ್ನದು ಕೇಂದ್ರ ಶಿಕ್ಷಣ ಮಂಡಳಿಯ ಪಠ್ಯಕ್ರಮ ಎಂದು. ಅಂದರೆ ತಾನು ಭಾರತೀಯನೇ ಹೊರತು ಸ್ಥಳೀಯನಲ್ಲ ಎಂದು ಈತ ಹೇಳುತ್ತಿದ್ದಾನೆ! ನಾವು ಬೆಳೆಸಿರುವ, ಬಹುಶಃ (ಕನ್ನಡ ಮಾಧ್ಯಮದ ಪ್ರಶ್ನೆಯನ್ನು ನಮ್ಮ ಸರ್ವೋಚ್ಚ ನ್ಯಾಯಾಲಯ ತೀರ್ಮಾನಿಸಿದ ರೀತಿಯಲ್ಲಿ ಕಾಣುವಂತೆ) ನಮ್ಮ ಸಂವಿಧಾನವೂ ಎತ್ತಿ ಹಿಡಿಯುವ ರಾಷ್ಟ್ರೀಯತೆಯ ಪರಿ ಇದು. ನೀನು ಎಲ್ಲಿಗೂ ಸೇರದೆ ರಾಷ್ಟ್ರೀಯನಾಗಬಹುದು! ಇಲ್ಲಿ 'ಸೇರದೆ' ಎಂಬ ಶಬ್ದ ಮುಖ್ಯ ಅದು ಯಾವೆಲ್ಲ ಅರ್ಥಗಳನ್ನು ಒಳಗೊಂಡಿದೆ ಎಂಬುದನ್ನು ಯೋಚಿಸಬೇಕು. ನಮ್ಮ ಉಚ್ಚ ನ್ಯಾಯಾಲಯ ಇದನ್ನೆಲ್ಲ ಯೋಚಿಸುವುದೋ ಅಥವಾ ಸಂವಿಧಾನವನ್ನು ಅಕ್ಷರಶಃ ವ್ಯಾಖ್ಯಾನಿಸಿ ಕೃತಾರ್ಥವಾಗುವುದೋ ಕಾದು ನೋಡಬೇಕು.

## ಸ್ಥಳೀಯ ಭಾಷೆಯನ್ನು ಉಸಿರಾಟದ ಭಾಷೆಯನ್ನಾಗಿ ಮಾಡಬೇಕು

ಪಾಕಿಸ್ತಾನವೂ ಸೇರಿದಂತೆ ಜಗತ್ತಿನ ಯಾವ ದೇಶದಲ್ಲೂ ಕಾಣದಂತಹ ವಿದ್ಯಮಾನವಿದು. ನೀವು ಅನ್ನ ತಿನ್ನುತ್ತಿರುವ, ಗಾಳಿ ಸೇವಿಸುತ್ತಿರುವ ಪರಿಸರದ ಭಾಷೆಯನ್ನು ಶಿಕ್ಷಣದ ಭಾಗವಾಗಿ ಕಲಿಯಲು ನಿರಾಕರಿಸುವ ಮತ್ತು ಆ ಹಕ್ಕನ್ನು ಚಲಾಯಿಸುವ ವಿದ್ಯಮಾನ! ಇದಕ್ಕೆ ಮೊದಲೇ ಹೇಳಿದಂತೆ ಉನ್ನತಿ ಎಂದರೆ 'ಅನ್ಯ'ರಾಗುವುದೇ ಆಗಿದೆ ಎಂಬ ನಂಬಿಕೆಯ ವಾತಾವರಣ ನಿರ್ಮಾಣವಾಗಿರುವುದು. ಈ ನಂಬಿಕೆಯನ್ನು ಸಡಿಲಿಸುವ ಕೆಲಸ ನಮ್ಮಲ್ಲಿ ಕನ್ನಡದ ಹೆಸರಲ್ಲಿ ಉಸಿರಾಡುತ್ತಿರುವ ಸಂಘ ಸಂಸ್ಥೆಗಳು ಮಾಡಬೇಕು. ಅದು ಕನ್ನಡ ಸಾಹಿತ್ಯ ಪರಿಷತ್ತು ಆಗಿರಬಹುದು, ಸ್ಥಳೀಯ ಕನ್ನಡ ಸಂಘ ಅಥವಾ ಕನ್ನಡ ರಕ್ಷಣೆಯ ಹೆಸರಿನ ಸಮಿತಿಗಳು ಅಥವಾ ಸೇನೆಗಳೇ ಆಗಿರಬಹುದು. ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೂಡ ಈ ಕೆಲಸ ಮಾಡಬಹುದು. ಬೃಹತ್ ಅಥವಾ ದೊಡ್ಡ ಗಂಟಲಿನ ಕೂಗಾಟಗಳ ಕಾರ್ಯಕ್ರಮಗಳಿಗೆ ಬದಲಾಗಿ ಸಮುದಾಯದ ಮಟ್ಟದಲ್ಲಿ ಕನ್ನಡದ ವಾತಾವರಣವನ್ನು ಉಂಟು ಮಾಡುವುದು, ವಸತಿ ಕೂಟಗಳಿಗೆ ಸ್ಥಳೀಯ ಹೆಸರುಗಳನ್ನು ಇಡುವಂತೆ ಮಾಡುವುದರಿಂದ ಆರಂಭಿಸಿದಂತೆ. ವಾತಾವರಣದಲ್ಲಿ ಕನ್ನಡವನ್ನು(ಅಂದರೆ ಸ್ಥಳೀಯ ಭಾಷೆಯನ್ನು) ಉಸಿರಾಟದ ಭಾಷೆಯನ್ನಾಗಿ ಪ್ರತಿಷ್ಠಾಪಿಸಿದರೆ ಸ್ಥಳೀಯ ಭಾಷೆ–ಸಂಸ್ಕೃತಿಗಳನ್ನು ಕಾಪಾಡಲು ಕಾನೂನುಗಳ ಬಲ ಬೇಕಾಗದು. ನ್ಯಾಯಾಲಯಗಳ ಮಧ್ಯ ಪ್ರವೇಶದ ಅಗತ್ಯವೂ ಬೀಳದು. ಅಗತ್ಯ ಬಿದ್ದರೂ ನ್ಯಾಯಾಲಯ ಕೂಡ ವಾತಾವರಣದ ಗುಣಕ್ಕನುಗುಣವಾಗಿ ಕಾನೂನನ್ನು ವ್ಯಾಖ್ಯಾನಿಸುವ ಸಾಧ್ಯತೆಯೂ ಉಂಟಾಗಬಹುದು.

**ಕೊನೆಯಲ್ಲಿ ಹೇಳಲೇಬೇಕಾದ ಒಂದು ಮಾತು:** ನಮ್ಮ ಸಂವಿಧಾನವು ಒಕ್ಕೂಟ ತತ್ವಕ್ಕಿಂತ ಮೂಲ ಸತ್ವದಲ್ಲಿ ಏಕಾತ್ಮಕ ರಾಷ್ಟವನ್ನು ನಿರೂಪಿಸುವಂತಿದ್ದು ಇದರಲ್ಲಿ ರಾಜ್ಯಗಳ ಅಧಿಕಾರಗಳಿಗೆ ಪ್ರಾಥಮಿಕ ಪ್ರಾಶಸ್ತ್ಯವಿದ್ದಂತೆ ತೋರುವುದಿಲ್ಲ. ಕೇಂದ್ರದಲ್ಲಿ ಯಾವುದೇ ಸರ್ಕಾರವಿರಲಿ.ರಾಜ್ಯ ಸರ್ಕಾರಗಳ ಅಧಿಕಾರಗಳು ನಿರಂತರ ಒತ್ತುವರಿಯಾಗುತ್ತಿರುವುದನ್ನೂ, ಅದನ್ನು ರಾಜ್ಯ ಸರ್ಕಾರಗಳು ರಾಷ್ಟ್ರೀಯತೆಯ ಹೆಸರಿನಲ್ಲಿ ಪ್ರಶ್ನೆ ಮಾಡದೇ ಒಪ್ಪಿಕೊಳ್ಳುತ್ತಿರುವುದನ್ನೂ ಕಾಣುತ್ತಿದ್ದೇವೆ. ಇದಕ್ಕಿರುವ ಏಕೈಕ ಪರಿಹಾರವೆಂದರೆ ನಮ್ಮ ರಾಷ್ಟ್ರೀಯತೆಯ ಅಸ್ತಿತ್ವದ ಬೇರುಗಳು ಕಾನಾನೂನಾತ್ಮಕವಾಗಿ ಕೂಡ ರಾಜ್ಯಗಳ ಅಸ್ತಿತ್ವದಲ್ಲಿ ಬೇರೂರಿರುವಂತೆ ನಮ್ಮ ಸಂವಿಧಾನವನ್ನು ತಿದ್ದುಪಡಿ ಮಾಡುವುದು. ಇದು ಜಾಗತೀಕರಣದ ಒಳ ಹೊಡೆತಗಳ ಮಧ್ಯೆ ಭಾರತ ಭಾರತವಾಗಿ ಉಳಿಯಲು ಅಗತ್ಯವಾದ ತಿದ್ದುಪಡಿಯಾಗಿರುತ್ತದೆ. ಏಕೆಂದರೆ ಕರ್ನಾಟಕ ಕರ್ನಾಟಕವಾಗಿ ಉಳಿಯದೆ ಭಾರತ ಭಾರತವಾಗಿ ಉಳಿಯಲಾರದು. ಇದನ್ನು ಅರಿಯುವ, ಅಗತ್ಯ ತುರ್ತು ಕ್ರಮ ಕೈಗೊಳ್ಳುವ ಮಹಾ ವಿವೇಕ ಯಾರಿಗಿದೆ? ನಮ್ಮ ಸ್ವಾತಂತ್ರ್ಯದ ಅಮೃತಮಹೋತ್ಸವ ಇದಕ್ಕೆ ಶುಭ ಸಂದರ್ಭ.

೭

–ಡಿಎಸ್ಸೆನ್

## ಪುಸ್ತಕಾವಲೋಕನ

ಪು: **ಅನಾರ್ಕಲಿಯ ಸೇಫ್ಟಿ ಪಿನ್** (ಕಥೆಗಳು) ಲೇ: **ಜಯಂತ ಕಾಯ್ಕಿಣಿ** ಪ್ರ: **ಅಂಕಿತ ಪುಸ್ತಕ**, ಬೆಂಗಳೂರು (೦೮೦–೨೬೬೧೭೧೦೦) ಪು: **೧೭೬** ಬೆ: **ರೂ.೧೭೫/-**

### ಕನ್ನಡ ಕಥೆಗಾರಿಕೆಯ ಹೊಸ ಎತ್ತರಗಳು




ಇದು ನಮ್ಮ ಹಿರಿಯ ಕಥೆಗಾರ ಜಯಂತ ಕಾಯ್ಕಿಣಿ ಕಳೆದ ಎಂಟು ವರ್ಷಗಳಲ್ಲಿ ಬರೆದ ಒಂಬತ್ತು ಕಥೆಗಳಿರುವ ಅವರ ಏಳನೇ ಕಥಾ ಸಂಕಲನ.. ಇವನ್ನು ಕಥೆಗಳೆಂದು ಕರೆಯುವುದು ಎಷ್ಟು ಸರಿ ಎಂಬ ಅನುಮಾನ ಆತಂಕವಾಗಿ ಕಾಡುವಷ್ಟು ಇವು ನಮ್ಮ ಸಾಂಪ್ರದಾಯಿಕ ಕಥಗಾರಿಕೆಯ ಎಲ್ಲೆಗಳನ್ನೆಲ್ಲ ಮೀರಿ ಬೆಳೆದು ಓದುವವರ ಮನಸ್ಸುಗಳನ್ನೂ ಮಿಕ್ಕಿ ಮೀರಿದ ಎಲ್ಲೆಗಳಿಗೆ ಕರೆದೊಯ್ದು ಅವರನ್ನು ಬೆರಗಿನ ಅಂಚಿನಲ್ಲಿ ನಿಲ್ಲಿಸುವಂತಿವೆ. ಈ ಕಥೆಗಳ ಅವಲೋಕನವೇ ಇವುಗಳಿಗೆ ಮಾಡುವ ಅಪಚಾರವಾದೀತೇನೋ ಎನ್ನಿಸುವಷ್ಟು ಅವು ಒಂದು ಸೂಕ್ಷ್ಮ ಸಮತೋಲನದಲ್ಲಿವೆ.

ನಾನು ಅವರ ಇತ್ತೀಚಿನ ಕಥೆಗಳಲ್ಲಿ ಗಮನಿಸಿದಂತೆ ಜಯಂತ್ ಮುಖ್ಯವಾಗಿ ಜಾಗತೀಕರಣದ ಪರಿಣಾಮಗಳನ್ನು ನಗರ ಜೀವನದ ಹುಚ್ಚು ವೇಗ ಅದರ ಲಯವನ್ನು ಕೆಡಿಸಿ ಉಂಟು ಮಾಡುತ್ತಿರುವ ಮಾನವ ದುರಂತಗಳನ್ನೂ, ಮಾನವ ಅಂತಃಕರಣವನ್ನು ಘಾತಗೊಳಿಸುತ್ತಿರುವ ಪರಿಗಳನ್ನೂ ಸಣ್ಣ ಸಣ್ಣ ವಿವರಗಳಲ್ಲಿ ಕಟ್ಟಿಕೊಡುವರು. ಆದರೆ ಅದೇ ವೇಳೆಯಲ್ಲೇ ಆ ದುರಂತಗಳ ಪಾಳುಗಳ ನಡುವಿನಿಂದಲೇ ಮನುಷ್ಯ ಚೈತನ್ಯ ತನ್ನ ಅಂತಃಕರಣದ ಪಸೆಯನ್ನು ಉಳಿಸಿಕೊಂಡು ಮೇಲೇಳುವ ಚಿತ್ರಗಳನ್ನು ಕಟ್ಟಿಕೊಡುವ ಮೂಲಕ ಆ ಕಥೆಗಳಿಗೆ ಒಂದು ಹೊಸ ಅಸ್ತಿತ್ವವನ್ನೇ ನೀಡಿದವರು, ಪ್ರಸ್ತುತ ಸಂಕಲನದ ಒಂಬತ್ತು ಕಥೆಗಳಲ್ಲಿ ನಾವು ಇದನ್ನೇ ಕಾಣುತ್ತೇವಾದರೂ ಕಥೆ ಹೇಳುವ ಪರಿ ಈ ಎಲ್ಲ ಕಥೆಗಳ ಅಂತರಾಳಗಳಲ್ಲೂ ಕಂಡು ಕಾಣದಂತೆ ಹರಿವ ವಿಷಾದ ಎಂದು ಕರೆಯಬಹುದಾದ ಆವಿ ರೂಪದಲ್ಲಿ ಮಾತ್ರ ನಮ್ಮನ್ನು ತಾಕುವ ದುಃಖವು ಒಂದು ಅನುಭಾವಿ ಆಯಾಮವನ್ನು ಈ ಕಥೆಗಳಿಗೆ ಸೃಷ್ಟಿಸಿಕೊಟ್ಟಿದೆ. ಅದು ಅವನ್ನು ಕಥೆಯ ಹಂತದಿಂದ ಒಂದು ಹಂತ ಮೇಲೇರಿಸಿ ನಮ್ಮ ಒಳ ಹೊರಗನ್ನೆಲ್ಲ ತಾಕಿ ನಮ್ಮನ್ನು ಅಲ್ಲಾಡಿಸಿಬಿಡುವ ಒಂದು ಅಮಾಯಕ ಪ್ರತಿಪ್ರಪಂಚವನ್ನು ನಿರ್ಮಾಣ ಮಾಡುತ್ತದೆ.

ಈ ಸಂಕಲನದ ಪ್ರತಿ ಕಥೆಯೂ ದಿನವಹಿಯಾಗಿ ನಮ್ಮ ಅರಿವಿನ ಅಳವಿಗೆ ಸಿಗದಷ್ಟು ವೇಗದಲ್ಲಿ ಆಧುನಿಕವಾಗುತ್ತಿರುವ ಜಗತ್ತಿನಲ್ಲಿನ ಬದುಕುವ ಹೋರಾಟದಲ್ಲಿ ಎಲ್ಲೋ ತಮಗೆ ಗೊತ್ತಿಲ್ಲದಂತೆಯೇ ತಮ್ಮ ಆತ್ಮವನ್ನೇ ಕಳೆದುಕೊಳ್ಳುತ್ತಿರುವ ತಳಮಳದಿಂದ ಕಂಪಿಸುತ್ತದೆ. ಅದು 'ಕುತನಿ ಕುಲಾವಿ' ಕಥೆಯಲ್ಲಿ ಅವ್ವನ ಬದುಕು ನಿರ್ಮಮವಾಗುತ್ತಿರುವ ಗತಿ ಕೊನೆಗೆ ಬೇಂದ್ರೆ ಅಜ್ಜನ ಮನೆಯ ಹಿಂದಿನ ತುಳಸೀಕಟ್ಟೆಯನ್ನರಸಿ ಹೋಗುವಲ್ಲಿನ ನಿರ್ಭಾವುಕತೆ, 'ಭಾಮೆ ಕೇಳೊಂದು ದಿನ' ಕಥೆಯಲ್ಲಿ ಬದಲಾದ ತನ್ನೂರ ಆವರಣ ನೋಡುತ್ತಾ ವಿಷಾದದೊಡನೆ ಬೆಂಗಳೂರಿನಲ್ಲಿನ ತನ್ನ ಮಗನ ಗೆಳೆಯನ ಗೃಹಪ್ರವೇಶದ ಸಂದರ್ಭದಲ್ಲಿ 'ತಾಳಮದ್ದಳೆ'ಯ ಪ್ರಧಾನ ಅರ್ಥಧಾರಿಯಾಗಿ ಮಗನ ಮನೆಗೆ ಬರುವ ತಾಳಮದ್ದಲೆ ಮಾಸ್ತರ ಪದ್ಮಾಕರರು ಆ ಮನೆಯಲ್ಲಿ ಮತ್ತು ನಂತರ ನಡೆಸುವ ತಾಳಮದ್ದಲೆಯಲ್ಲಿ ಅನುಭವಿಸುವ ತಬ್ಬಲಿತನ, 'ಬೆಳಕಿನ ಬಿಡಾರ'ದ ಮುನ್ನಾ ಮುಂಬೈನ ಸಿನಿಮಾ ಸೆಟ್ಟುಗಳ ಮಧ್ಯದ ಬದುಕಿನಿಂದೆದ್ದು ತನ್ನ ಬಾಲ್ಯವನ್ನರಸುತ್ತಾ ತದಡಿಗೆ ಬರುವುದು, 'ವಾಯಾ ಚಿನ್ನದ ಕೇರಿ'ಯ ಪೇಪರ್ ಹಾಕುವ ಬಡ ಹುಡುಗ ಯಾರೋ ಪ್ರೀತಿಯಿಂದ ಕೊಟ್ಟ ಇಂಪೋರ್ಟೆಡ್ ಬೂಟುಗಳನ್ನು ಹಾಕಿಕೊಂಡ ಹುರುಪಿನಲ್ಲಿ ಕಾಣುವ ತನ್ನೂರಿನ ಚಿನ್ನದ ಕೇರಿಯ ಹುಡುಗಿಯ ಕನಸು ಕಾಣುವ ಹಿಂದಿನ ಅವನ ಬದುಕಿನ ಆರ್ತತೆಗಳು, 'ಎವರ್ ಗ್ರೀನ್'ನ ಸಿನಿಮಾ ನಟನ ಯೌವ್ವನ ಕಾಯ್ದುಕೊಳ್ಳುವ ಒಳಗಿನ ಹೋರಾಟದಲ್ಲಿ ಅವನ ಮಗ ತಬ್ಬಲಿತನವನ್ನು ಕಾಣುವಲ್ಲಿನ ದಟ್ಟ ವಿಷಾದ, 'ಕಾಗದದ ಚೂರುಗಳು'ಲ್ಲಿನ ಸಿನಿಮಾ–ಧಾರಾವಾಹಿ ಲೋಕದ ವಾಹನ ಚಾಲಕನಿಂದ ಹಿಡಿದು ನಟಿ, ವಸ್ತ್ರ ವಿನ್ಯಾಸಕಿಯವರೆಗಿನ ಬದುಕುಗಳಲ್ಲಿನ ನೋವು ತುಂಬಿದ ಬಿರುಕುಗಳ ಸೂಕ್ಷ್ಮ ದರ್ಶನ, 'ಹಲೋ ಮೈಕ್ ಟೆಸ್ಟಿಂಗ್'ದಲ್ಲಿ ಮುಂಬೈನ ಭೌಗೋಳಿಕ ವೈವಿಧ್ಯ–ವಿಸ್ತಾರ–ಬದುಕುಗಳೊಂದಿಗೆ ಬಿಚ್ಚಿಕೊಳ್ಳುವ ಗೀತ–ಸಂಗೀತಗಳ ಒಂದು ಅದ್ಭುತಲೋಕ ತಾರಕಕ್ಕೇರಿ ಕಥೆಯನ್ನು ಒಂದು ಅನನ್ಯ ಅನುಭವವನ್ನಾಗಿಸುವ ಬೆರಗಿನ ಮುಕ್ತಾಯ, 'ಅನಾರ್ಕಲಿ ಸೇಫ್ಟಿ ಪಿನ್'ನ ಇಬ್ಬರು ಎಳೆಯ ಹುಡುಗಿಯರ ಒಡಲಲ್ಲಿನ ಅವ್ಯಕ್ತ ಸಂವೇದನೆಗಳ ಅಲೆಯುಬ್ಬರಗಳ ಸೂಕ್ಷ್ಮ ಸದ್ದುಗಳನ್ನು ನಮಗೆ ಕೇಳಿಸುವ ಕಲೆಗಾರಿಕೆಯ ಕೌಶಲ, ಕೊನೆಯದಾಗಿ 'ಮೃಗನಯನಾ' ಮುಂಬೈನ ಪೃಥ್ವಿ ಥಿಯೇಟರ್‌ನ ನಾಟಕಗಳ ಸುತ್ತಲ ಕಥೆಯನ್ನು ಈ ಕಥೆಗೆ ನಿಮಿತ್ತವಾದ ಕಲಾ ಮೀಮಾಂಸಕ ಹಸ್ತಾಕ್ಷರನ ಊರಾದ ಗಾಣಗಾಪುರದ ಆತನ ತಂದೆ– ತಾಯಿಯರ ಸುತ್ತಲಿನ ಕಥೆಯೊಂದಿಗೆ ಜೋಡಿಸಿ (ಅಲ್ಲೆ 'ಹಸ್ತಾಕ್ಷರ' ಎಂಬ ಶಬ್ದದ ದಿವ್ಯತೆ ಪರಿಚಯವಾಗುವುದು) ಮತ್ತೆ ಅದನ್ನು ಭೌತಿಕವಾಗಿ ಮುಂಬೈ ಕಥೆಯನ್ನಾಗಿ ಮಾಡಿಯೂ ಹಸ್ತಾಕ್ಷರನ ತಂದೆ ಮುಂಬೈಗೆ ಭೇಟಿ ನೀಡಿ ತನ್ನ ಕುಲವೃತ್ತಿಯ ಗೌರವಾರ್ಥ ಆ ಮಹಾನಗರದಲ್ಲಿ ದೋಬಿಘಾಟನ್ನು ನೋಡಬಯಸುವ ಹಂಬಲದಲ್ಲಿ ಮತ್ತು ಅದರ ಈಡೇರಿಕೆಯಲ್ಲಿ ಕಥೆಯನ್ನು ಅನುಭಾವಿಕ ಎತ್ತರಕ್ಕೆ ಮುಟ್ಟಿಸುವ ಇಲ್ಲಿನ ಕಥಾ ಕೌಶಲ ಅಸಾಮಾನ್ಯವಾದದ್ದು.

ಹೀಗೆ ನಾನು ಇಲ್ಲಿನ ಕಥೆಗಳ 'ಮಹಿಮೆ'ಗಳನ್ನು ಹೇಳುವ ಅವಸರದಲ್ಲಿ ಅವುಗಳನ್ನು ಸಂಕ್ಷೇಪಿಸಿ ಹೇಳುವ ಮೂಲಕ ಅವುಗಳ ಹಲವು ಆಯಾಮಗಳನ್ನು ಕತ್ತರಿಸಿರುವ ಮತ್ತು ಹಲವು ಸಣ್ಣವಾದರೂ ಕಥೆಗಳನ್ನು ಮೃದುವಾಗಿ ಮೇಲೆತ್ತುವ 'ಕುತನಿ ಕುಲಾವಿ'ಯ ಬಾಬಾ, 'ಭಾಮೆ ಕೇಳೊಂದು ದಿನ'ದ ಬಾಯಕ್ಕ, 'ಬೆಳಕಿನ ದಾರಿ'ಯ ಬಬನ್ 'ಅನಾರ್ಕಲಿಯ ಸೆಫ್ಟಿ ಪಿನ್'ನ ಚಮೇಲಿಯ ಅಮ್ಮ, ಕನಕಾಂಬರ ಹೂವಿನ ಬಣ್ಣದ ಹೆಡ್ ಬ್ಯಾಂಡಿನ ಹುಡುಗ ಮತ್ತು 'ಮೃಗನಯನಾ'ದ ಚಂದಾರಂತಹ ಕಥೆಯ ಶೃತಿ ಮೂಲಾಧಾರ ಪಾತ್ರಗಳ ಉಲ್ಲೇಖ ಕೂಡ ಮಾಡದೆ ಗೈದಿರುವ ವಿಮರ್ಶಾ ಕರ್ಮದ ಪಾಪದ ಅರಿವೂ ನನಗಿದೆ. ಹಾಗೇ ಜಯಂತ್ ಕಥೆಯ ಪಾತ್ರಗಳು ಬರೀ ಪಾತ್ರಗಳಾಗಿರದೆ ಕಥೆಗಾರಿಕೆಯ ಸಾವಯವ ಭಾಗವಾಗುವಂತೆ ಅವುಗಳ ಸಣ್ಣ ಚಲನೆಗಳನ್ನೂ ಕಥೆ ಕಟ್ಟುವ ವಿವರಗಳಾಗಿ ಬಳಸುವ ಸೂಕ್ಷ್ಮ ಕುಸುರಿ ಕಲೆಗಾರಿಕೆಯನ್ನೂ ಇಲ್ಲಿ ಉಲ್ಲೇಖಿಸದೇ ಹೋದರೆ ಅದೂ ಒಂದು ಲೋಪವಾದೀತು! ಆದರೆ ಕೆಲವೆಡೆ ಈ ಕುಸರಿ ಅತಿರೇಕಕ್ಕೆ ಹೋಗಿ ಓದನ್ನು ಸುಸ್ತು ಮಾಡುವುದೂ ಉಂಟು. ಉದಾ: 'ಸಾಮಾನು ಸರಂಜಾಮುಗಳು ಖಾಲಿಯಾದ ಮನೆ ಪರೀಕ್ಷೆಯಲ್ಲಿ ನೀಡುವ ಉತ್ತರ ಪತ್ರಿಕೆಯ ಖಾಲಿ ಕೋರಾತನವನ್ನು ನೆನಪಿಸುವಂತಿತ್ತು' ಎಂಬಂತಹ ಓದಿನ ಸುಗಮತೆಗೆ ಅಡ್ಡಿಯಾಗುವ ಹಲವು ಅತಿ ವರ್ಣನೆಗಳು.

**–ಡಿ.ಎಸ್. ನಾಗಭೂಷಣ**

ಪು: **ಗುಂಡಿಗೆಯ ಬಿಸಿರಕ್ತ**(ಆಫ್ರಿಕನ್ ಸಂಕಥನ) ಕನ್ನಡ ರೂಪ: **ಕೇಶವ ಮಳಗಿ** ಪ್ರ: **ದೀಪಂಕರ ಪುಸ್ತಕ**, ನಾಗಲಮಡಿಕೆ(೯೮೮೬೨೭೯೪೪೧) ಪು:\೨೮೦ ಬೆ:ರೂ.೨೮೦/-

### ಪರ್ಯಾಯ ಚಿಂತನೆಗಳ ಬೃಹತ್ ಸಂಕಲನ




**ಶ**ತಮಾನಗಳ ಕಾಲ ವಸಾಹತುಶಾಹಿ ಆಡಳಿತದ ಯಜಮಾನ್ಯ, ನಿಯಂತ್ರಣ ಮತ್ತು ಅದರ ಅಗಾಧ ಹಿಂಸೆಯನ್ನು ಅನುಭವಿಸಿದ ಆಫ್ರಿಕಾ ಖಂಡವು ಕಳೆದ ಒಂದು ಶತಮಾನದಿಂದ ಯುರೋಪ್ ಕೇಂದ್ರಿತ ಚಿಂತನೆಗಳಿಂದ ತಪ್ಪಿಸಿಕೊಳ್ಳುವ ಬಗೆಗಳನ್ನು ಹುಡುಕುತ್ತಿದೆ. ಬಿಗಿಮುಷ್ಟಿಯ ಯಜಮಾನ್ಯದಿಂದ ತಪ್ಪಿಸಿಕೊಳ್ಳುವುದು ಎಂದರೆ ಅದಕ್ಕೆ ಪರ್ಯಾಯವಾಗಿ ತನ್ನ ದೇಸಿ ಚಿಂತನೆಗಳ ಬೇರುಗಳನ್ನು ಅನಾವರಣ ಮಾಡುವುದು ಮತ್ತು ಅದನ್ನು ಸಶಕ್ತಗೊಳಿಸುವುದು. ವಸಾಹತುಶಾಹಿ ಚಿಂತನೆಯು ಸೃಷ್ಟಿಸಿದ ಏಕಮುಖಿ ದೃಷ್ಟಿಕೋನವನ್ನು ಪಲ್ಲಟಗೊಳಿಸಿ ಬಹುವೈವಿಧ್ಯತೆಯ ಸಾಂಸ್ಕೃತಿಕ ಬೇರನ್ನು ಬಲಗೊಳಿಸಿ ಬಿಡುಗಡೆಯ ಪರ್ಯಾಯ ನೋಟಕ್ರಮಗಳನ್ನು ಅರಸುವುದು ಆಫ್ರಿಕಾದ ವಸಾಹತೋತ್ತರ ಚಿಂತನೆಗಳ ಬಹುಮುಖ್ಯ ನೆಲೆಯಾಗಿದೆ. ಇಂತಹ ಪರ್ಯಾಯ ಚಿಂತನೆಗಳ ಈ ಒಂದು ಬೃಹತ್ ಸಂಕಲನವನ್ನು ಕೇಶವ ಮಳಗಿಯವರು ಬಹಳ ಪರಿಣಾಮಕಾರಿಯಾಗಿ ಕನ್ನಡಕ್ಕೆ ತಂದಿದ್ದಾರೆ.

ಭಾರತದಂತೆಯೇ ವಸಾಹತುಶಾಹಿಗೆ ತುತ್ತಾದ ಆಫ್ರಿಕಾದ ಅನುಭವ ಪ್ರಪಂಚವು ಕನ್ನಡಕ್ಕೆ ಈಗಾಗಲೇ ಅನುವಾದಗಳ ಮೂಲಕ ಪ್ರವೇಶಿಕೆ ಪಡೆದಿದೆ. ಆಫ್ರಿಕಾ ಮತ್ತು ಕನ್ನಡ ಕಾದಂಬರಿಗಳ ಸ್ವರೂಪವನ್ನು ಕುರಿತು ಪ್ರೌಢ ಅಧ್ಯಯನಗಳು ಸಹ ನಡೆದಿವೆ. ಎನ್‌ಗೂಗಿ ಥಿಯಾಂಗೋ, ಚಿನುವ ಅಚಿಬೆ, ವೋಲೆ ಶೋಯಿಂಕಾ ಅವರ ಕಾದಂಬರಿ ನಾಟಕ, ಚಿಂತನಗಳು ಸಹ ಕನ್ನಡಕ್ಕೆ ಬಂದಿವೆ. ಆದರೆ ಇಡೀ ಖಂಡದ ವಸಾಹತೋತ್ತರ ಚಿಂತನೆಗಳ ಪರ್ಯಾಯ ನೋಟಕ್ರಮವು ಒಂದು ಬೃಹತ್ ಮೀಮಾಂಸೆಯ ರೀತಿಯಲ್ಲಿ ಒಂದೇ ಕೃತಿಯಲ್ಲಿ ದಾಖಲಾಗಿರುವುದು ತೀರಾ ವಿರಳ. ಪ್ರಸ್ತುತ ಕೃತಿಯು ಆಫ್ರಿಕಾದ ಭಾಷೆ, ಸಾಹಿತ್ಯ, ಧರ್ಮ, ರಾಜಕಾರಣ, ಜ್ಞಾನದ ವಿಭಿನ್ನ ಮಾದರಿಗಳನ್ನು ಒಟ್ಟೊಟ್ಟಿಗೆ ನಮ್ಮೆದುರಿಗಿರಿಸಿ ಆ ಖಂಡದ ಬಿಡುಗಡೆಯ ದಾರಿಗಳನ್ನು ಅನಾವರಣ ಮಾಡಿದೆ. ಹಾಗಾಗಿ ಇದಕ್ಕೆ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಆಯಾಮವೂ ದಕ್ಕಿದೆ.

'ನಮ್ಮ ದನಿಯನ್ನು ಹತ್ತಿಕ್ಕಲಾಗುವುದಿಲ್ಲ' ಎಂದು ದಾಖಲಿಸುವ ಆಲ್ಜಿರಿಯಾದ ಪತ್ರಕರ್ತ ತಹರ್ ಜುಮಾದ್‌ನಿಂದ (ಆತ ಮತಾಂಧರಿಂದ ಹತ್ಯೆಗೀಡಾಗಿದ್ದಾನೆ) ಹಿಡಿದು ಸಾಂಸ್ಕೃತಿಕ ಬಹುತ್ವದ ಅರ್ಥ ಮತ್ತು ಮಿಥ್ಯೆಯನ್ನು ಅರ್ಥೈಸುವ ಪಾಲಿಸ್ ಹಾನ್‌ಟಾನ್‌ಜಿ,

ಏಕಮುಖೀ ಕಥನದ ಅಪಾಯವನ್ನು ಪರಿಣಾಮಕಾರಿಯಾಗಿ ನಮ್ಮೆದುರಿಗಿಡುವ ಚಿಮಮಂದಾ ಅಡಿಚೆ, ಆಫ್ರಿಕಾದ ಸಮಾಜವಾದದ ನೆಲೆಗಳನ್ನು ನಿರ್ವಚಿಸುವ ಕ್ವಾಮ ಎನ್‌ಕ್ರೂಮ್‌ವರೆಗೆ ಬೇರೆ ಬೇರೆ ಮಜಲಿನಲ್ಲಿ ಬಹುರೂಪಿ ಚಿಂತನೆಗಳು ಇಲ್ಲಿ ದಾಖಲಾಗಿವೆ. ಪರಿಚಿತ ಹೆಸರುಗಳ ಜೊತೆಗೆ ಹಲವು ಅಪರಿಚಿತ ಹೆಸರುಗಳು ಇರುವುದರಿಂದ ಇದೊಂದು ಬಹು ಕೂಹಲಕಾರಿ ಮತ್ತು ಉಪಯುಕ್ತವಾದ ಕೃತಿಯಾಗಿದೆ. ಹಾಗೆಯೇ ನೊಬೆಲ್ ಪ್ರಶಸ್ತಿ ಪಡೆದ ವೋಲೆ ಶೋಯಿಂಕಾ, ನಜೀಬ್ ಮಹಫೂಸ್, ಸಾಮಾಜಿಕ ಮನೋವಿಶ್ಲೇಷಣಾಕಾರ ಗುಸ್ತಾವ್ ಲಬಾನ್, ದಶಕಗಳ ಕಾಲ ಸೆರಮನೆ ವಾಸ ಅನುಭವಿಸಿದ ನೆಲ್ಸನ್ ಮಂಡೇಲಾ ಕೋರ್ಟ್‌ನೆದುರು ನೀಡಿದ ವಿಚಾರಣಾ ಹೇಳಿಕೆಗಳೂ ಇಲ್ಲಿ ದಾಖಲಾಗಿವೆ. ಸ್ತ್ರೀವಾದಿ ದೃಷ್ಟಿಕೋನ, ಕಲೆ, ಸಂಸ್ಕೃತಿ ಮತ್ತು ಸಿನಿಮಾವನ್ನು ನಿರ್ವಚಿಸುವ ಮಹತ್ವದ ಲೇಖನಗಳ ಅನುವಾದಗಳನ್ನು ಸಹ ನಾವು ಇಲ್ಲಿ ಕಾಣಬಹುದು.

ವಸಾಹತುಶಾಹಿ ಆಡಳಿತವು ತನ್ನ ಶ್ರೇಷ್ಠತೆಯನ್ನು ಎತ್ತಿತ್ತೋರಿಸಲು ಹಲವು ಸಿದ್ಧ ಮಾದರಿ ರೂಪಕಗಳನ್ನು ಸೃಷ್ಟಿಸಿತ್ತು. ಇಂತಹ ಒಂದು ಪೂರ್ವಗ್ರಹದ ಸೃಷ್ಟಿಯೆಂದರೆ 'ನಿಗ್ಗರ್' ಎಂಬ ಪರಿಕಲ್ಪನೆ ಮತ್ತು ಇದಕ್ಕೆ ಉತ್ತರವೆನ್ನುವಂತೆ ನೆಗ್ರಿಟ್ಯೂಡ್ ಎಂಬ ದೇಸಿ ಪರಿಕಲ್ಪನೆಯಾಗಿದೆ. ಇದನ್ನೇ ಸ್ವಲ್ಪ ವಿವರಿಸುವುದಾದರೆ ಬಿಳಿಯರು ತಮ್ಮ ಶ್ರೇಷ್ಠತೆಯನ್ನು ಸಾರಲು ಆಫ್ರಿಕನ್ನರನ್ನು ಕಪ್ಪು ಅಥವಾ ಕರಿಯರು ಎಂದು ಕರೆದು ಅವರಲ್ಲಿ ಅಗಾಧ ಕೀಳರಿಮೆ ಸೃಷ್ಟಿಸಿದ್ದರು. ಕಪ್ಪು ಎನ್ನುವುದು ಸಮುದಾಯದ ಕಸುವನ್ನು ತೋರಿಸುತ್ತದೆ ಎಂದು ವಾದಿಸುವ ಎಮಿ ಸೀಜರ್ ನೆಗ್ರಿಟ್ಯೂಡ್ ಪರಿಕಲ್ಪನೆಯನ್ನು ವಿಸ್ತರಿಸಿದರು. ಆದರೆ ಮತ್ತೊಬ್ಬ ಮಹಾನ್ ಚಿಂತಕ ಎನ್‌ಗೂಗಿ ವಾ ಥಿಯಾಂಗೊ ಇದನ್ನು ವಿರೋಧಿಸಿ ಯುರೋಪಿಗೆ ಉತ್ತರ ಕೊಡುವುದೆ ನಮ್ಮ ಕೆಲಸವಲ್ಲ ಎಂದು ವಾದಿಸಿ ದೇಸಿಭಾಷೆಯಲ್ಲಿ ತಮ್ಮ ಕಥನವನ್ನು ಕಟ್ಟತೊಡಗಿದರು. ನಾಟಕಕಾರ ವೋಲೆ ಶೋಯಿಂಕ Tiger does not talk about Tigritude ಎಂದು ವಾದಿಸಿ, ನೆಗ್ರಿಟ್ಯೂಡ್ ಪರಿಕಲ್ಪನೆ ಆಫ್ರಿಕನ್ನರಿಗೆ ಸಹಜವಾಗಿರುವುದರಿಂದ ಇದನ್ನೊಂದು ವಿಶೇಷವಾಗಿ ಪರಿಗಣಿಸಬೇಕಿಲ್ಲ ಎಂದು ವಾದಿಸಿ ತೀವ್ರ ಟೀಕೆಗೆ ಒಳಗಾಗಿರುವುದನ್ನು ನಾವು ಗಮನಿಸಬಹುದು. ಮಹಿಳೆಯರ ಸ್ಥಾನಮಾನ ಮತ್ತು ಅಸ್ಮಿತೆ, ಶಿಕ್ಷಣ ಹಾಗೂ ಮಾರ್ಕ್‌ವಾದದ ಕುರಿತಾದ ಲೇಖನಗಳು, ಸಿನಿಮಾ ಮತ್ತು ಕಲಾ ಮೀಮಾಂಸೆ–ಹೀಗೆ ಬಹುಮುಖಿ ನೆಲೆಯ ಆಫ್ರಿಕಾ ಚಿಂತನೆಗಳ ಮೀಮಾಂಸೆಯನ್ನು ಇಲ್ಲಿ ದಾಖಲಿಸಲಾಗಿದೆ.. ಇದು ಕನ್ನಡದ ಸಂವೇದನೆಯನ್ನು ವಿಸ್ತರಿಸುವ ಆಯಾಮ ಪಡೆದುಕೊಂಡಿದೆ.

ವಸಾಹತುಷಾಹಿ ಆಡಳಿತದ ನಂತರ ಆಫ್ರಿಕಾ ಖಂಡದ ವಿವಿಧ ದೇಶಗಳನ್ನು ಆಳುತ್ತಿರುವುದು ಮತಾಂಧರು ಮತ್ತು ಸರ್ವಾಧಿಕಾರಿಗಳು. ಅದರಲ್ಲೂ ಅಮೆರಿಕಾ ನಿಯಂತ್ರಣದ ಕೈಗೊಂಬೆ ಆಡಳಿತಕ್ಕೆ ಸಿಲುಕಿದ ಆಫ್ರಿಕಾ ಜನತೆ ನವವಸಾಹತುಶಾಹಿ ಗ್ರಾಹಕ ಸಂಸ್ಕೃತಿಗೆ ತನ್ನನ್ನು ತೆರೆದುಕೊಂಡಿದೆ. ಮುಸ್ಲಿಂ ಧರ್ಮಾಂಧರು ನರಕವನ್ನು ಸೃಷ್ಟಿಸಿ ಜನಸಾಮಾನ್ಯರನ್ನು ಅಸಾಹಾಯಕರನ್ನಾಗಿ ಮಾಡಿದ್ದಾರೆ. ಈ ಎಲ್ಲ ಸಮಕಾಲೀನ ವಿದ್ಯಮಾನಗಳ ಕುರಿತಾಗಿ ಇನ್ನು ವಿಸ್ತೃತ ಲೇಖನಗಳು ಇಲ್ಲಿರಬೇಕಿತ್ತು ಎಂದೆನಿಸುತ್ತದೆ.

ಒಟ್ಟಾರೆಯಾಗಿ ನೋಡುವುದಾದರೆ, ಆಫ್ರಿಕಾದ ಸ್ಥಳೀಯ ಚಿಂತನೆಗಳು ಮತ್ತು ಜ್ಞಾನದ ವಿಭಿನ್ನ ಮಾರ್ಗಗಳನ್ನು ಸಾರುವ ಮೀಮಾಂಸೆ ಇದಾಗಿದೆ. ಅನುವಾದವು ಸಲೀಸಾಗಿದ್ದು ಸುಲಲಿತ ಓದಿಗೆ ಅನುವು ಮಾಡಿಕೊಟ್ಟಿದೆ.

**–ಟಿ. ಅವಿನಾಶ್**

ಪು: **ಬರಿಯ ನೆನಪಲ್ಲ!** (ಪ್ಯಾಲೇಸ್ತೀನಿ ಭಾವುಕ ಕಥನ) ಮೂಲ: **ಮಾರ್ಸೆಲ್ಲೊ ಡಿ ಸಿಂಟಿಯೋ** ಕನ್ನಡಕ್ಕೆ: **ಆಕರ್ಷ ರಮೇಶ್ ಕಮಲ** ಪ್ರ: **ಕಥನ ಪ್ರಕಾಶನ**, ಬೆಂಗಳೂರು (೯೪೪೮೩೩೪೬೨೨) ಪು: **೨೧೮** ಬೆ: **ರೂ. ೨೨೫/–**

## 'ಬರಿಯ ನೆನಪಲ್ಲ'ದ ಭಾವುಕತೆಯ ಮೀರಿದ ಕಥನ




ಏಳು ದಶಕದ ಹಿಂದೆ ಸಮರದ ಅಂಗಣದಿಂದ ಹುಟ್ಟಿದ 'ಇಸ್ರೇಲ್'ಅನ್ನು ಪ್ರಭುತ್ವ–ಉಳ್ಳವರು ಆವರಿಸುವಿಕೆಯ ಸಂಕೇತದಂತೆ ನೋಡುವುದು ಒಂದು ಕ್ರಮ. ಅದು ಬಹು ಜನಪ್ರಿಯ ರೀತಿಯೂ ಹೌದು. ಅದನ್ನ 'ಪಂಥ'ದ ಅನುಗುಣವಾಗಿ ಗ್ರಹಿಸುವ ರೀತಿಯೂ ಉಂಟು. ನೋಡುವಾಗ ಎಲ್ಲಿ ನಿಲ್ಲುತ್ತೇವೆ ಎನ್ನುವುದರ ಮೇಲೆ 'ಎಡ' ಮತ್ತು 'ಬಲ'ಗಳು ನಿರ್ಧಾರ ಆಗುತ್ತವೆ. ಭಾರತದ ಸಂದರ್ಭದಲ್ಲಿ 'ಬೈನರಿ' ಆಗಿರುವ ಈ ನೋಟಕ್ರಮವನ್ನು ಬೇರೆ ಕಡೆಗೂ ಅನ್ವಯಿಸಬಹುದೇ? ಸರಳ–ನೇರ ಅರ್ಥದಲ್ಲಿ ಗ್ರಹಿಸುವುದಾದರೆ ಉಳ್ಳವರ–ದೊಡ್ಡವರ–ಪ್ರಬಲರ ಪರವಾದ ನಿಲುವು ಹೊಂದುವುದು 'ಬಲ' ಎಂದೂ ಅಸಹಾಯಕರ–ನಿರ್ಗತಿಕರ–ಇಲ್ಲದವರ ಪರವಾಗಿರುವುದನ್ನು 'ಎಡ' ಎಂದು ಅರ್ಥ ಮಾಡಿಕೊಳ್ಳಬಹುದು. ಆದರೆ, ಭಾರತದಲ್ಲಿ ಎಡ–ಬಲದವರು ಇಸ್ರೇಲ್–ಪ್ಯಾಲೆಸ್ತೀನ್ ಸಮಸ್ಯೆಯನ್ನು ನೋಡುವ ರೀತಿ ಭಿನ್ನ. ಭಾರತದಲ್ಲಿ ಆಡಳಿತ ಪಕ್ಷ ಬದಲಾದ ಮೇಲೆ ಅದು ಮತ್ತಷ್ಟು ಸಂಕೀರ್ಣವಾಗಿದೆ. ಅಥವಾ ಬೇಕೆಂದಾಗ–ಬೇಕಾದ ರೀತಿಯಲ್ಲಿ 'ಆಡಿ'ಕೊಳ್ಳುವ ವಸ್ತುವಾಗಿದೆ.

ಈ ಹಿನ್ನೆಲೆಯಲ್ಲಿ ಕನ್ನಡಕ್ಕೆ ಬಂದಿರುವ 'ಬರಿಯ ನೆನಪಲ್ಲ' ಕೃತಿಯು ಒಂದು ವಿಭಿನ್ನ–ಹೊಸ ಅನುಭವ ಲೋಕವನ್ನು ಕಟ್ಟಿಕೊಡುವ ಕೃತಿ. ಕೆನಡಾದ ಲೇಖಕ ಮಾರ್ಸೆಲ್ಲೊ ಡಿ ಸಿಂಟಿಯೊ ಅವರ Pay No Heed to the Rockets ಕೃತಿಯನ್ನು 'ಕವಿ' ಆಕರ್ಷ ರಮೇಶ್ ಕಮಲ ಅವರು ಕನ್ನಡೀಕರಿಸಿದ್ದಾರೆ. ಗೋಡೆಬರೆಹ– ಭಿತ್ತಿಚಿತ್ರಗಳ ಲೋಕವನ್ನು ಕನ್ನಡದ ಸಂವೇದನೆಗೆ ತಂದ 'ಗ್ರಾಫಿಟಿಯ ಹೂವು' ಕವನ ಸಂಕಲನದ ಮೂಲಕ ಕನ್ನಡಿಗರಿಗೆ ಕಂಡ ಆಕರ್ಷ ಅವರ ಹೊಸ ಪ್ರಯತ್ನ ಈ ಪುಸ್ತಕ. ಆಕರ್ಷ ಅವರು 'ಪ್ಯಾಲೆಸ್ತೀನಿ ಭಾವುಕ ಕಥನ' ಎಂಬ ಸಬ್‌ಟೈಟಲ್ ಕೂಡ ನೀಡಿದ್ದಾರೆ. ಹೌದು ನಿಜವಾಗಿಯೂ ಇದು ಭಾವುಕ ಕಥನ. ಅಂದರೆ 'ವೈಚಾರಿಕ'ತೆಯ ಭಾರದಿಂದ ನಲುಗದ ಹಾಗೆ ರಚಿಸಲಾದ ಬರೆಹ. ಗಂಭೀರವಾದ ವಿಷಯವನ್ನು ಸರಳ–ನೇರ–ಮನ ಮುಟ್ಟುವ ರೀತಿಯಲ್ಲಿ ಕಟ್ಟಿಕೊಡಲಾಗಿದೆ. 'ಭಾವುಕ ಕಥನ' ಅಂತ ಇದ್ದರೂ ಭಾವುಕತೆಯೇ ಪ್ರಧಾನವಾಗಿ ವಿಷಯ ಹಿಂದಕ್ಕೆ ಸರಿಯದ ಹಾಗೆ ನೋಡಿಕೊಂಡಿರುವುದು ವಿಶೇಷ. ವಿಚಾರ–ಭಾವನೆಗಳೆರಡರ ಹದವಾದ ಮಿಶ್ರಣ ಪುಸ್ತಕದುದ್ದಕ್ಕೂ ನೋಡಬಹುದು.

ಹಿನ್ನೆಲೆ ಕಟ್ಟಿಕೊಡುವ 'ಪ್ರವೇಶ' ಹಾಗೂ 'ಆಕರ ಗ್ರಂಥಗಳು' ಹೊರತು ಪಡಿಸಿ ಎಂಟು ಅಧ್ಯಾಯ/ಭಾಗಗಳಲ್ಲಿ 'ಕಥನ' ಇದೆ.

'ಕತೆಯೊಂದಕ್ಕಿಂತ ಈ ಪ್ರಪಂಚಲ್ಲಿ ಬೇರೆ ಯಾವುದೇ ವಸ್ತುವಿಗೆ ಇಷ್ಟು ಚೆಲುವು ಹಾಗೂ ಮಾನವೀಯತೆ ಇರುವುದಿಲ್ಲ' ಎಂದು ಪ್ರವೇಶದಲ್ಲಿಯೇ ಪುಸ್ತಕದ ಸ್ವರೂಪದ ಸುಳಿವು ನೀಡಲಾಗಿದೆ. 'ಕತೆಗಳಂತೆ ನಾವೂ ಹೆಚ್ಚಲ್ಲ, ಕಮ್ಮಿಯೂ ಅಲ್ಲ' ಎನ್ನುತ್ತ ಓದುಗನನ್ನು ಸಿದ್ಧಗೊಳಿಸುವ ಲೇಖಕನಿಗೆ 'ಹೊರಗಿನವರು ಪ್ಯಾಲೆಸ್ತೀನಿನ ಕತೆಗಳನ್ನು ಕೇಳಿದಾಗಲೆಲ್ಲ ನಿರಂತರ ಸಂಘರ್ಷದ ಸಣ್ಣ ಎಳೆ ಮಾತ್ರ ಗಮನಿಸುತ್ತಾರೆ' ಎಂಬ ತಕರಾರಿದೆ. 'ಅಂತಹ ಕಥಾವಸ್ತುವಿನಲ್ಲಿ ಕಲಾತ್ಮಕತೆಯ ಕೊರತೆಯಿದೆ' ಎನ್ನುವ ಲೇಖಕ 'ಕೇಳಿ ದಣಿದ ಮತ್ತು ನಿರಾಶೆಗೊಂಡ ಕತೆಗಳಿಗಿಂತ ವಿಭಿನ್ನ ಕತೆಗಳನ್ನು ಹೇಳುತ್ತಾರೆ' 'ಪ್ಯಾಲೆಸ್ತೀನ್ ಕಳೆದುಹೋಗಿದೆ' ಎಂಬ ಅಂಶ ಹೊರತುಪಡಿಸಿದ ವಿಶೇಷಗಳತ್ತ ಗಮನ ಹರಿಸಿರುವುದು ಈ ಪುಸ್ತಕದ ವಿಶೇಷ.

ಇಲ್ಲಿನ ಕತೆಗಳು ಕೇವಲ 'ದುರಂತ' ಕತೆಗಳಲ್ಲ. ಹಾಗೆಯೇ ಅವುಗಳಿಗೆ ನೋವು–ಹಿಂಸೆ– ಅಸಹಾಯಕತೆಯ ಹಿನ್ನೆಲೆಯೂ ಇಲ್ಲದಿಲ್ಲ. ಮನುಷ್ಯ ಸಹಜ ಭಾವಲೋಕದ ಅನಾವರಣಕ್ಕೆ ಬಳಸಿರುವ ಕ್ರಮ ಅದಕ್ಕಾಗಿ ಬಳಸಿರುವ ಕವಿತೆಯ ಸಾಲುಗಳು ಹೃದ್ಯವಾಗಿವೆ. ಕಾವ್ಯಾತ್ಮಕ ಭಾಷೆಯು ಓದು ಅನುವಾದ/ಭಾಷಾಂತರ ಅನ್ನಿಸದಿರುವ ಹಾಗಿದೆ.

ಪ್ರಮುಖ ಬರಹಗಾರರಾದ ದರ್ವಿಶ್ ಮತ್ತು ಕನಫಾನಿಯರ ಜೀವನದ ವಿವರಗಳ ನೀಡುವ 'ನಿಮ್ಮದೇ ಮುಳ್ಳುಗಳನ್ನು ನಿಮ್ಮ ಕೈಯಿಂದ ಕಿತ್ತುಕೊಳ್ಳುತ್ತ' ಅಧ್ಯಾಯವು ಪ್ಯಾಲೆಸ್ತೀನಿಯರು ಗಡಿಪಾರಾದ ದಿನಗಳ ನೆನಪುಗಳ ಜೊತೆಗೆ ಬದುಕು ಕಟ್ಟಿಕೊಂಡ ಕ್ರಮವನ್ನೂ ವಿವರಿಸಿದ್ದಾರೆ.

'ಹಣ್ಣಾಗಿರುವ ಹೃದಯಕ್ಕೆ ಹಸಿವಾದಾಗ' ಅಧ್ಯಾಯದಲ್ಲಿ ಪ್ಯಾಲೆಸ್ತೀನ್ ಸೂಕ್ಷ್ಮ ಮನಸ್ಸುಗಳು ನಡೆಸಿದ ಹುಡುಕಾಟ–ರಮಲ್ಲಾದಲ್ಲಿ ಕಂಡುಕೊಂಡ 'ನೆಲೆ'ಗೆ ಮಾತ್ರ ಸೀಮಿತವಾಗಿಲ್ಲ. 'ಕ್ರೌರ್ಯ'ದ ಕಾವ್ಯಾತ್ಮಕ ಅಭಿವ್ಯಕ್ತಿಯ ದಾಖಲುಗಳು ಇಡಿಕಿರಿದಿವೆ. ಇಲ್ಲಿನ 'ವಿಲನ್'ಗಳು ಬೈನರಿಗೆ ದಕ್ಕುವವರಲ್ಲ.

'ಇದು ನಿಜವಾದ ಹೋರಾಟ, ಅಚಲತೆ, ನಾನೀಗ ಸೈರನ್ನುಗಳಿಗೆ ಹೆದರುವುದಿಲ್ಲ' ಎಂಬ ಅಧ್ಯಾಯಗಳಲ್ಲಿ ಕತೆಗಳ ಸ್ವರೂಪ ಮತ್ತೊಂದು ನೆಲೆಗೆ ವಿಸ್ತರಿಸುತ್ತದೆ. ಬಂದೂಕಿನೆದುರು ನಿಲ್ಲುವ ಭಯಾತಂಕ ರಹಿತ ಸ್ಥಿತಿಯನ್ನು ವಿವರಿಸುವ ಚಿತ್ರಗಳು 'ಕತೆಯಲ್ಲ' ಎಂದು ಸಾಬೀತು ಪಡಿಸುತ್ತವೆ.

'ನಾನು ಅರೇಬಿಕ್‌ನಲ್ಲಿ ಪ್ರೀತಿಸುತ್ತೇನೆ, ಕಿತ್ತಳೆ ಮತ್ತು ಸಣ್ಣಕತೆಗಳ ರಫ್ತುದಾರ, ಹಸಿರುಡುಗೆಯ ಹುಡುಗಿ' ಅಧ್ಯಾಯಗಳು ಪುಸ್ತಕದ ಕಥನದ ನೆಲೆಗಳನ್ನು ವಿಭಿನ್ನ ನೆಲೆಗೆ ಕೊಂಡೊಯ್ದು ಓದಿನ ಸುಖ ಒದಗಿಸುತ್ತವೆ. ಮಾತ್ರವಲ್ಲದೆ, ಅರಿವಿನ ವಿಸ್ತಾರದ ಜವಾಬ್ದಾರಿಯನ್ನೂ ನಿರ್ವಹಿಸುತ್ತವೆ. ಕತೆಯ ಓದು–ಕಟುವಾಸ್ತವದ ಸಂಕಟಗಳನ್ನು ಭಾವನಾತ್ಮಕ ನೆಲೆಗೆ ಸೀಮಿತವಾಗದಂತೆ ನಿರ್ವಹಿಸಿರುವ ಲೇಖಕನ ಕೌಶಲ್ಯ ಮೆಚ್ಚುಗೆಗೆ ಪಾತ್ರವಾಗದೇ ಇರದು. ಈ ಪುಸ್ತಕ ಓದಿ ಮುಗಿಸುವ ವೇಳೆಗೆ ಗೊತ್ತಿರುವ/ಗೊತ್ತಿರದ ಲೋಕದ ಅನಾವರಣ ಓದುಗನಿಗಾಗಿರುತ್ತದೆ. ಹಿಂಸೆಗೆ ಒಳಪಟ್ಟ ಅಸಹಾಯಕ–ಸಂವೇದನಾಶೀಲ ಮನಸ್ಸುಗಳನ್ನು ಅದಕ್ಕೆ ಪ್ರತಿಕ್ರಿಯಿಸಿ ಮೀರುವ ಯತ್ನದ ದಾಖಲುಗಳು 'ಮುದ' ನೀಡದೇ ಇರಲಾರವು. 'ನಾನು ಪ್ರತಿ ಬಾರಿಯೂ ಅತ್ಯಂತ ತಟಸ್ಥ ಮತ್ತು ಭಯೋತ್ಪಾದಕಗಳಲ್ಲದ ರೀತಿಯಲ್ಲಿ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ' ಎನ್ನುವ ಮಾತು 'ನಿಜ'ದೆಡೆಗೆ ಕರೆದೊಯ್ಯುವ ಪ್ರಯತ್ನದಂತಿದೆ.

**–ದೇವು ಪತ್ತಾರ**

ಪು: **ಯಕ್ಷಿಣಿ ಕನ್ನಡಿ** (ಕವಿತೆಗಳು) ಲೇ: **ತೇಜಶ್ರೀ** ಪ್ರ: **ಪಲ್ಲವ ಪ್ರಕಾಶನ,** ಚನ್ನಪಟ್ಟಣ (೮೮೮೦೦೮೭೨೩೫) ಪು: **೮೦** ಬೆ: **ರೂ. ೮೦/-**

## ಸಂಜೀವಿನಿಯ ಹಂಬು




**ಕಾ**ವ್ಯದ ಕುರಿತು ಅಪಾರ ಶ್ರದ್ಧೆ ಮತ್ತು ನಿತಾಂತ ಒಲವಿನ ಜ.ನಾ. ತೇಜಶ್ರೀಯವರ ಸಂಕಲನ ಯಕ್ಷಿಣಿ ಕನ್ನಡಿ. ತಮ್ಮ ಕಾವ್ಯದಾರಿಯಲ್ಲಿ ತೇಜಶ್ರೀ, ಮನುಷ್ಯ ಬಾಳಿನ ಸಾರ್ಥಕತೆಯ ನೆಲೆ ಯಾವುದು ಮತ್ತು ಯಾಕೆ ಎಂಬುದನ್ನು; ಹೆಣ್ಣಾಗಿರುವುದರ ಸುಖ-ಸೊಬಗುಗಳೇನು ಎನ್ನುವುದನ್ನು ಸ್ವಷ್ಥ ವ್ಯವಧಾನದಿಂದ ಶೋಧಿಸಿದವರು. ಇದರ ಮುನ್ನಡೆಯಾಗಿ ಈ ಸಂಕಲನ ಮನುಷ್ಯ ಬಾಳಿನ ಶಾಶ್ವತತೆಯ ಪ್ರಶ್ನೆಗೆ ಮರಮರಳಿ ಪ್ರವೇಶಿಸುತ್ತದೆ. 'ಶಾಶ್ವತವೆಂಬುದು ಎಷ್ಟು ಕ್ಷಣಿಕ' ಎಂಬ ಕವಿತೆ ಈ ಬಾಳಿನ ಮಹೋನ್ನತ ಚೆಲುವಿರುವುದೇ, ನಂಬಿಕೆ-ವಿಶ್ವಾಸಗಳೆಲ್ಲ ಕುಸಿಯಿತೆನ್ನುವಾಗಲೇ ಅದು ಇನ್ನಷ್ಟು ತ್ರಾಣದಿಂದ ಮೊಳಕೆಯೆತ್ತುವಲ್ಲಿ- ಎಂದು ಕಾಣಿಸುತ್ತದೆ. ಮಳೆ ಕದಡುತ್ತಲೇ ಮರುಸಂಭಾಳಿಕೆಗೆ ಅನುವು ಮಾಡಿಕೊಡುತ್ತದೆ. ಹಾಗೇ ಬದುಕೂ, ಬದುಕಿನ ಈ ಜಿಜ್ಞಾಸೆಗೆ ಮಂತ್ರದಂಡವಾಗಿ ಒದಗಿದ್ದು ಯಕ್ಷಿಣಿ ಕನ್ನಡಿ. ಬಾಲ್ಯದಲ್ಲೇ ಸಿಕ್ಕ, ಯಾರೂ ಉಪೇಕ್ಷಿಸಬಹುದಾದ ರಸ್ತೆಯಂಚಿನ ಗಾಜಿನಚೂರು. ಅದೀಗ ಲೋಕಸತ್ಯವನ್ನೂ ಲೋಕವಿನ್ಯಾಸವನ್ನೂ ಬೇರೆಯೇ ಆಗಿ ಕಾಣಿಸುವ ಉಪನಯನ, ಬದುಕಿನ ಒಳ ಹೊರಗಿನ ಆರುಪಾರನ್ನು ಆಳವಾಗಿ ತಾಕಬಲ್ಲ ತ್ರಾಣ.

ವರ್ತಮಾನದ ಪುನರನ್ವೇಷಣೆಗೆ ಓದುಗ ಪ್ರಜ್ಞೆಯನ್ನು ಸಜ್ಜುಗೊಳಿಸುವ ಕಾವ್ಯ ಬಗೆಗಳಿವೆ *'ಬದುಕು ಎಡಗಾಲಾದರೆ ಸಾವು ಬಲಗಾಲಾಗುವ'* ಸ್ಥಿತಿ ಸಾವಿನ ಸುಗ್ಗಿಯ ಸಾಂಕ್ರಾಮಿಕದ ಯಾತನೆಯನ್ನು ಮೀಟುತ್ತದೆ.. ಎಲ್ಲಕ್ಕೂ ಸಾಕ್ಷಿಯಾಗುವ ಮರ, ನೋವಿಗೂ ಉತ್ತರದಾಯಿಯಾಗಿದೆ. ಎಂತಹ ಆಪತ್ತಿನಲ್ಲೂ ತನ್ನೊಳಗೆ ತಾ ಬೆಳೆಯುವುದನ್ನು ನಿಲ್ಲಿಸದ ಮರ ನಿಜದ ದೇಗುಲವಾಗುತ್ತದೆ. ತನ್ನ ಮಡಿಲು ತೊರೆದು ಹಾರಿ ಹೋದ ಗಿಳಿಗಳಿಗಾಗಿ ಧೇನಿಸುತ್ತದೆ. ಕಾದುಕಾದು ನೆರೆನಿಂತ ನೀರಲ್ಲಿ ನೆಂದು ಗಿಳಿಮರವಾಗುತ್ತದೆ. *'ಮೈ ಮುದಿಯಾದರೂ ಜೀವ ಮುದಿಯಾಗಗೊಡದ ಗಿಳಿಪೊಟರೆ'* ಸಂಕೇತಿಸುವುದು ಮನುಷ್ಯ ಬಾಳನ್ನು. ಶಾಶ್ವತವೆಂಬುದು ಯಾವುದು? ಇದ್ದಿದ್ದೋ ಇರುವುದೋ? ಶಾಶ್ವತಕ್ಕೂ ಚಲನೆಯಿದೆ.

ಹೆಣ್ಣು-ಗಂಡಿನ ಸಂಬಂಧದ ಸೂಕ್ಷ್ಮ ಮಜಲುಗಳನ್ನು ಹೆಣ್ಣುಬಾಳಿನ ಆತ್ಯಂತಿಕ ಸೌಖ್ಯದ ಉತ್ಥಾನ ಲಯವನ್ನು ಹಿಡಿಯಲು ಶ್ರಮಿಸಿದವರು ತೇಜಶ್ರೀ. ಅವರ ಕಾವ್ಯಯಾನದ ನಿಸ್ತಂತು ಎಳೆಯದು. ಇಲ್ಲಿ 'ಅವನ' ಸಾಮೀಪ್ಯದ ಕಂಪಿತ ಪರಿಣಾಮವನ್ನು ಹೇಳುತ್ತಲೇ, ಮತ್ತೆ ಮತ್ತೆ ಹಂಬಲಿಸುವ ರಾಧೆತನವಿದೆ. ಅವಳು ಬಯಸುವ 'ಅವನ' ಇತಿಸ್ಥಿತಿಯೇನು? ಕ್ಷಣರುಚಿಯ ಮಲರಂಬು ಕಾಡುವುದು ಯಾಕೆ? ಕಾಮ-ಕಾಮನೆಗಳ ಸುಳಿಯಲ್ಲಿ ಸಿಕ್ಕ ಹೆಣ್ಣಿನತ್ರಾಣ-ನಿತ್ರಾಣಗಳೇನು? ಲೋಕ ಅದನ್ನು ಆದರ್ಶೀಕರಿಸಿ, ಮುಚ್ಚಿ ಮಣ್ಣು ಹಾಕಿದರೂ ಮಳೆಗೊಮ್ಮೆ ಮೊಳಕೆ ಚಿಗುರುವುದು ಯಾಕೆ? **'ಎಲ್ಲ ಒಂದು ಸ್ಪರ್ಶಕ್ಕಾಗಿ'** ಕವಿತೆಯ ಅಹಲ್ಯೆ ಅಂದಿನವಳಲ್ಲ, ಇಂದಿನವಳು. ಲೋಕಾಯತದ ಎಲ್ಲ ಸಂಬಂಧಗಳಿದ್ದೂ ಅನಾಥವಾದವಳು. ಮಾರ್ದವದ ಸ್ಪರ್ಶವಿಲ್ಲದೆ ಕಲ್ಲುಮಂಟಿಕೆಯಾದವಳು. ಒದಗಿದ ಒಂದು ಸ್ಪರ್ಶ ಅವಳೊಳಗಿನ ಹೆಣ್ಣನ್ನು ಜೀವಂತಗೊಳಿಸಿದೆ. ಅವಳ ಈ ಪರಿವರ್ತನೆ ರಾಮನಿಗೆ ತನ್ನ ನಿಜದ ದರ್ಶನವೂ ಆಗಿದೆ. ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವ 'ಚರ್ಚರಸ್ತೆಯ ಹುಚ್ಚಿ' ಈ ಹಾದಿಯ ಮತ್ತೊಂದು ಗುರುತುಗಲ್ಲು. ಯಾರೋ ಉಡಿಸಿರಬಹುದಾದ ಅವಳ ಮೈಮೇಲಿನ ಶುಭ್ರ ಬಟ್ಟೆ- ಈ ಊರ ಗಾಳಿಯಲ್ಲಿ ಕರುಣೆ ಇನ್ನೂ ಬದುಕಿದೆಯೆಂದು ಹೇಳುವಂತಿದೆ. ಆದರೆ ಅವಳ ಬಸಿರು ಏನು ಹೇಳುತ್ತಿದೆ? ಯಾರದೋ ಹುಚ್ಚಿಗೆ ಅವಳು ಹುಚ್ಚಿಯಾಗಬೇಕು. ಆದರೆ, ಎಲ್ಲ ಆಟದಲ್ಲೂ ಗೆಲುವು ಗಂಡಿನದೇ ಆಗಬೇಕಾಗಿಲ್ಲ. ಸಂಜೀವಿನಿಯ ಹಂಬು ಕವಿತೆಯಲ್ಲಿ-ಅವಮಾನಗಳಿಗೆ ಒಳಗಾದರೂ ಅವಳು ಸಂಜೀವಿನಿ ಹಂಬು, ತೇವದ ಮಣ್ಣಲ್ಲಿ ಬೇರಿಳಿಸಿ ಬೆಳೆವಾಗ, ಕೈ ನೀಡಲು ಬಂದವನು ಹಂಬು ತೊಡರಿ ಬಿದ್ದು ಇಲ್ಲವಾಗುತ್ತಾನೆ. ಸಾಂಗತ್ಯ ದಣಿವಿನ ಹಾದಿಯಾದರೆ, ಅದು ಅಪೂರ್ಣ ಶ್ರಮ ಮಾತ್ರವಾಗುತ್ತದೆ- ಅಲ್ಲವೇ?

ಬೆಟ್ಟ, ಚೆಂದದ ಕವಿತೆ- ಹೌದು. ಆದರೆ ಕವಿತೆ 'ಆಗುವ' ಹದ ಸುಲಭಕ್ಕೆ ದಕ್ಕುವುದಿಲ್ಲ. ಹಣ್ಣು ಹುಳ ತಾಕದ ಮುನ್ನ ಅದರ ಹದ ಹಿಡಿಯಬೇಕಲ್ಲ ಹಾಗೆ. ಕವಿತೆ ಕಾವ್ಯಮಾರ್ಗಿಯಾದವರ ಅನುಸಂಧಾನದಲ್ಲಿ ಪರಂಪರೆಯ ರುಚಿ-ನೆನಪುಗಳಿರುತ್ತವೆ. ಆ ನೆನಪಿನೆಳೆಗಳು ತೇಜಶ್ರೀಯವರಲ್ಲಿ ಸ್ವ ನೇಯ್ಗೆಯಾಗಿವೆ. ಮಾತು ಹೆಣದ ಮೇಲಣ ಹಕ್ಕಿ, ಈವರೆಗೂ ಮನುಷ್ಯ ನೋಡದ ಮೃಗದಂತಿತ್ತು ಆ ಮಳೆ, ಇಂತಲ್ಲಿ ಯಕ್ಷಿಣಿ ಕನ್ನಡಿಯ ಬೆಳಕು ಚಕ್ಕನೆ ಹಾಯುತ್ತದೆ. ಬದುಕಿನಾಳದ ಸೊಬಗಿನ ದರ್ಶನದಿಂದ. ಇದೊಂದು ಆಪ್ತ ಸಂಕಲನ.

**-ವಿನಯಾ**

ಪು : **ಪಚ್ಚೆಯ ಜಗುಲಿ**(ವಿಮರ್ಶಾ ಸಂಕಲನ) ಲೇ: **ಆರ್. ದಿಲೀಪ್ ಕುಮಾರ್** ಪ್ರ: **ಕಾಚಕ್ಕಿ ಪ್ರಕಾಶನ,** ತುಮಕೂರು(೮೬೬೦೭೮೮೪೫೦) ಪು:೧೨೮ ಬೆ: **ರೂ ೧೭೫/-**

## ವ್ಯಾಪಕ ಓದಿನ, ಸೀಮಿತ ದೃಷ್ಟಿಕೋನದ ಅಧ್ಯಯನ




**ಇ**ದು ಪಂಪನ ಕಾವ್ಯಗಳನ್ನು ಕುರಿತ ಹದಿಮೂರು ವಿಮರ್ಶಾ ಬರಹಗಳ ಸಂಕಲನ. ಪಂಪನನ್ನು ಒಳಗೊಂಡಂತೆ ಪ್ರಾಚೀನ ಕಾವ್ಯಗಳನ್ನು ಕುರಿತ ಆಸಕ್ತಿ ಇಂದಿನ ತಲೆಮಾರಿನವರಲ್ಲಿ ಇಡಿಯಾಗಿ ಓದುವ ವ್ಯವಧಾನ ಕಡಿಮೆಯಾಗಿರುವ ಇಂದಿನ ಸಂದರ್ಭದಲ್ಲಿ ಇಂತಹ ಕೃತಿಗಳು ಗಮನ ಸೆಳೆಯುತ್ತವೆ,.

ಈ ಸಂಕಲನದಲ್ಲಿ ಪಂಪನ ಎರಡು ಮಹಾಕಾವ್ಯಗಳನ್ನು ಇಡಿಯಾಗಿ ಓದಿದ ಕುರುಹುಗಳಿವೆ. ಹಾಗಾಗಿ 'ಪಂಪಭಾರತ' ಪದ್ಯದ ರಸವೊಂದರ ಚರ್ಚೆಯಲ್ಲಿ 'ಆದಿಪುರಾಣ'ದ ಪದ್ಯವನ್ನಿಟ್ಟುಕೊಂಡು ತೌಲನಿಕವಾಗಿ ಚರ್ಚಿಸಲು ಸಾಧ್ಯವಾಗಿದೆ. ಇಲ್ಲಿ ಸಂಸ್ಕೃತ ಕಾವ್ಯಮೀಮಾಂಸೆಯ 'ರಸ'ತತ್ವವನ್ನು ಮುಖ್ಯ ಪ್ರಮಾಣವನ್ನಾಗಿಟ್ಟುಕೊಂಡು ಪಂಪನ ಕೃತಿಗಳನ್ನು ಚರ್ಚಿಸಲಾಗಿದೆ. ಅದರಲ್ಲೂ ಶೃಂಗಾರ ರಸದ ಪ್ರತಿಪಾದನೆ ಪಂಪನ ಕಾವ್ಯದಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದರ ಪರಿಶೀಲನೆಯೇ ಮುಖ್ಯವಾಗಿದೆ. 'ರಸ'ಗಳ ಅಭಿವ್ಯಕ್ತಿಯೇ ಪಂಪನ ಕಾವ್ಯದ ಮುಖ್ಯ ಭಿತ್ತಿಯೆಂಬಂತೆ ಪರಿಭಾವಿಸಿರುವುದು ಈ ಬರಹಗಳ ಬಹುದೊಡ್ಡ ಮಿತಿಯಾಗಿದೆ. ಬಹುತೇಕ ಲೇಖನಗಳು ಪಂಪನ ಕಾವ್ಯದಲ್ಲಿ ಶೃಂಗಾರರಸ ಅಭಿವ್ಯಕ್ತಿ ಸಮರ್ಪಕವಾಗಿದೆಯೆ, ಇಲ್ಲವೇ ಎಂಬುದರ ಪರಿಶೀಲನೆಯಲ್ಲಿಯೇ ಮುಕ್ತಾಯವಾಗುತ್ತವೆ. ಪಂಪನ ಕಾವ್ಯಗಳಲ್ಲಿ ಶೃಂಗಾರರಸದ ಪರಿಣಾಮಕಾರಿಯಾದ ಅಭಿವ್ಯಕ್ತಿಯಿದೆ. ಕೆಲವು ಸಂದರ್ಭಗಳಲ್ಲಿ ಶೃಂಗಾರದ ಜೊತೆಗೆ ಕರುಣಾ ರಸಗಳ ಪರಿಣಾಮಕಾರಿ ಬಳಕೆಯಿಂದ ವಿಭಿನ್ನ ರಸಾಸ್ವಾದ ದೊರೆಯುತ್ತದೆ ಎಂಬುದನ್ನು ಗುರುತಿಸುವಷ್ಟಕ್ಕೆ ಇಲ್ಲಿನ ಲೇಖನಗಳು ಸೀಮಿತವಾಗಿವೆ. ಹಾಗಾಗಿ ಪಂಪನ ಕೃತಿಗಳನ್ನು ಇಡಿಯಾಗಿ ಚರ್ಚಿಸುವುದಾಗಲಿ, ಆಯ್ದ ಪದ್ಯಗಳನ್ನು ಹೊಸದೃಷ್ಟಿಯಿಂದ ನೋಡಲಾಗಲಿ ಸಾಧ್ಯವಾಗಿಲ್ಲ.

ಕೃತಿಯ ಒಡಲಿನಿಂದ ಕೆಲವು ಪದ್ಯಗಳನ್ನು ಆಯ್ದುಕೊಂಡು ಚರ್ಚಿಸುವ ಪರಿಕ್ರಮವನ್ನು 'ನವೋದಯ' ಸಾಹಿತ್ಯ ಮಿಮರ್ಶೆಯಲ್ಲಿ ಕಾಣುತ್ತೇವೆ. ಲೇಖಕರು ಇಲ್ಲಿ ಅದೇ ವಿಧಾನವನ್ನು ಅನುಸರಿಸಿದ್ದಾರೆ. ಕೃತಿಯೊಳಗಿನ ಪದ್ಯವೊಂದನ್ನು ಅದರ ಸಂದರ್ಭದಿಂದ ಬೇರ್ಪಡಿಸಿ ಅದನ್ನು ಸ್ವತಂತ್ರ ಕವಿತೆಯೆಂಬಂತೆ ಚರ್ಚಿಸುವ ವಿಧಾನವು ಪಠ್ಯದ ಸಾವಯವ ಸಂಬಂಧವನ್ನೆ ನಿರಾಕರಿಸುತ್ತದೆ. ಈ ಸಂಕಲನದ ಬರಹಗಳು ಈ ಬಗ್ಗೆ ಆಲೋಚಿಸಿದಂತಿಲ್ಲ. ಪ್ರಾಚೀನ ಕಾವ್ಯಗಳನ್ನು ಕುರಿತು ಬಂದ ಅಧ್ಯಯನಗಳನ್ನು, ಸಾಹಿತ್ಯ ಚರಿತ್ರೆ ಪ್ರತಿಪಾದಿಸಿದ ನಿಲುವುಗಳನ್ನು ಮರುಪರಿಶೀಲಿಸುವುದಾಗಲಿ, ಪ್ರಶ್ನಿಸುವುದಾಗಲಿ ಇಲ್ಲಿಲ್ಲ. ಈ ಅಧ್ಯಯನಗಳು ಪ್ರತಿಪಾದಿಸಿದ ವಿಚಾರಗಳನ್ನು ಇಲ್ಲಿ ಬೇರೆ ಮಾತುಗಳಲ್ಲಿ ಹೇಳಲಾಗಿದೆಯಷ್ಟೆ.

ಬಹುಪಾಲು ಲೇಖನಗಳಲ್ಲಿ ಸರಳೀಕೃತ ತೀರ್ಮಾನಗಳಿವೆ. ಉದಾಹರಣೆಗೆ ಜೈನರ ಮೂಲ ಮಹಾಪುರಾಣದಲ್ಲಿಲ್ಲದ ಸ್ವಯಂಪ್ರಭೆಯ ಶೋಕವರ್ಣನೆ ಆದಿಪುರಾಣದಲ್ಲಿದ್ದು ಪಂಪನ ಸ್ತ್ರೀಪರ ಧೋರಣೆಗೆ ನಿದರ್ಶನವೆಂಬಂತೆ ನಿರೂಪಿಸುತ್ತಾರೆ(ಪು.೨೩). ಅದರೆ ಶೃಂಗಾರರಸದ ಪ್ರತಿಪಾದನೆಯ ಪದ್ಯಗಳಲ್ಲಿ ಅಭಿವ್ಯಕ್ತವಾದ ಪುರುಷ ದೃಷ್ಟಿಯ ಬಗೆಗೆ ಲೇಖಕರಿಗೆ ತಕರಾರುಗಳಿಲ್ಲ. ಆ ಪದ್ಯಗಳ ವರ್ಣನೆಯಲ್ಲಿ ಹೆಣ್ಣನ್ನು ನೋಡಿದ ದೃಷ್ಟಿಕೋನವು ಪರಿಶೀಲನೆಗೆ ಒಳಗಾಗದೆ ಆ ಪದ್ಯದ ರಸವಿಮರ್ಶೆಗೆ ಹೆಚ್ಚು ಪ್ರಾಶಸ್ತ್ಯ ದೊರೆತಿದೆ. ಕಾವ್ಯಮೀಮಾಂಸಕರು ಮಿಶ್ರರಸಗಳ ಜೋಡಿಯಲ್ಲಿ ಶೃಂಗಾರ ಮತ್ತು ಕರುಣವನ್ನು 'ಶತ್ರು ರಸದ'(ಲೇಖಕರು ಬಳಸಿದ ಪದವಿದು) ಜೋಡಿಯೆಂದೇ ಗುರುತಿಸಿದ್ದಾರೆ. ಪಂಪನು ತನ್ನ ಕಾವ್ಯದಲ್ಲಿ ಈ ಜೋಡಿಗಳನ್ನು ತಂದ ಪದ್ಯಗಳು ಯಶಸ್ವಿಯಾಗಿರುವುದನ್ನು ಈ ಬರಹ ಗುರುತಿಸಿದೆ. ಈ ವಿಮರ್ಶೆಯಲ್ಲಿ ಇಂತಹ ಕೆಲವು ಸೂಕ್ಷ್ಮ ನಿಲುವುಗಳು ಇವೆ. ಅದರೆ ಹಲವು ಸರಳೀಕೃತ ತೀರ್ಮಾನಗಳು, ಬೀಸು ಹೇಳಿಕೆಗಳು ಇವನ್ನು ಮರೆಗೆ ತಳ್ಳಿವೆ.

ಪಂಪನ ಕೃತಿಗಳನ್ನು ಅವನು ಜೀವಿಸಿದ್ದ ಕಾಲದ ಪ್ರತಿಫಲನದಂತೆ ಇಲ್ಲಿ ನೋಡಲಾಗಿದೆ. ಇದರಿಂದ ಆ ಕೃತಿಗಳ ಸಾರ್ವಕಾಲಿಕ ಆಯಾಮಗಳೇ ಕಣ್ಮರೆಯಾಗಿವೆ. ಕಾವ್ಯದ ರಸಾಭಿವ್ಯಕ್ತಿಯೇ ಕೇಂದ್ರವಾಗಿ ಕೃತಿಯ ಇತರ ಆಯಾಮಗಳೇ ಕಣ್ಮರೆಯಾಗಿವೆ. ಲೇಖಕರಿಗೆ ಹಳೆಗನ್ನಡ ಕಾವ್ಯದ ವ್ಯಾಪಕ ಓದಿದ್ದೂ, ಆ ಕಾವ್ಯಗಳ ತಾತ್ವಿಕತೆಯನ್ನು ಅರಿಯಲು ಸಾಧ್ಯವಾಗದಿರುವುದಕ್ಕೆ ಅವರು ನೆಚ್ಚಿಕೊಂಡ ಈ ದೃಷ್ಟಿಕೋನವೇ ಕಾರಣವಾಗಿದೆ. ಮುನ್ನುಡಿ ಬರೆದ ಹಿರಿಯ ವಿಮರ್ಶಕರಾದ ಜಿ.ಎಚ್.ನಾಯಕರು ಇಲ್ಲಿನ ಬರಹದ ಮಿತಿಗಳನ್ನು ಸೂಚ್ಯವಾಗಿಯಾದರು ಗುರುತಿಸಬಹುದಿತ್ತು. ಆದರೆ ಮುನ್ನುಡಿಯನ್ನು ಹಾರೈಕೆಗೆ ಸೀಮಿತಗೊಳಿಸಿದ್ದಾರೆ

**-ಸುಧಾಕರ ದೇವಾಡಿಗ**

**‘ಹೊಸ ಮನುಷ್ಯ’ ಓದುಗರೆಲ್ಲಗೂ**
**ಮಹಾನವಮಿಯ ಹಾರ್ದಿಕ ಶುಭಾಶಯಗಳು**



**–ಮಹಾಂತೇಶ ಓಶಿಮಠ**
**ಮತ್ತು ಕುಟುಂಬ**
ಕೈಗಾ (ಉ.ಕ.)

**‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ**
**ವಿಜಯದಶಮಿಯ ಹಾರ್ದಿಕ ಶುಭಾಶಯಗಳು**




**–ರೇಣುಕಾ ಎಂ. ಚಂದ್ರಶೇಖರಯ್ಯ**
**ಮತ್ತು ಕುಟುಂಬ**
**ಭದ್ರಾವತಿ**

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಗಾಂಧಿ ಜಯಂತಿಯ ಹಾರ್ದಿಕ ಶುಭಾಶಯಗಳು**



**–ಜಿ.ಕೆ. ಗೋವಿಂದರಾವ್**
ಮತ್ತು ಕುಟುಂಬ
ಬೆಂಗಳೂರು

## ತಿಂಗಳ ಕೊನೆಯ ಸಾಲುಗಳು



ನೀವು ನಿಮ್ಮನ್ನು ಕಂಡುಕೊಳ್ಳುವ ಅತ್ಯುತ್ತಮ ಮಾರ್ಗವೆಂದರೆ ನೀವು ನಿಮ್ಮನ್ನು ಇತರರ ಸೇವೆಯಲ್ಲಿ ಕಳೆದುಕೊಳ್ಳುವುದು.

–ಮಹಾತ್ಮ ಗಾಂಧಿ

**ಶುಭಾಶಯಗಳೊಂದಿಗೆ,**

**ವೈ. ಮಹೇಶ**
ಮತ್ತು ಕಟುಂಬ
ಮೈಸೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)